# ಅಧ್ಯಾಯ 1

# ಕ್ರಿಸ್ತನು, ಪ್ರವಾದಿಗಳು ಮತ್ತು ದೇವದೂತರಿಗಿಂತ ಶ್ರೇಷ್ಠನು

## (ಭಾಗ 1)

ಇಬ್ರಿಯದವರಿಗೆ ಪುಸ್ತಕದ ಸರಿಸಾಟಿಯಿಲ್ಲದ ಆರಂಭವು (1:1-2:4) ಕ್ರಿಸ್ತನನ್ನು ಆತನ ದೈವಿಕ ಸ್ವಭಾವ ಮತ್ತು ಮಹಿಮೆಯಲ್ಲಿ ಚಿತ್ರಿಸುತ್ತದೆ. ಖಂಡಿತವಾಗಿಯೂ, ಆತನು ದೇವದೂತರಿಗಿಂತ ಮತ್ತು ಹಿಂದಿನ ಕಾಲದ ಪ್ರವಾದಿಗಳಿಗಿಂತ ಶ್ರೇಷ್ಠನು. ತತ್ಪರಿಣಾಮವಾಗಿ, ಮಗನ ಮೂಲಕ ಅನುಗ್ರಹಿಸಲ್ಪಟ್ಟಿರುವ ಮಹಾ ರಕ್ಷಣೆಯನ್ನು ಒಬ್ಬನು ಅಲಕ್ಷಿಸುವದಾದರೆ ಆತನು ಶಾಶ್ವತವಾದ ನಾಶನದಲ್ಲಿ ಸೇರುವನು. ವಾಸ್ತವಿಕದಲ್ಲಿ, ಇಬ್ರಿಯದರವರಿಗೆ ಪುಸ್ತಕದ ಇಡೀ ಪ್ರಕರಣ ಗ್ರಂಥದ ರಚನೆಯಲ್ಲಿ ಎದ್ದು ಕಾಣುವ ಸಂಗತಿಯೆಂದರೆ ಹೊಸ ಒಡಂಬಡಿಕೆಯು ಎಲ್ಲಕ್ಕಿಂತ ಉನ್ನತದಲ್ಲಿರುತ್ತದೆ ಮತ್ತು ಹಳೆಯ ಒಡಂಬಡಕೆಯ ಸ್ಥಾನವನ್ನು ವಹಿಸಿಕೊಳ್ಳುತ್ತದೆ.

ಸಮುದ್ರದ ನೀರು ಅದರ ದಡಗಳನ್ನು ತುಂಬಿಕೊಳ್ಳುವ ರೀತಿಯಲ್ಲಿ ಕ್ರಿಸ್ತನ ವ್ಯಕ್ತಿತ್ವವು ಮೊದಲ ಮೂರು ಅಧ್ಯಾಯಗಳನ್ನು ತುಂಬಿಕೊಳ್ಳುತ್ತದೆ. ನಮ್ಮ ಕರ್ತನ ಶ್ರೇಷ್ಠತೆಯ ಕಾರಣದಿಂದ, ಈ ಯಾರಿಗೆ ಬರೆಯಲ್ಪಟ್ಟಿತೋ ಆ ಕ್ರೈಸ್ತರಿಗೆ ತಮ್ಮ ನಂಬಿಕೆಯಲ್ಲಿ ತಾಳ್ಮೆಯಿಂದಿರುವಂತೆ ಮತ್ತು ಸುವಾರ್ತೆಯನ್ನು ಅವರಿಂದ ಜಾರಿ (ತಪ್ಪಿ) ಹೋಗುವದಕ್ಕೆ ಬಿಡಬಾರದೆಂದು ಬೇಡಿಕೊಳ್ಳಲಾಗಿರುತ್ತದೆ (2:1-3). ಸಂದೇಶದಿಂದ ಜಾರಿ ಹೋಗುವದೆಂದರೆ ಸಂದೇಶಕನಿಂದಲೇ ಜಾರಿ ಹೋದಂತೆ, ಯಾಕೆಂದರೆ ಸಂದೇಶ ಮತ್ತು ಸಂದೇಶಕರನ್ನು ಬೇರ್ಪಡಿಸುವದಕ್ಕೆ ಸಾಧ್ಯವಿಲ್ಲ. ಲೇಖಕನ ಪ್ರಕಾರ, "ಕ್ರಿಸ್ತನು vs. ಸಿದ್ಧಾಂತ" ಎಂಬುದು ಇಲ್ಲವೇ ಇಲ್ಲ, ಯಾಕೆಂದರೆ ಕ್ರಿಸ್ತನು ಮತ್ತು ಆತನ ಸಿದ್ಧಾಂತ ಬೇರ್ಪಡಿಸಲಾಗದು. ಆತನ ಸಂದೇಶವು ಸಮರ್ಪಕವಾಗಿ ಶ್ಲಾಘಿಸಲ್ಪಡಬೇಕೆಂದರೆ ಆ ಸಂದೇಶಕನಿಗೆ ಅತ್ಯಂಥ ಮರ್ಯಾದೆ ಸಲ್ಲಿಸಬೇಕು.

ಈ ಆರಂಭದ ವಾಕ್ಯಸಾಲುಗಳಲ್ಲಿ, ಮೋಶೆ ಮತ್ತು ಪ್ರವಾದಿಗಳ ಮೂಲಕ ಬಂದ ಪ್ರಕಟನೆಗಳಿಗಿಂತಲೂ ಮಗನ ಮೂಲಕ ಬಂದ ಪ್ರಕಟನೆಯು ಸಂಪೂರ್ಣ ಶ್ರೇಷ್ಠವಾದದ್ದೆಂಬುದನ್ನು ಲೇಖಕನು ತೋರಿಸಿ ಕೊಡುತ್ತಾನೆ. ಯೇಸುವಿನ ಮೂಲಕ ಬಂದ ದೇವರ ಪ್ರಕಟನೆಯು ಕಡೇ ವಾಕ್ಯ, ಯಾವದರ ಕಡೆಗೆ ಹಳೆಯ ಒಡಂಬಡಿಕೆಯ ಬೇರೆ ಎಲ್ಲಾ ಸ್ವರಗಳು ಬೆರಳು ತೋರಿಸಿದವೋ ಆ ದೇವರಿಂದ ಬಂದ ಅಂತಿಮ ಪ್ರಕಟನೆಯಾಗಿರುತ್ತದೆ. ಮಗನಿಗಿಂತ ಮುಂಚೆ ಕೊಡಲ್ಪಟ್ಟ ಯಾವ ಸಂದೇಶವೂ ಕ್ರಿಸ್ತನ ಮೂಲಕವಾಗಿ ತಂದೆಯಾದ

ದೇವರ ಈ ಅಂತಿಮ ಸ್ವರದಷ್ಟು ನಮ್ಮ ಗಮನವನ್ನು ಸೆರೆ ಹಿಡಿಯುವಂಥದಾಗಿರಲಿಲ್ಲ.

ಆದದರಿಂದ, ಹೊಸ ಒಡಂಬಡಿಕೆಯ ನಂತರದಲ್ಲಿ ಕಾಣಿಸಿಕೊಂಡ ಬೇರೆ ಯಾವದೇ ಧಾರ್ಮಿಕ ಸಂದೇಶವನ್ನು "ದೈವಿಕ" ಎಂದು ಕರೆಯುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಲೇಖಕನು ಸೂಚ್ಯಾರ್ಥದಲ್ಲಿ ತೋರಿಸಿ ಕೊಡುತ್ತಾನೆ. ಕ್ರಿಸ್ತನ ಮೂಲಕವಾಗಿ ಕೊಡಲ್ಪಟ್ಟಿರುವ ಈ ಅಂತಿಮ ಪ್ರಕಟನೆಯನ್ನು ಪರಲೋಕದಿಂದ ಬಂದ ಒಬ್ಬ ದೇವದೂತನಿಂದ ಸಹ ತಿದ್ದಲ್ಪಡುವದಕ್ಕೆ ಸಾಧ್ಯವಿಲ್ಲ (ಗಲಾತ್ಯ 1:6-9). ಇದು "ಎಲ್ಲಾ ಕಾಲಕ್ಕಾಗಿ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ" ಆಗಿತ್ತು (ಯೂದನು 3; NLT). ದೇವರು ಹಳೆಯ ಒಡಂಬಡಿಕೆಯ ಕಾಲಗಳಲ್ಲಿ ಪ್ರವಾದಿಗಳ ಮುಖಾಂತರ ಭಾಗಭಾಗವಾಗಿ ಕೊಟ್ಟಂತಹ ಪ್ರಕಟನೆಗೆ ಕ್ರಿಸ್ತನ ಪ್ರಕಟನೆಯು ವಿರುದ್ಧ ಹೋಲಿಕೆಯಲ್ಲಿರುತ್ತದೆ. "ಹಂತಹಂತವಾದ ಪ್ರಕಟನೆ"ಯು ಹಳೆಯ ಒಡಂಬಡಿಕೆ ಕಾಲದುದ್ದಕ್ಕೂ ಮತ್ತು ಹೊಸ ಒಡಂಬಡಿಕೆಯ ಕಾಲದೊಳಗೂ ಸಂಭವಿಸಿತು ಮತ್ತು, ಆದರೆ ಅದು ಕ್ರಿಸ್ತನೊಂದಿಗೆ ಅಂತ್ಯಗೊಂಡಿತು.

ಕ್ರಿಸ್ತನ ಪ್ರಕಟನೆಯಲ್ಲಿ ಆತನ ಅಪೊಸ್ತಲರ ಬರಹಗಳು ಮತ್ತು ಹೊಸ ಒಡಂಬಡಿಕೆಯ ಕಾಲದ ಇತರ ಪ್ರೇರಿತ ಮನುಷ್ಯರ ಬರಹಗಳನ್ನು ಸೇರಿದ್ದವು. ಆತನು ಅವರನ್ನು ಕಳುಹಿಸಿ ಕೊಟ್ಟನು ಮತ್ತು ಅವರನ್ನು ಪ್ರೇರಿಸುವದಕ್ಕೆ ಪವಿತ್ರಾತ್ಮನನ್ನು ಕಳುಹಿಸಿ ಕೊಟ್ಟನು; ಆದದರಿಂದ, ಅವರನ್ನು ಸೇರಿಸಿಕೊಳ್ಳುವವನು ಕ್ರಿಸ್ತನನ್ನು ಸೇರಿಸಿಕೊಳ್ಳುವವನಾಗುತ್ತಾನೆ (ಲೂಕ 10:16). ಕ್ರಿಸ್ತನ ಮೂಲಕ, ಈ ಲೋಕವು ನೆಲೆಯಾಗಿರುವ ತನಕ ಅದರ ಸ್ಥಾನವನ್ನು ಬೇರೆ ಯಾವದೂ ವಹಿಸಿಕೊಳ್ಳಲಾದಂತಹ "ಒಂದು ಉತ್ತಮವಾದ" ಅಂತಿಮವಾದದ್ದನ್ನು ಹೊಂದಿದ್ದೇವೆ.

## ಕ್ರಿಸ್ತನ ಪ್ರವಾದಿಗಳಿಗಿಂತ ಶ್ರೇಷ್ಠನು (1:1-3)

### ದೇವರು ಮಾತಾಡಿದ್ದಾನೆ (1:1, 2a)

**[1]ಪುರಾತನಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ [2a]ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ.**

**ವಚನ 1.** ಈ ಮಹಾನ್ ಪುಸ್ತಕವು ದೈವಿಕ ಪ್ರಕಟನೆಯ ಅತ್ಯಂಥ ಶ್ರೇಷ್ಠವಾದ ಏಕ ವಾಸ್ತವಾಶವನ್ನು ಘೋಷಿಸುವ ಮೂಲಕ ಆರಂಭಗೊಳ್ಳುತ್ತದೆ: **ದೇವರು . . . ಮಾತಾಡಿದ್ದಾನೆ**. ದೇವರು ಮನುಷ್ಯನ ಸಂಗಡ ಬೈಬಲಿನಲ್ಲಿನ ತನ್ನ ವಾಕ್ಯದ ಮೂಲಕ ಮತ್ತು ತನ್ನ ಮಗನ, ಯೇಸುವಿನ ಮುಖಾಂತರ ಮಾತಾಡಿದ್ದಾನೆ, ಈ ಸತ್ಯವು ನಂಬಿಕೆ ಪ್ರತಿಯೊಂದು ಹೃದಯಭಾಗದಲ್ಲಿರುತ್ತದೆ. ದೇವರು ನಮ್ಮ ಸಂಗಡ ಮಾತಾಡಿದ್ದಾನೆಂಬುದನ್ನು ತಿಳಿಯುವದು ನಮ್ಮ ಆತ್ಮಗಳಿಗೆ ಎಷ್ಟು ಪ್ರೋತ್ಸಾಹಕರವಾಗಿ ರುತ್ತದೆ! ಸಕಲ ಸತ್ಯದ ಮತ್ತು ಸಕಲ ಪ್ರಕಟನೆಯ ಅಂತಿಮ ಮೂಲನಾಗಿರುವಾತನು ನಮ್ಮೊಂದಿಗೆ ಸಂವಹನ ಮಾಡಿದ್ದಾನೆ. "ದೇವರು" (θεός, *theos*) ಎಂಬ ಪದದ ಮುಂಚೆ ನಿರ್ದಿಷ್ಟ ಗುಣವಾಚಿ (ὅ, *ho*) ಇರುತ್ತದೆ, ವಾಚಕರು ಹಳೆಯ ಒಡಂಬಡಿಕೆಯ ಬರಹಗಳಿಂದ ತಿಳಿದುಕೊಂಡಿದ್ದ ಮತ್ತು ಈಗಾಗಲೆ ಅವರು ಆರಾಧನೆಯಲ್ಲಿ ಅರಿಕೆ ಮಾಡುತ್ತಿದ್ದ ಅದೇ "ದೇವರು" ಆಗಿದ್ದನು ಎಂಬ ಸೂಚ್ಯಾರ್ಥವನ್ನು ಕೊಡಬಹುದಾಗಿದೆ.

Theos ಎಂಬ ಪದವು "ಮಾನವ ವ್ಯವಹಾರಗಳಲ್ಲಿ ಅಸ್ವಾಭಾವಿಕವಾದ ನಿಯಂತ್ರಣವನ್ನು

ಚಲಾಯಿಸುವ ಒಬ್ಬ ಅನುಭವಾತೀತ ಜೀವಿ . . ." ಎಂದರ್ಥವನ್ನು ಕೊಡುತ್ತದೆ.[1] ದೇವರುಗಳು ಸಕಲ ಕಾರ್ಯಗಳನ್ನು ಅವುಗಳ ಸೂಕ್ತವಾದ ಸ್ಥಾನದಲ್ಲಿ ಸ್ಥಿರಪಡಿಸಿರುತ್ತವೆಂದು ಭಾವಿಸಲಾಗುತ್ತದೆ.[2] ಹಳೆಯ ಒಡಂಬಡಿಕೆಯಲ್ಲಿ ದೇವರು ಎಲೋಹಿಮ್ (אֱלֹהִים, *'elohim*) ಎಂದು ಪರಿಚಿತನಿದ್ದನು, ಶಕ್ತಿಶಾಲಿಯಾದವನು, ಅಥವಾ ಸಂಪೂರ್ಣ ಅಧಿಕಾರವುಳ್ಳವನು ಎಂದರ್ಥ. ಅನಂತರದಲ್ಲಿ ಆತನು ತನ್ನನ್ನು ಮೋಶೆಗೆ "ಯೆಹೋವ" (יהוה, *YHWH*) "ಇರುವನು," ಅಥವಾ "ಸಂಪೂರ್ಣ ಜೀವಿ" ಎಂದು ಪ್ರಕಟಿಸಿಕೊಂಡನು, ಅದರರ್ಥವು ಆತನು ನಿತ್ಯನಾದ "ಇರುವಾತನು" ಮತ್ತು ಮಿಕ್ಕ ಎಲ್ಲವೂ ಆತನಿಂದ ಬಂದದ್ದಾಗಿದೆ (ವಿಮೋಚನಕಾಂಡ 3:14; 6:3) ಎಂಬದೆ.

**ಪುರಾತನಕಾಲದಲ್ಲಿ ಎಂಬುದು** "ಗತಕಾಲದಲ್ಲಿ" (KJV) ಎಂದಾಗಿದೆ. ಈ ಪದಗುಚ್ಛದ ಅಕ್ಷರಶಃ ಅರ್ಥವು "ಹಳೆಯ" ಅಥವಾ "ಪ್ರಾಚೀನ ಕಾಲಗಳು" ಎಂದಾಗಿರುತ್ತದೆ. ನಾವು ಈ ಎರಡು ಪದಗಳ ಪದಗುಚ್ಛವನ್ನು ಇಡೀ ಹಳೆಯ ಒಡಂಬಡಿಕೆಯ ಕಾಲಾವಧಿಯೆಂದು ಯೋಚಿಸಬಹುದು.

ಯೆಹೂದ್ಯರು ಮಲಾಕಿಯ ಪುಸ್ತಕಕ್ಕಿಂತ ತಡವಾಗಿ ಬರೆಯಲ್ಪಟ್ಟ ಯಾವದೇ ಪುಸ್ತಕವನ್ನು ಕ್ಯಾನೋನಿಕಲ್ (ಅಧಿಕೃತವಾಗಿ ಅಂಗೀಕರಿಸಲ್ಪಟ್ಟ) ಪುಸ್ತಕವೆಂದು ಸ್ವೀಕರಿಸಿಕೊಳ್ಳಲಿಲ್ಲ. ಉದಾಹರಣೆಗೆ, ಅವರು Apocrypha (ಪ್ರೇರಿತವಲ್ಲದ) ಬರಹಗಳನ್ನು ತಿರಸ್ಕರಿಸಿದರು.[3]

ಹಳೆಯ ಒಡಂಬಡಿಕೆಯ **ಪ್ರವಾದಿಗಳು** ದೇವರ ನಿರ್ದೇಶನದಂತೆ ಬರೆದರು. ಅವರು ಪವಿತ್ರಾತ್ಮನಿಂದ ಪ್ರೇರಿತರಾಗಿದ್ದರು (2 ಪೇತ್ರ 1:20, 21), ಅವರು ಬರೆದ ಹಾಗೆ ಆತನ ಮಾರ್ಗದರ್ಶನದ ವ್ಯಾಪ್ತಿಯಲ್ಲೇ ನಡಿಸಲ್ಪಟ್ಟರು. ತಾವು ಏನು ಮಾತಾಡುತ್ತಿದ್ದಾರೆಂಬುದು ಯಾವಾಗಲೂ ಅವರಿಗೆ ಅರ್ಥವಾಗುತ್ತಿರಲಿಲ್ಲ, ಆದರೆ ತಾವು ನುಡಿದ ಪ್ರವಾದನೆಗಳ ಛಾಯೆಯನ್ನು ಯಾವ ಕಾಲಾವಧಿಯು ಹೊಂದಿರುತ್ತದೆಂಬುದನ್ನು ನೋಡುವದಕ್ಕೆ ತಾವು ಬರೆದಿದ್ದನ್ನು ಶ್ರದ್ಧೆಯಿಂದ ಹುಡುಕುತ್ತಿದ್ದರು ಅಥವಾ ಅಧ್ಯಯನ ಮಾಡುತ್ತಿದ್ದರು (1 ಪೇತ್ರ 1:10, 11).

ವಿವಿಧ ಭಾವಾನುವಾದಗಳ ಮತ್ತು ಆವೃತ್ತಿಗಳ ಸಂಗ್ರಹಣವಾಗಿರುವ Amplified Bible (AB) ನಲ್ಲಿ 1ನೇ ವಚನವು ಹೀಗಿರುತ್ತದೆ: "ಅನೇಕ ಪ್ರತ್ಯೇಕ ಪ್ರಕಟನೆಗಳಲ್ಲಿ [ಅವುಗಳಲ್ಲಿ ಪ್ರತಿಯೊಂದು ಸತ್ಯದ ಒಂದು ಭಾಗವನ್ನು ಮುಂದಿಟ್ಟವು] ಮತ್ತು ವಿವಿಧ ದಾರಿಗಳಲ್ಲಿ ಗತದ ಬಗ್ಗೆ [ನಮ್ಮ] ಮೂಲಪಿತೃಗಳೊಂದಿಗೆ ಪ್ರವಾದಿಗಳಲ್ಲಿ ಮತ್ತು ಮೂಲಕ ಮಾತಾಡಿದನು." Thomas G. Long ಈ ವಚನದ ಕಡೇ ಭಾಗವನ್ನು "ಅನೇಕ ತುಣುಕುಗಳಲ್ಲಿ ಮತ್ತು ಅನೇಕ ಶೈಲಿಗಳಲ್ಲಿ" ಎಂದು ಅನುವಾದಿಸುತ್ತಾನೆ.[4] ಅಲ್ಲದೆ ಈ ಪದಗುಚ್ಛವು "ನಾನಾ ಸಮಯಗಳಲ್ಲಿ" (KJV), "ವಿವಿಧ ಕಾಲಗಳಲ್ಲಿ ಮತ್ತು ವಿವಿಧ ರೀತಿಗಳಲ್ಲಿ" (NKJV), "ಅನೇಕ ಕಾಲಗಳಲ್ಲಿ ಮತ್ತು ಬಗೆಬಗೆಯ ರೀತಿಯಲ್ಲಿ" (NIV), ಮತ್ತು "ಅನೇಕ ವಿಧವಾದ ಮಿನುಗುನೋಟಗಳಲ್ಲಿ" (Phillips) ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ.

ಕ್ರಿಸ್ತನ ಬರೋಣಕ್ಕೆ ಮುಂಚೆ, ದೇವರ ನಿತ್ಯವಾದ ಶಾಸ್ತ್ರಗಳು ಭಾಗಭಾಗವಾದ ಪ್ರಕಟನೆಗಳಲ್ಲಿ ಕೊಡಲ್ಪಟ್ಟಿದ್ದವು. Πολυμερῶς (*polumerōs*) ಎಂದರೆ "ಅನೇಕ ಭಾಗಗಳು," "ಪಾಲುಗಳು," ಅಥವಾ "ತುಣುಕುಗಳು" ಎಂದರ್ಥವಾಗಿದೆ. ಹಾಗಾದರೆ ಯಾವದು ಭಾಗಗಳಾಗಿ, ತುಣುಕುಗಳಾಗಿ, ಅಥವಾ ತುಂಡುಗಳಾಗಿ ಕೊಡಲ್ಪಟ್ಟಿತೋ ಅದು ಅವಶ್ಯಕವಾಗಿ ಅಸಂಪೂರ್ಣವಾದದ್ದು ಎಂದಾಗುತ್ತದೆ; ಆದರೆ, Brooke Foss Westcottನು ಗಮನಕ್ಕೆ ತರುವ ಪ್ರಕಾರ, "ಮಗನಾದ ಕ್ರಿಸ್ತನಲ್ಲಿ ತೋರಿ ಬಂದ ಪ್ರಕಟನೆಯು, ಸತ್ವ ಮತ್ತು ರೂಪ

ಎರಡರಲ್ಲಿಯೂ ಪರಿಪೂರ್ಣವಾಗಿದೆ."[5] ಇದು ಆತ್ಮೀಕ ವರಗಳು ಕೊಡಲ್ಪಟ್ಟಿರುವ ಉದ್ದೇಶದೊಂದಿಗೆ ಸಾಮರಸ್ಯ ಹೊಂದಿರುತ್ತದೆ, ಅದು "ಅಪೂರ್ಣವಾಗಿ" ಪ್ರಕಟನೆಯನ್ನು ಅನುಗ್ರಹಿಸುವದಾಗಿತ್ತು (1 ಕೊರಿಂಥ 13:8-10). ಈ ವಾಕ್ಯಭಾಗಕ್ಕೆ ABಯು ನೀಡಿರುವ ಭಾವಾನುವಾದವು ಸಹ ಪ್ರವಾದಿಗಳ ಪ್ರೇರಣೆಯ ಬಗ್ಗೆ ಉದಾತ್ತ ದೃಷ್ಟಿಕೋನ ಹೊಂದಿರುವದಾಗಿ – ದೇವರು ಅವರ ಮೂಲಕ ಮನುಷ್ಯರೊಂದಿಗೆ ಮಾತಾಡಿದನೆಂದು – ಹೇಳಿಕೊಳ್ಳುತ್ತದೆ. F. F. Bruceನು ಅದೇ ಸತ್ಯವನ್ನು ಈ ವಿಧವಾಗಿ ವ್ಯಕ್ತಪಡಿಸುತ್ತಾನೆ: "ಯಾಜಕರು ಮತ್ತು ಪ್ರವಾದಿಗಳು, ಮಹರ್ಷಿಗಳು ಮತ್ತು ಹಾಡುಗಾರರು ಅವರ ಹಲವರು ದಾರಿಗಳಲ್ಲಿ ಆತನ ವಕ್ತಾರರಾಗಿದ್ದರು; ಆದಾಗ್ಯೂ ಅನುಕ್ರಮವಾಗಿ ನಡೆದ ಎಲ್ಲಾ ಕ್ರಿಯೆಗಳು ಮತ್ತು ಕ್ರಿಸ್ತನ ಬರೋಣಕ್ಕೆ ಮುಂಚೆ ಇದ್ದಂತಹ ವಿವಿಧ ರೀತಿಯ ಪ್ರಕಟನೆಯ ಮಾರ್ಗಗಳು ದೇವರು ಹೇಳಬೇಕಾದದ್ದರ ಪರಿಪೂರ್ಣತೆಗೆ ಹೊಂದಿಕೆಯಾಗಲಿಲ್ಲ."[6]

ಹಾಗಾದರೆ ಸತ್ಯವು, ಇದಾಗಿದೆ: ದೇವರು ಹಳೆಯ ಒಡಂಬಡಿಕೆಯ ಶಾಸ್ತ್ರವನ್ನು ಕೊಟ್ಟ ವೇಳೆ **ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದನು**. ಆತನು ಕೆಲವು ಸಾರಿ ಯಾಜಕರ ಮೂಲಕ, ಕನಸುಗಳು, ಘಟನೆಗಳು, ಮತ್ತು ಇತಿಹಾಸದ ಮೂಲಕ ಮಾತಾಡಿದನು. ಕೆಲವು ಸಾರಿ ಪ್ರವಾದಿಯು ಒಂದು ಸಂದೇಶವನ್ನು ಬರೆಯುತ್ತಿದ್ದನು, ಮತ್ತು ಇನ್ನು ಕೆಲವು ಸಾರಿ ದೇವರು ಪ್ರವಾದಿಯ ಮೂಕಾಭಿನಯದ ಮೂಲಕ ಸಹ ಮಾತಾಡಿದನು.

ದೇವರು ಇಸ್ರಾಯೇಲ್ಯರ ಅಥವಾ ಮೂಲಪಿತೃಗಳ **(ಪಿತೃಗಳ)** ಸಂಗಡ ಒಂದು ದೀರ್ಘವಾದ, ನಿರಂತರ ಸಂಭಾಷಣೆಯಲ್ಲಿ ಮಾತಾಡಲಿಲ್ಲ, ಆದರೆ ಬೇರೆ ಬೇರೆ ಕಾಲಗಳಲ್ಲಿ, ಸ್ಥಳಗಳಲ್ಲಿ, ಮತ್ತು ಭಾಗಭಾಗವಾಗಿ ಮಾತಾಡಿದನು. "ದೈವೋಕ್ತಿಗಳು ವಿರಳವಾಗಿದ್ದ" ಮತ್ತು "ದೇವದರ್ಶನಗಳು ಅಪರೂಪವಾಗಿದ್ದ" ಕಾಲಗಳು ಸಹ ಇದ್ದವು (1 ಸಮುವೇಲ 3:1). ಹಾಗಿದ್ದರೂ, ಅದೆಲ್ಲವನ್ನು ಒಂದುಗೂಡಿಸಿದಾಗ, ಅದು ಸಾಮರಸ್ಯವುಳ್ಳ ಒಂದು ಇಡೀ ಪ್ರಕಟನೆಯಾಯಿತು. ಏಕೆ? ಏಕೆಂದರೆ ಅದು ಒಬ್ಬನೇ ದೇವರಿಂದ ಮಾತಾಡುವ ಅದೇ "ಪವಿತ್ರಾತ್ಮ"ನಿಂದಲೇ ಪ್ರೇರಿತವಾಗಿತ್ತು. ಆದುದರಿಂದ, ಹಳೆಯ ಮತ್ತು ಹೊಸ ಒಡಂಬಡಿಕೆಗಳು ಮನುಷ್ಯರಿಗಾಗಿ ಕೊಡಲ್ಪಟ್ಟಿರುವ ಒಂದೇ ಸಂಬಂಧವುಳ್ಳ ಪ್ರಕಟನೆಯಾಗಿದೆ, ಮತ್ತು ಎರಡು ಒಡಂಬಡಿಕೆಗಳಿವೆಯಾದರೂ "ಎರಡು ಪ್ರಕಟನೆಗಳು" ಎಂದು ಹೇಳುವ ಅಗತ್ಯವಿರುವದಿಲ್ಲ.

**ವಚನ 2a. ಈ ಅಂತ್ಯದಿನಗಳಲ್ಲಿ** ಅಥವಾ "ಈ ದಿನಗಳ ಅಂತ್ಯದಲ್ಲಿ" (ASV) ಎಂಬ ಪದಗುಚ್ಛದವು "ಇತ್ತೀಚೆಗೆ" ಎಂಬುದಕ್ಕಿಂತಲೂ ಹೆಚ್ಚಿನ ಅರ್ಥವನ್ನು ಕೊಡುತ್ತದೆ. ಅಂತಿಮ ಯುಗದ ಆರಂಭವು ಬಂದಿದೆ ಎಂಬುದನ್ನು ಈ ಪದಗುಚ್ಛವು ಸೂಚಿಸುತ್ತದೆ. ಅಪೊಸ್ತಲಿಕ ಬರಹಗಾರರು ತಮ್ಮ ಕಾಲವನ್ನು "ಕಡೇ ದಿನಗಳು" (ಅಪೊಸ್ತಲರ ಕೃತ್ಯಗಳು 2:17; ಯಾಕೋಬ 5:3), "ಅಂತ್ಯಕಾಲದಲ್ಲಿ" (1 ಪೇತ್ರ 1:20), ಅಥವಾ "ಕಡೇ ಕಾಲದಲ್ಲಿ" (ಯೂದನು 18) ಎಂದು ಮಾತಾಡಿದರು. ಸ್ಪಷ್ಟವಾಗಿ, ನಾವು ಈಗ ಜೀವಿಸುತ್ತಿರುವ ಯುಗವು ಕಡೇ ಯುಗವಾಗಿದೆ. ಯೇಸು ಪರಲೋಕಕ್ಕೆ ಹಿಂದಿರುಗಿ ತನ್ನ ಪವಿತ್ರಾತ್ಮನನ್ನು ಕಳುಹಿಸಿ ಕೊಟ್ಟ ಕಾಲದಿಂದಲೂ ಇದು ನಮ್ಮೊಂದಿಗಿರುತ್ತದೆ. ಹೇಳಲ್ಪಟ್ಟಿರುವ ಈ ಅಂತ್ಯಕಾಲವು ಯೇಸುವಿನ ಪುನರುತ್ಥಾನ ನಂತರದಲ್ಲಿನ ಪಂಚಾಶತ್ತಮ ದಿನದಂದು ಆರಂಭಗೊಂಡಿತು ಮತ್ತು ಆತನ ಎರಡನೆಯ ಬರೋಣದ ತನಕ ಮುಂದುವರೆಯುವದು.

ಆದುದರಿಂದ, ಇಲ್ಲಿ ಬಳಸಲಾಗಿರುವ "ಅಂತ್ಯಕಾಲ" ಎಂಬ ಮಾತು ಮೆಸ್ಸೀಯನ ಯುಗವನ್ನು ಸೂಚಿಸುತ್ತದೆ; ಅದರ ನಂತರ ಯಾವದೇ ಸಹಸ್ರವರ್ಷಾಡಾಳಿತವು ಬರುವದಿಲ್ಲ,

ಹಾಗಿಲ್ಲವಾದರೆ ಇವುಗಳು ಕಡೇ ದಿನಗಳಾಗಿರಲಾರವು. Jack P. Lewisನು ಗಮನಕ್ಕೆ ತರುವದೇನೆಂದರೆ, "ಈ" ಅಂತ್ಯದಿನಗಳಲ್ಲಿ ಎಂದು ಹೇಳುವ ಮೂಲಕ ಲೇಖಕನು "ದಿನಗಳನ್ನು ತನ್ನ ಸ್ವಂತ ಕಾಲದೊಂದಿಗೆ ಗುರುತಿಸುತ್ತಿದ್ದಾನೆ."[7] ಇಲ್ಲಿ ವಿರುದ್ಧ ಹೋಲಿಕೆಯು ದೇವರು ಪ್ರವಾದಿಗಳ ಮುಖಾಂತರ ಮಾತಾಡಿದ *ಪುರಾತನಕಾಲ,* ಮತ್ತು *ಈ ಅಂತ್ಯದಿನಗಳು* ಎಂಬುದರ ನಡುವೆಯಾಗಿದೆ, ಒಂದು "ಪೂರ್ವಭಾವಿ" ಮತ್ತು ಇನ್ನೊಂದು "ಅಂತಿಮ."[8] ಅಂತಿಮ ಸಂದೇಶವು ಕಟ್ಟಕಡೆಯದ್ದು ಮತ್ತು ಸರ್ವಶಕ್ತನಾದ ದೇವರಿಂದ ಬಂದ ನಿರ್ಣಾಯಕ ವಾಕ್ಯವಾಗಿದೆ. ಆದುದರಿಂದ, ನಾವು ಮತ್ತೊಂದನ್ನು ನಿರೀಕ್ಷೆ ಮಾಡಬಾರದು. ಹೊಸ ಒಡಂಬಡಿಕೆಯು, "ಹಳೆಯದಂತಲ್ಲದೆ, ಅಂತಿಮ ಮತ್ತು ಶಾಶ್ವತವಾದದ್ದು ಯಾಕೆಂದರೆ ಅದರ ನಾಯಕತ್ವ, ಅದರ ಯಾಜಕತ್ವ, ಮತ್ತು ಅದರ ರಾಜ್ಯವು ವಿಶಿಷ್ಟವಾಗಿ ನಿತ್ಯ ಮಗನಾಗಿರುವಾತನಿಗೆ ಸೇರಿದವುಗಳಾಗಿವೆ."[9] ಕ್ರಿಸ್ತನ ಮೂಲಕ ಕೊಡಲ್ಪಟ್ಟಿರುವ ಪ್ರಕಟನೆಯ ಬಳಿಕ ಒಂದು ಪ್ರತ್ಯೇಕ ಸ್ವರೂಪದ ಹೊಸ ಪ್ರಕಟನೆಗೆ ಅವಕಾಶವೇ ಇರುವದಿಲ್ಲ. ದೇವರು ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳ ಕರ್ತೃ ಆಗಿದ್ದಾನೆ, ಆದರೆ ಆತನು ಅಂತಿಮ ಒಡಂಬಡಿಕೆಯ ವಿಷಯದಲ್ಲಿ ಒಂದು ವ್ಯತ್ಯಾಸವಾದ ರೀತಿಯಲ್ಲಿ ಮಾತಾಡಿದನು.

ದೇವರು ಪ್ರವಾದಿಗಳ ಮತ್ತು ಮಗನ ಇಬ್ಬರ ಮೂಲಕ ಮಾತಾಡುವದನ್ನು ಸೂಚಿಸಲು ಗ್ರೀಕ್ ಅನಿಶ್ಚಿತ ಭೂತಕಾಲರೂಪವಾದ λαλέω (*laleō*) ಎಂಬುದನ್ನು ಬಳಸುವ ಮೂಲಕ, ದೇವರು ಇನ್ನು ಮೇಲೆ ಮಾತಾಡುತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. "ದೈವಿಕ ಪ್ರಕಟನೆಯ ಕಥೆಯು ಕ್ರಿಸ್ತನ ತನಕ ಹಂತಹಂತವಾದ ಪ್ರಗತಿಯಾಗಿದೆ, ಆದರೆ ಆತನ ನಂತರದಲ್ಲಿ ಯಾವದೇ ಪ್ರಗತಿಯಿರುವದಿಲ್ಲ"[10] ಎಂದು Bruceನು ಸರಿಯಾಗಿಯೇ ಹೇಳಿರುತ್ತಾನೆ. ಇದು ಹೊಸ ಒಡಂಬಡಿಕೆಯನ್ನು ದೇವರು ಮನುಷ್ಯರಿಗೆ ಕೊಟ್ಟಿರುವ ಅಂತಿಮ ಪ್ರಕಟನೆಯೆಂದು ನಿರ್ಧರಿಸುವದರಲ್ಲಿ ಅತ್ಯಂಥ ಮಹತ್ವಪೂರ್ಣವಾಗಿರುತ್ತದೆ. ಈ ಸಾರಭೂತವಾದ ಸತ್ಯವನ್ನು ನಿರಾಕರಿಸುವದೆಂದರೆ ಯಾರಾದರೊಬ್ಬರಿಗೆ ನಮಗೊಂದು ಹೊಸ ಬೈಬಲ್ ಕೊಡುವದಕ್ಕೆ ಅಥವಾ ಕನಿಷ್ಠ ನಮ್ಮ ಬಳಿಯಲ್ಲಿ ಈಗಾಗಲೆ ಇರುವದಕ್ಕೆ ಹೆಚ್ಚಿನದನ್ನು ಕೂಡಿಸುವದಕ್ಕೆ ಸಾಮರ್ಥ್ಯವಿರುತ್ತದೆಂದು ಹೇಳಿಕೊಂಡಂತೆ ಆಗುವದು!

ಗತಕಾಲದ ಸ್ವರಗಳು ಯೇಸುವಿಗಿಂತ ಕಡಿಮೆಯಾದವುಗಳೆಂದು ತೋರಿಸಲ್ಪಟ್ಟಿರುತ್ತವೆ. ಇದರಲ್ಲಿ ದೇವದೂತರು (1:4-2:18), ಮೋಶೆ (3:1-4:7), ಯೆಹೋಶುವ (4:8-13), ಮತ್ತು ಅರೋನನ ವಂಶದ ಯಾಜಕರು (4:14-7:28) ಸೇರಿರುತ್ತಾರೆ. ಲೇಖಕನು ಮಾನವ ಪ್ರತಿನಿಧಿಗೆ ಅವಕಾಶ ಕೊಡುತ್ತಾನೆ, ಆದರೆ ಹಳೆಯ ಒಡಂಬಡಿಕೆಯಲ್ಲಿ ನಿಜವಾಗಿ ಮಾತಾಡಿದವನು ದೇವರೇ ಆಗಿದ್ದಾನೆ (ನೋಡಿರಿ 3:7; ಕೀರ್ತನೆ 95:7ರಿಂದ ಉಲ್ಲೇಖಿಸಲ್ಪಟ್ಟದ್ದು). ಯೇಸು ಹಳೆಯ ಒಡಂಬಡಿಕೆಯ ವಾಕ್ಯಭಾಗದ ಬಗ್ಗೆ ಮಾತಾಡುತ್ತಾ "ದೇವರು ನಿಮಗೆ ನುಡಿದದ್ದನ್ನು ನೀವು ಓದಲಿಲ್ಲವೇ" ಎಂದು ಹೇಳುವ ಮೂಲಕ ಪ್ರೇರಣೆಯ ಕುರಿತು ಇದೇ ಉನ್ನತ ಅಭಿಪ್ರಾಯವನ್ನು ಹೊಂದಿದ್ದನು (ಮತ್ತಾಯ 22:31, 32). ಅಲ್ಲದೆ, ಯೇಸು ಶಾಸ್ತ್ರಗಳ ಜೀವಿಸುವ ಶಕ್ತಿಯನ್ನು ಕುರಿತು ಯೋಹಾನ 10:35ರಲ್ಲಿ ತೋರಿಸಿ ಕೊಡುತ್ತಾ ಹೀಗೆ ಹೇಳುತ್ತಾನೆ, "ದೇವರ ವಾಕ್ಯವನ್ನು ಹೊಂದಿದವರನ್ನು (ಶಾಸ್ತ್ರವು ಸುಳ್ಳಾಗಲಾರದಷ್ಟೆ)." ದೇವರ ವಾಕ್ಯವು ಸದಾಕಾಲವೂ ಉಳಿಯುವಂಥದು. ಅದು ಯಾವಾಗಲೂ ಅನ್ವಯವಾಗುಂಥದು ಮತ್ತು ಪರಿಣಾಮಕಾರಿಯಾದದ್ದು.

ದೇವರು ಹಳೆಯ ಒಡಂಬಡಿಕೆಯಲ್ಲಿ ಹೇಳಿದ್ದನ್ನು ಈ ಪುಸ್ತಕದ ಲೇಖಕ ಹಾಗೂ ಆದಿ ಕ್ರೈಸ್ತರು LXX ನಿಂದ ಓದಿದ್ದರು. ಈ ವಾಸ್ತವಾಂಶವು ತೋರಿಸುವದೇನೆಂದರೆ ಒಂದು ಬೈಬಲ್

ವಾಕ್ಯಭಾಗವು ಸಮರ್ಪಕವಾಗಿ ಅನುವಾದಿಸಲ್ಪಡುವದಾದರೆ ಅದನ್ನು ದೇವರು ತನ್ನ ಜನರು ಹಾಗೂ ಲೋಕದೊಂದಿಗೆ ಮಾತಾಡುವದೆಂದು ಕಾಣತಕ್ಕದ್ದು. ಹೇಗೂ, ಈ ಅಭಿಪ್ರಾಯವು ಅನುವಾದದ ಪ್ರಕ್ರಿಯೆ ಅಥವಾ ಯಾವದೇ ಆಧುನಿಕ ಅಥವಾ ಪ್ರಾಚೀನ ಆವೃತ್ತಿಗಳು ದೇವರಿಂದ ಪ್ರೇರಿತವೆಂದು ಹೇಳಿಕೊಳ್ಳುವದಿಲ್ಲ! ನಾವು ಎಲ್ಲವನ್ನೂ ಒಳಗೊಂಡ ಹೇಳಿಕೆಯೊಂದಿಗೆ ಇತ್ಯರ್ಥಮಾಡಿಕೊಳ್ಳೋಣ: ಸಕಲ ಸತ್ಯದ ಒಂದೇ ಮೂಲವಿರುತ್ತದೆ, ಅದನ್ನು ಬಿಟ್ಟರೆ ಬೇರೊಂದು ಇಲ್ಲ.

ಅಪೊಸ್ತಲರು ಬೋಧಿಸಿದ್ದು ಕ್ರಿಸ್ತನ ಉಪದೇಶಕ್ಕೆ ಏನನ್ನು ಸೇರ್ಪಡೆಗೊಳಿಸಲಿಲ್ಲ; ಅದು ಈಗಾಗಲೆ ಪರಲೋಕದಲ್ಲಿ ಅಧಿಕಾರ ಕೊಡಲ್ಪಟ್ಟು ಸ್ವತಃ ಕರ್ತನಿಂದಲೇ ಬಂದದ್ದೆಂದು ಎಣಿಸಲ್ಪಟ್ಟದ್ದಾಗಿತ್ತು. ಅಪೊಸ್ತಲರೆಲ್ಲರ ಉಪದೇಶವು ಸ್ವತಃ ಯೇಸುವಿನ ತುಟಿಗಳಿಂದ ಉಚ್ಚರಿಸಲ್ಪಟ್ಟದ್ದೋ ಎಂಬಂತೆ ಒಂದೇ ರೀತಿಯಾಗಿತ್ತು (ಮತ್ತಾಯ 10:19, 20, 40). Hugo McCordನು ಮತ್ತಾಯ 16:19ನ್ನು ಈಗಾಗಲೆ "ಪರಲೋಕದಲ್ಲಿ ಕಟ್ಟಲ್ಪಟ್ಟಿರುವದನ್ನು" ಅಪೊಸ್ತಲರು ಭೂಮಿಯ ಮೇಲೆ ಕಟ್ಟುವದು ಎಂಬದಾಗಿ ಭಾವಾನುವಾದಗೊಳಿಸುತ್ತಾನೆ.[11] ಇದು ಯಾವ ವಿಧದಲ್ಲಿಯೂ ಹಳೆಯ ಒಡಂಬಡಿಕೆಯ ಬರಹಗಳನ್ನು ಅಪ್ರಾಮುಖ್ಯವೆಂದಾಗಿ ತೋರುವಂತೆ ಕುಂದಿಸಲಿಲ್ಲ; ಯಾಕೆಂದರೆ ಹಳೆಯ ಒಡಂಬಡಿಕೆಯ ಹೇಳಕೆಗಳು ಮತ್ತು ಉಲ್ಲೇಖನಗಳು ಇಬ್ರಿಯರಿಗೆ ಪುಸ್ತಕದಲ್ಲೆಲ್ಲಾ ಚದುರಿಸಲ್ಪಟ್ಟಿರುತ್ತವೆ, ದೇವರು ಆ ಬರಹಗಳ ಮೂಲಕ ಮಾತಾಡುತ್ತಿದ್ದನೆಂಬುದನ್ನು ತೋರಿಸುತ್ತದೆ.

ಕ್ರಿಸ್ತನ ಬರೋಣದ ಕುರಿತ ಸುಳುವಿಗಳು ಆದಿಕಾಂಡ 3:15; 12:1-3; ಮತ್ತು 49:10ರಲ್ಲಿ ಕೊಡಲ್ಪಟ್ಟಿವೆ.[12] ಅದು ಧರ್ಮೋಪದೇಶಕಾಂಡ 18:15ರಲ್ಲಿ ಇನ್ನಷ್ಟು ಸ್ಪಷ್ಟಗೊಂಡಿತು (ಅದು ಅಪೊಸ್ತಲರ ಕೃತ್ಯಗಳು 3:22ರಲ್ಲಿ ಪೇತ್ರನಿಂದ ಉಲ್ಲೇಖಿಸಲ್ಪಟ್ಟ ವಾಕ್ಯಭಾಗವಾಗಿದೆ), ಆ ವೇಳೆ ಮೋಶೆಯ ಸ್ಥಾನದಲ್ಲಿ ಮತ್ತೊಬ್ಬ ಹೊಸ ಪ್ರವಾದಿಯು ಬರುವನೆಂದು ಘೋಷಿಸಲ್ಪಟ್ಟಿತು. ನಂತರ, ಮೆಸ್ಸೀಯನ ಕೆಲಸ ಮತ್ತು ಸ್ವಭಾವವು ಮತ್ತಷ್ಟು ಹೆಚ್ಚು ಸ್ಪಷ್ಟಗೊಂಡಿತು. ಕೀರ್ತನೆ 22:14-18ರಲ್ಲಿ, ಶಿಲುಬೆಗೇರಿಸಲ್ಪಡುವಿಕೆಯ ಕುರಿತು ಒಂದು ಪ್ರವಾದನಾತ್ಮಕ ಬಣ್ಣನೆಯು ಕೊಡಲ್ಪಟ್ಟಿರುತ್ತದೆ. ಕ್ರಿಸ್ತನ ಪುನರುತ್ಥಾನವು ಕೀರ್ತನೆ 16:8-11ರಲ್ಲಿ ಮುಂತಿಳಿಸಲ್ಪಟ್ಟಿತು, ಅದು ಅಪೊಸ್ತಲರ ಕೃತ್ಯಗಳು 2:25-28ರಲ್ಲಿ ಪೇತ್ರನಿಂದ ಉಲ್ಲೇಖಿಸಲ್ಪಟ್ಟ ಒಂದು ಪ್ರವಾದನೆಯಾಗಿರುತ್ತದೆ.

ದೇವರ ಪೂರ್ಣ ಪ್ರಕಟನೆಯು – ಆತನ ಸ್ವಭಾವ, ಶಕ್ತಿ, ಮತ್ತು ಚಿತ್ತ – ಯೇಸು ಕ್ರಿಸ್ತನ ಮೂಲಕ ಮಾತ್ರವೇ ತಿಳಿದು ಬರುತ್ತದೆ (ಯೋಹಾನ 10:30; 14:9; 17:3-8). ಈ ಕಾರಣದಿಂದಲೇ, ಒಮ್ಮೆ ಪೂರ್ತಿಗೊಂಡ ಹೊಸ ಒಡಂಬಡಿಕೆಯು ಎಲ್ಲಾ ಪ್ರಕಟನೆಯ ಅಂತ್ಯವಾಗಿತ್ತು. ಕ್ರಿಸ್ತನು ಬಂದಾಗ, ಆತನು ಅಪೊಸ್ತಲರಿಗೆ ದೇವರನ್ನು ಪ್ರಕಟಗೊಳಿಸಿದನು. ಕ್ರಿಸ್ತನು ಪರಲೋಕಾರೋಹಣಗೊಂಡ ಬಳಿಕ, ಪ್ರಕಟನೆಯನ್ನು ಪೂರ್ತಿಗೊಳಿಸುವದಕ್ಕೆ ಮತ್ತು ಅಪೊಸ್ತಲರ ವಾಕ್ಯಗಳನ್ನು ಅದ್ಭುತಗಳ ಮೂಲಕ ದೃಢೀಕರಿಸುವಂತೆ ಪವಿತ್ರಾತ್ಮನನ್ನು ಕಳುಹಿಸಿ ಕೊಟ್ಟನು (ಮಾರ್ಕ 16:20; ಯೋಹಾನ 16:12, 13; ಇಬ್ರಿಯ 2:1-4). ಇಂದು ಒಬ್ಬನಿಗೆ ನಿರಂತರವಾದ ಪ್ರಕಟನೆಯ ಅಗತ್ಯವಿರುತ್ತದೆಂದು ಹೇಳುವದಾದರೆ, ಅದು ದೇವರು ಅಂತಿಮವಾಗಿ ಕ್ರಿಸ್ತನ ಮೂಲಕ ಮಾತಾಡಲಿಲ್ಲವೆಂದು ಅಭಿಪ್ರಾಯ ಸೂಚಿಸಿದಂತಾಗುತ್ತದೆ!

ರಕ್ಷಣೆಯುಂಟು ಮಾಡುವ ನಂಬಿಕೆಯನ್ನು ಸಾಧಿಸಬೇಕಾದರೆ ಅದ್ಭುತಗಳು ಮತ್ತು ಅಂತಿಮ ಪ್ರಕಟನೆ ಜೊತೆಜೊತೆಯಾಗಿ ಸಾಗುತ್ತವೆ (ಮಾರ್ಕ 16:15-20; ಯೋಹಾನ 20:30, 31). "ಮುಂದಣ ಯುಗದ ಮಹತ್ವವನ್ನು ಅನುಭವಿಸುವದ"ರಲ್ಲಿ (ಇಬ್ರಿಯ 6:5), ಆದಿ ದೇವಜನರು

ನಿತ್ಯ “ಯುಗ”ದಲ್ಲಿ ಭಾಗಶಃವಾದ ರೀತಿಯಲ್ಲಿ ಪಾಲ್ಗೊಂಡರು, ಅದರಲ್ಲಿ ನಮಗೆ ಮಹತ್ತರವಾದ ಶಕ್ತಿಗಳು ಲಭ್ಯವಾಗಲಿರುತ್ತವೆ.

ಹಳೆಯ ಮತ್ತು ಹೊಸ ಒಡಂಬಡಿಕೆಗಳ ನಡುವಿನ ಈ ವಿರುದ್ಧ ಹೋಲಿಕೆಗಳನ್ನು ಗಮನಿಸಿರಿ:[13]

| **ಹಳೆಯದು: ಪ್ರವಾದಿಗಳು** | **ಹೊಸದು: ಕ್ರಿಸ್ತನು** |
|---|---|
| ಮನುಷ್ಯರು ದೇವರಿಂದ ಕರೆಯಲ್ಪಟ್ಟರು | ದೇವರಾದ ಮಗನು |
| ಅನೇಕ ಪ್ರವಾದಿಗಳು | ಒಬ್ಬನೇ ಮಗನು |
| ಒಂದು ಭಾಗಭಾಗವಾದ ಮತ್ತು ಅಸಂಪೂರ್ಣವಾದ ಸಂದೇಶ | ಒಂದು ಅಂತಿಮ ಮತ್ತು ಸಂಪೂರ್ಣ ಸಂದೇಶ |

ದೇವರು ಈಗ **ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ**. ಇಲ್ಲಿ “ಮಾತಾಡಿದ್ದಾನೆ” ಎಂಬುದರ ಅನುವಾದಿತ ಪದವು (λαλέω, *laleō*) ಅನೇಕ ಸಾರಿ ಇಬ್ರಿಯರಿಗೆ ಬರೆದ ಪುಸ್ತಕದಲ್ಲಿ ದೈವಿಕ ಪ್ರಕಟಣೆಯನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ (2:2, 3; 3:5; 7:14; 9:19; 11:16; 12:24, 25). ಯೂದನು 3ನೇ ವಚನವು ಅದೇ ಭಾವನೆಯನ್ನು ಉಲ್ಲೇಖಿಸುತ್ತದೆ, “ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ.”

ಒಬ್ಬನು ಈ ಜೀವಿತದಲ್ಲಿ ದೇವರಿಗೆ ಅತ್ಯಂಥ ಸಮೀಪ ಹೋಗುವದಕ್ಕೆ ಸಾಧ್ಯವಿರುವದು ಆತನ ನಿತ್ಯಕುಮಾರನ ಮೂಲಕವೇ ಆಗಿದೆ. ತಂದೆಯ ಬಳಿಗೆ ಹೋಗುವದಕ್ಕಿರುವ ಏಕೈಕ ದಾರಿಯು ಮಗನ ಮೂಲಕವೇ (ಯೋಹಾನ 14:1-6). ಹಳೆಯ ಒಡಂಬಡಿಕೆಯ ಮೂಲಕ ಮಾತಾಡಿದವನು ದೇವರೇ ಮತ್ತು ಆತನು ಈಗಲೂ ಹೊಸ ಒಡಂಬಡಿಕೆಯ ಮೂಲಕ ಮಾತಾಡುತ್ತಾನೆ. ಪೌಲನ ಪತ್ರಿಕೆಗಳಲ್ಲಿ ಪ್ರಸ್ತಾಪಿಸಲಾಗಿರುವ “ಕರ್ತನ ವಾಕ್ಯ” ಎಂಬುದು ಯೇಸು ಈ ಮುಂಚೆ ಕಲಿಸಿದ ಸಂಗತಿಗಳಿಗೆ ಸಂಬಂಧಿಸಿದ್ದಾಗಿದೆ (1 ಥೆಸಲೋನಿಕ 1:8; 4:15). “ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆ ಏನೆಂದರೆ” ಎಂಬ ಆಜ್ಞೆಯು “ಕರ್ತನ ವಾಕ್ಯ ಸಹ” ಏನೆಂದರೆ ಎಂಬ ಸೂಚ್ಯಾರ್ಥವಾಗಿರುತ್ತದೆ (1 ಕೊರಿಂಥ 7:10; ನೋಡಿರಿ 14:37).

ದೇವರು ವಿಮೋಚನಕಾಂಡ 3:6ರಲ್ಲಿ ದಾಖಲಿಸಲ್ಪಟ್ಟಿರುವ ಪ್ರಕಾರ (ಮತ್ತು ಅನಂತರದಲ್ಲಿ ಯೇಸುವು LXX ನಿಂದ ಉಲ್ಲೇಖಿಸುತ್ತಾನೆ), ಮೋಶೆಯ ಸಂಗಡ ಮಾತಾಡುತ್ತಾ ಹೀಗೆ ಹೇಳುತ್ತಾನೆ, “ಸತ್ತವರ ಪುನರುತ್ಥಾನದ ವಿಷಯವಾಗಿ ಹೇಳಬೇಕಾದರೆ – *ನಾನು ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು* ಎಂದು ನಿಮಗೆ ನುಡಿದದ್ದನ್ನು ನೀವು ಓದಲಿಲ್ಲವೇ. ಆತನ ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ” (ಒತ್ತಿ ಹೇಳಿದ್ದು ನನ್ನದು). ಇದು ನಿರ್ಧಾರಕವಾಗಿ ತೋರಿಸಿ ಕೊಡುವದೇನೆಂದರೆ ದೇವರು ಮೊದಲ ಶತಮಾನದ ಜನರೊಂದಿಗೆ ಒಂದು ಸಮರ್ಪಕವಾದ ಇಬ್ರಿಯ ಅನುವಾದದ ಮೂಕ ಮಾತಾಡುತ್ತಿದ್ದನು ಎಂಬದೆ.

ಆತನು ಇಂದು ಅದೇ ರೀತಿಯಲ್ಲಿ ಮಾತಾಡುತ್ತಾನೆ – ಆತನ ಮಗನ ಮೂಲಕ ಮತ್ತು ಅಪೊಸ್ತಲರು ಮತ್ತು ಇತರ ಸಂಗಡಿಗರ ಪ್ರೇರಿತ ಬರಹಗಳ ಮೂಲಕ ಮಾತಾಡುತ್ತಾನೆ. ಅವರ ಮಾತುಗಳು ನಮಗೆ ವಿವಿಧ ಆವೃತ್ತಿಗಳಲ್ಲಿ ಸಾಕಷ್ಟು ಅನುವಾದದ ಮೂಲಕ ಬಂದಿರುತ್ತದೆ. ಯೇಸು ಮತ್ತು ಅಪೊಸ್ತಲರು ಅಂತಹ (LXX) ಆವೃತ್ತಿಯಿಂದ ಉಲ್ಲೇಖಿಸಿದರು ಹೊರತು

ಮೂಲ ಇಬ್ರಿಯ ಆವೃತ್ತಿಯಿಂದಲ್ಲ. ಖಂಡಿತವಾಗಿಯೂ, ದೇವರು ಈಗಲೂ ನಮ್ಮೊಂದಿಗೆ ಬೈಬಲ್ ಅನುವಾದಗಳ ಮೂಲಕ ಮಾತಾಡುತ್ತಾನೆ!

ಯೇಸುವಿನ ಕುರಿತು ನಮಗಿರುವ ಸರ್ವೋನ್ನತ ಅಭಿಪ್ರಾಯವನ್ನು ಭ್ರಷ್ಟಗೊಳಿಸುವಂತೆ ಯಾವದಕ್ಕೂ ಅವಕಾಶ ಕೊಡಬಾರದು. ಆದಿ ಕ್ರೈಸ್ತರು ಆತನ ಮಹತ್ವಪೂರ್ಣತೆಯನ್ನು ಕಾಣುವದಕ್ಕೆ ವಿಫಳರಾಗಬಹುದಾದ ಅಪಾಯವಿತ್ತು, ಮತ್ತು ನಮ್ಮ ದೃಷ್ಟಿಯಲ್ಲಿರುವ ಯೇಸುವಿನ ಕುರಿತ ಉದಾತ್ತತೆಯ ಕುಂದಿಸುವಂತೆ ಸಂಶಯ ಅಥವಾ ಅಪನಂಬಿಕೆಯೆಂಬ ಅಸ್ಪಷ್ಟವಾದ ಮಂಜು ಕವಿಯುವಂತೆ ಅವಕಾಶವನ್ನು ಕೊಡದಿರಲು ನಾವು ಜಾಗ್ರತೆ ವಹಿಸಬೇಕು.

ಯೇಸು ಕ್ರಿಸ್ತನನ್ನು ಏಕೆ ದೇವಕುಮಾರನೆಂದು ಕರೆಯಲ್ಪಡಬಲ್ಲನು ಎಂಬುದನ್ನು Robert Milliganನು ಸುದೀರ್ಘವಾಗಿ ವಿವರಿಸುತ್ತಾನೆ: (1) ಆತನು ಅಸ್ವಾಭಾವಿಕವಾಗಿ ಗರ್ಭಧರಿಸಲ್ಪಟ್ಟು ಕನ್ಯೆಯಾದ ಮರಿಯಳಿಂದ ಜನಿಸಲ್ಪಟ್ಟಿರುವ ಕಾರಣದಿಂದ (ಲೂಕ 1:35); (2) ಅಪೊಸ್ತಲರ ಕೃತ್ಯಗಳು 13:33ರಲ್ಲಿ ಪೌಲನ ಪ್ರಕಾರವಾಗಿ, ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿರುವ ಕಾರಣದಿಂದ (ನೋಡಿರಿ ಪ್ರಕಟನೆ 1:5); ಮತ್ತು (3) "ಆತನು ಶಾಶ್ವತವಾಗಿ ತಂದೆಯಿಂದ ಹುಟ್ಟಿದ ಮಗನಾಗಿರುವ ಕಾರಣದಿಂದ."[14] ಯೇಸು ಆದಿಯಲ್ಲಿ ತಂದೆಯಿಂದ ಸೃಷ್ಟಿಸಲ್ಪಟ್ಟವನು ಎಂಬ ಅರ್ಥದಲ್ಲಿ "ಹುಟ್ಟಿದವನು" ಆಗಿದ್ದಲ್ಲಿ, ದೇವರು ಆತನ ಮೂಲಕವಾಗಿ ಸಮಸ್ತವನ್ನೂ ಉಂಟು ಮಾಡಿರುವದಕ್ಕೆ ಸಾಧ್ಯವಿರುತ್ತಿರಲಿಲ್ಲ (ಇಬ್ರಿಯ 1:2; ಯೋಹಾನ 1:1-3).

Milliganನ ಪ್ರಕಾರವಾಗಿ, ಕ್ರಿಸ್ತನು ತನ್ನ ನರಾವತಾರದ ವೇಳೆ ಮಗನಾದನು, ಆತನು ತನ್ನ ನರಾವತಾರದ ಮುಂಚೆ "ವಾಕ್ಯ" ಆಗಿದ್ದನು (ಯೋಹಾನ 1:1, 2) ಮತ್ತು ಆ ಕಾಲದ ಮುಂಚೆ ಆತನು ತಂದೆಯ ಸಂಗಡ ಪೂರ್ವಾಸ್ತಿತ್ವದಲ್ಲಿದ್ದನು. "ಅಬ್ರಹಾಮಮನು ಕಲ್ದೀಯರ ಊರ್ ಬಿಟ್ಟು" ಹೊರಟಾಗ ನಮಗೆ ಗೊತ್ತಿರುವಂತೆ ಆತನು ಅಬ್ರಹಾಮನಾಗಿದ್ದನು ಮತ್ತು ಅನಂತರದ ಕಾಲದಲ್ಲಿ ಮಾತ್ರವೇ ಆತನು ಅಬ್ರಹಾಮ ಎಂದು ಕರೆಯಲ್ಪಟ್ಟ ಪ್ರಕಾರವಾಗಿಯೇ, ಯೇಸುವು ತನ್ನ ಶಾಶ್ವತವಾದ ಸ್ವಭಾವದಲ್ಲಿ ಇದ್ದವನಾದ್ದರಿಂದ ಆತನಿಗೆ ನಾವು "ದೇವಕುಮಾರ" ಎಂಬ ಪದಗುಚ್ಛವನ್ನು ಅನ್ವಯಿಸಬಹುದು. "ದೇವಕುಮಾರನು" ಎಂಬುದು ಈಗ ಕ್ರಿಸ್ತನ ದೈವಿಕ ಸ್ವಭಾವಕ್ಕೆ ಮಾತ್ರವಲ್ಲದೆ ಆತನ ಮುಂಚಿನ ಶಾರೀರಿಕ ಜೀವಿತಕ್ಕೆ ಸಹ ಅನ್ವಯಿಸಬಹುದಾಗಿದೆ. ಮತ್ತಾಯ 4:3, 6ರಲ್ಲಿ, ಸೈತಾನನು ಈ ಮಾತನ್ನು ಸಂದೇಹದಂತೆ ತೋರುವ ರೀತಿಯಲ್ಲಿ ಯೇಸುವಿಗೆ ಬಳಸುತ್ತಾನೆ; ಮತ್ತಾಯ 14:33ರಲ್ಲಿ ಅಪೊಸ್ತಲರು ಕ್ರಿಸ್ತನನ್ನು "ದೇವಕುಮಾರನು" ಎಂದು ಕರೆಯುತ್ತಾರೆ. ಪೌಲನು ರೋಮಾ 1:4ರಲ್ಲಿರುವ ಒಂದು ಪದಗುಚ್ಛದಲ್ಲಿ ಈ ಪದದ ಬಳಕೆ ಮಾಡಿರುವಂತೆ ಕಾಣುತ್ತದೆ. ಇಬ್ರಿಯರಿಗೆ ಬರೆದ ಪುಸ್ತಕವು "ದೇವಕುಮಾರನು" ಎಂಬುದನ್ನು ದೇವರೊಂದಿಗೆ ಒಂದಾಗಿರುವವನು ಎಂಬದಾಗಿ ಅರ್ಥಮಾಡಿಕೊಳ್ಳುತ್ತದೆ, ಹೀಗೆ ಅದರರ್ಥವು ಆತನು ತಂದೆಯ ಮಹಿಮೆಯಲ್ಲಿ ಸಂಪೂರ್ಣ ಒಂದಾಗಿರುತ್ತಾನೆ. "ದೇವಕುಮಾರನು" ಎಂಬ ಹೆಸರು ಯೇಸುವಿನ ಇಡೀ ಗುಣಸ್ವಭಾವವನ್ನು ಸೂಚಿಸುತ್ತದೆ.

ಯೇಸು ದೇವರನ್ನು ತನ್ನ ತಂದೆಯೆಂದು ಕರೆದುಕೊಂಡಾಗ, ಆತನು ತನ್ನನ್ನು ದೇವರನ್ನಾಗಿ ಮಾಡಿಕೊಳ್ಳುತ್ತಿದ್ದಾನೆಂದು ಯೆಹೂದ್ಯರು ಹೇಳಿಕೊಳ್ಳುತ್ತಾರೆ (ಯೋಹಾನ 10:33). ಅದೊಂದು ಸುಳ್ಳು ಹಕ್ಕುಸಾಧಿಸಿಕೊಳ್ಳುವಿಕೆ ಆಗಿದ್ದಲ್ಲಿ, ಆತನು ಖಂಡಿತವಾಗಿಯೂ ಮರಣಕ್ಕೆ ಯೋಗ್ಯನಾಗಿದ್ದನು. "ದೇವಕುಮಾರನು" ಎಂದು ಹೇಳುವದರ ಅರ್ಥವು "ದೇವರೊಂದಿಗೆ ಒಂದಾಗಿರುವವನು" ಎಂಬುದು ಸೂಚಿಸುವದೇನೆಂದರೆ ತಂದೆಯ ದೇವತ್ವದಲ್ಲಿ ಸಂಪೂರ್ಣ ಒಂದಾಗಿರುವವನು ಎಂಬದೆ. ಆತನು "ಕುಮಾರನು" ಆಗಿರುವದರಿಂದ, ಆತನು "[ಎಲ್ಲಾ

ಜನಗಳಿಗೂ] ಕರ್ತನು" ಆಗಿದ್ದಾನೆ (ಅಪೊಸ್ತಲರ ಕೃತ್ಯಗಳು 10:36). 2ದಲ್ಲಿನ ಪದಗುಚ್ಛದ ಅಕ್ಷರಶಃ ಅನುವಾದವು "ಒಬ್ಬ ಮಗನಿಂದ" ಎಂದಾಗಿರುತ್ತದೆಯಾದರೂ, "ಇಲ್ಲಿ ಬಳಸಲಾಗಿರುವ ನಾಮ ಪದವು ಪದದ ಒಂದು ಸಂಪೂರ್ಣ ಅರ್ಥದಲ್ಲಿದ್ದು ಒಂದು ಸಮರ್ಪಕವಾದ ಹೆಸರಿಗೆ ಸಮಾನವಾಗಿದೆ" ಎಂದು Simon J. Kistemaker ವ್ಯಾಖ್ಯಾನಿಸುತ್ತಾನೆ.[15]

ಇಬ್ರಿಯದವರಿಗೆ ಬರೆದ ಪತ್ರಿಕೆಯ ಮೊದಲ ಮೂರು ವಚನಗಳು ಇಡೀ ಪುಸ್ತಕದ ಚರ್ಚೆಯಾಂಶಕ್ಕೆ ವೇದಿಕೆಯನ್ನು ಸಿದ್ಧಗೊಳಿಸುತ್ತವೆ. ವಿಧಾನ, ಕಾಲ, ಮತ್ತು ದೇವರ ಪ್ರಕಟನೆಯ ಪ್ರತಿನಿಧಿಗಳು ಬಗ್ಗೆ ಉಲ್ಲೇಖಿಸಲ್ಪಟ್ಟಿರುತ್ತದೆ.[16] 1 ಮತ್ತು 2 ವಚನಗಳು ಚರ್ಚೆಯಾಂಶವನ್ನು ಹೆಸರಿಸಿದರೆ, 2b ಮತ್ತು 3 ವಚನಗಳು ಕ್ರಿಸ್ತನ ದೈವಿಕ ಸ್ವಭಾವದ ಕುರಿತು ವಿವರಣೆಯನ್ನು ನೀಡುತ್ತವೆ.

## ಮಗನ ಸ್ವಭಾವ ಮತ್ತು ಪ್ರಭಾವ (1: 2b, 3)

**2b ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. 3 ಈತನು ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು.**

ಈ ಕ್ಲುಪ್ತ ವಾಕ್ಯಭಾಗದಲ್ಲಿರುವ ಏಳು ಆಶ್ಚರ್ಯವಾದ ಹೇಳಿಕೆಗಳು ಕ್ರಿಸ್ತನ ದೈವಿಕ ಸ್ವಭಾವ ಮತ್ತು ಪ್ರಭಾವವನ್ನು ಸಾರಾಂಶಗೊಳಿಸುತ್ತವೆ. ನಾವು ಇವುಗಳನ್ನು ಪರೀಕ್ಷಿಸುವ ವೇಳೆ, ಆತನೊಂದಿಗೆ ನಮಗಿರುವ ಸಂಬಂಧದ ವಿಷಯದಲ್ಲಿ ಈ ಪ್ರತಿಯೊಂದು ಗುಣಲಕ್ಷಣವು ಯಾವ ಅರ್ಥ ಹೊಂದಿರುತ್ತವೆಂಬುದನ್ನು ಪರಿಗಣಿಸಿಕೊಳ್ಳೋಣ.

**ವಚನ 2b**. ಯೇಸುವು **ಎಲ್ಲಕ್ಕೂ ಬಾಧ್ಯನು** ಎಂದು ಘೋಷಿಸಲ್ಪಟ್ಟಿದ್ದಾನೆ. ಈ ಪದಗುಚ್ಛವು ಕೀರ್ತನೆ 2:8ರ ಪ್ರತಿಧ್ವನಿಯಾಗಿರಬಲ್ಲದು, ಆ ವಚನವು "ದೇಶಗಳು" ಸೇರಿದಂತೆ ಎಲ್ಲವನ್ನೂ ಸ್ವಾಸ್ತ್ಯವಾಗಿ ಕೊಡಲ್ಪಡುವವೆಂದು ವಾಗ್ದಾನ ಮಾಡಲ್ಪಟ್ಟಿದೆಯೆಂದು ತಿಳಿಸುತ್ತದೆ. ಕ್ರಿಸ್ತನು ಈಗ ಸಮಸ್ತದ ಮೇಲೆ ಸರ್ವೋಚ್ಛ ಒಡೆಯನಾಗಿದ್ದಾನೆ (ಕೊಲೊಸ್ಸೆ 1:18; ಎಫೆಸ 1:22, 23). ಇಬ್ರಿಯ 2:5-9ರಲ್ಲಿ ಲೇಖಕನು "ಯೇಸು ಕಡೇ ಆದಾಮನಾಗಿದ್ದು ಎಲ್ಲವನ್ನೂ ಆತನ ಪಾಗಳ ಕೆಳಗೆ ಹಾಕಿ ಅವನಿಗೆ ಅಧೀನಮಾಡಿದೆ" ಎಂದು ವಿವರಿಸುವ ಮೂಲಕ ಈ ಸತ್ಯವನ್ನು ವಿವರವಾಗಿ ತಿಳಿಸುತ್ತಾನೆ. ಆತನು "ಎಲ್ಲವನ್ನೂ" (πάντων, *pantōn*, πᾶς, *pas* ಎಂಬ ಪದದಿಂದ ಬಂದದ್ದು) ಎಂದು ಪ್ರಸ್ತಾಪಿಸುತ್ತಾನೆ, ಅದು ಕೇವಲ "ಮಾನವರು" ಎಂದು ಅರ್ಥವಾಗಬಹುದು ಅಥವಾ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಒಳಗೊಂಡಿರಬಹುದಾದ ವಿಸ್ತಾರವಾದ ಮಾತಾಗಿರುತ್ತದೆ. "ಎಲ್ಲವನ್ನೂ" ಎಂಬುದು ಎಲ್ಲಾ ಯುಗಗಳಲ್ಲಿನ ವಿಮೋಚಿಸಲ್ಪಟ್ಟವರನ್ನು ಒಳಗೊಂಡಿರುತ್ತದೆಂಬುದರಲ್ಲಿ ಸಂಶಯವಿರಲಾರದು. ಆದುದರಿಂದ, ನಾವು ಕ್ರಿಸ್ತನವರು, ಕ್ರಿಸ್ತನು ದೇವರವನು, ಮತ್ತು ಕ್ರಿಸ್ತನಿಗೆ ಸೇರಿದ್ದೆಲ್ಲವೂ ನಮಗೆ ಸೇರಿದ್ದಾಗಿದೆ (1 ಕೊರಿಂಥ 3:21-23). ಆತನು "ಬಾಧ್ಯಸ್ಥನು" ಯಾಕೆಂದರೆ ದೇವರಿಗೆ ಒಬ್ಬನೇ ಒಬ್ಬ "ಮಗ"ನಿದ್ದಾನೆ. ನಮಗಾದರೋ ಕ್ರಿಸ್ತನಿಲ್ಲದೆ ಪುತ್ರತ್ವವಾಗಲಿ ಬಾಧ್ಯತ್ವವಾಗಲಿ ಇರುವದಿಲ್ಲ. ಸತ್ಯವಾಗಿಯೂ, ದೇವರು ಮಾನವರಿಗಾಗಿ ಒದಗಿಸಿರುವ ಹಲವಾರು ನಿಕ್ಷೇಪಗಳಿಗೆ ಆತನು ತೆರೆದ ದ್ವಾರವಾಗಿ ನಿಲ್ಲುತ್ತಾನೆ. ಯಾವನೂ ಸಹ ಈ ಮಹಿಮಕರವಾದ ಸತ್ಯವನ್ನು ಆಲೋಚಿಸಿ ಆಶ್ಚರ್ಯ ಹಾಗೂ ಸಂತೋಷದಿಂದ ಆವರಿಸಲ್ಪಡದರೆ ಇರುವದಕ್ಕೆ ಸಾಧ್ಯವಿಲ್ಲ.

ಯೇಸು ಈಗಿನ ಸ್ಥಾನವನ್ನು ಯಾವಾಗ ವಹಿಸಿಕೊಂಡನೆಂಬುದನ್ನು ನಾವು ಖಚಿತವಾಗಿ ಹೇಳಬಲ್ಲೆವು, ಆದರೆ ಖಂಡಿತವಾಗಿಯೂ ಅದು "ಎಲ್ಲಾ ಅಧಿಕಾರ" ನನಗೆ ಕೊಡಲ್ಪಟ್ಟಿದೆ ಎಂದು ಆತನು ಘೋಷಿಸುವ ಮೊದಲೇ ಸಂಭವಿಸಿದ್ದಾಗಿದೆ (ಮತ್ತಾಯ 28:18). ಫಿಲಿಪ್ಪಿ 2:5-9ರಲ್ಲಿ ಪೌಲನು ಘೋಷಿಸಿದ್ದೇನೆಂದರೆ ಕ್ರಿಸ್ತನು ಉನ್ನತಕ್ಕೇರಿಸಲ್ಪಡುವಿಕೆಯು ಆತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಫಲಿತವಾಗಿ ಸಂಭವಿಸಿತು ಎಂಬದೆ. ಈ ವಚನಗಳಲ್ಲಿನ ಅನೇಕ ಕಾರ್ಯಗಳು ನಮ್ಮ ತಿಳುವಳಿಕೆಗೆ ಮೀರಿದವುಗಳಾಗಿದ್ದಾವಾದರೂ, ದೇವಕುಮಾರನ ಶ್ರೇಷ್ಠವಾದ ಉನ್ನತಕ್ಕೇರಿಸಲ್ಪಟ್ಟಿರುವಿಕೆಯ ಸತ್ಯವನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು.

**ಈತನ** [ಕ್ರಿಸ್ತ] **ಮೂಲಕವೇ ಜಗತ್ತನ್ನು ಉಂಟುಮಾಡಿದನು** ಎಂದು ಲೇಖಕನು ಹೇಳುತ್ತಾನೆ. "ಜಗತ್ತು" ಎಂಬುದಕ್ಕಿರುವ ಪದವು (αἰῶνας, *aiōnas*) ಬಹುವಚನದಲ್ಲಿದೆಯಾದರೂ, NIV ಮತ್ತು Moffatt ತರ್ಜುಮೆಗಳಲ್ಲಿರುವ ಪ್ರಕಾರ ಅದರರ್ಥವು "ಲೋಕ" ಅಥವಾ "ವಿಶ್ವ" ಎಂಬುದಾಗಿ ಸಹ ಅನುವಾದಿಸಬಹುದಾಗಿದೆ.

ಕ್ರಿಸ್ತನು ಸೃಷ್ಟಿಯ ಕಾರ್ಯದಲ್ಲಿ ಪಾಲುಗೊಂಡಿದ್ದನು, ಮತ್ತು ಉಂಟು ಮಾಡಲ್ಪಟ್ಟಿದ್ದರಲ್ಲಿ ಆತನಿಲ್ಲದೆ ಯಾವದೂ ಉಂಟು ಮಾಡಲ್ಪಡಲಿಲ್ಲ (ಯೋಹಾನ 1:1-3). ಅಲೆಗ್ಸಾಂಡ್ರಿಯಾದ ಯಾಜಕನಾದ Ariusನು (ಕ್ರಿ.ಶ. c. 250-c. 336) ಯೇಸು ಒಬ್ಬ ಸೃಷ್ಟಿಸಲ್ಪಟ್ಟ ಜೀವಿ ಎಂದು ಹೇಳಿಕೊಂಡನು. ಆತನನ್ನು ತಪ್ಪು ಎಂದು ಖಂಡಿಸುತ್ತಾ, ಗ್ರೀಕ್ ಮೂಲಪಿತೃವಾದ Athanasius (ಕ್ರಿ.ಶ. c. 293-c. 373) ಯೋಹಾನ 1ನೇ ಅಧ್ಯಾಯದಿಂದ ಪ್ರತ್ಯುತ್ತರ ನೀಡಿದನು: ಯೇಸು ಸಮಸ್ತವನ್ನು ಸೃಷ್ಟಿಸುವ ಕಾರ್ಯದಲ್ಲಿ ಭಾಗಿಯಾಗಿದ್ದನಾದ್ದರಿಂದ, ತಾನೇ ಸ್ವತಃ ಆತನು ಒಬ್ಬ ಸೃಷ್ಟಿಸಲ್ಪಟ್ಟ ಜೀವಿಯಾಗಿರಲು ಸಾಧ್ಯವಿರಲಿಲ್ಲ! ಯೇಸು ಸೃಷ್ಟಿಸಲ್ಪಟ್ಟಿರುವ ಪ್ರಧಾನ ದೇವದೂತನೆಂದು ಯಾವನಾದರೂ ಹೇಳಿಕೊಂಡರೆ ಇದೇ ಕಾರಣದಿಂದ ಖಂಡಿಸಲ್ಪಡುವನು. ಅನೇಕರು ಅದನ್ನು ಸಂಶಯಿಸುತ್ತಾರಾದರೂ, ತ್ರೈಯೇಕತ್ವದಲ್ಲಿ ಯೇಸುವಿನ ಇರುವಿಕೆಯ ಸುಳಿವು ಆದಿಕಾಂಡ 1:1, 26ರಲ್ಲಿ ದೇವರಿಗೆ ಬಳಸಲಾಗಿರುವ ಬಹುವಚನದ ನಾಮಪದವಾದ (אֱלֹהִים, *'elohim*) ದಲ್ಲಿ ಸಿಕ್ಕುತ್ತದೆ.

ನಾವು ಸೃಷ್ಟಿಯ ಕಾರ್ಯದಲ್ಲಿ ತೋರ್ಪಡಿಸಲ್ಪಟ್ಟಿರುವ ದಿಗ್ಭ್ರಮೆ ಹಿಡಿಸುವ ಶಕ್ತಿಯನ್ನು ಕಲ್ಪನೆ ಮಾಡಿಕೊಳ್ಳುವದಾದರೆ, ನಾವು ದೇವರನ್ನು ಯಾವ ಅರ್ಥದಲ್ಲಿಯೂ ಮಿತಿಗೊಳಿಸುವದಕ್ಕೆ ಶಕ್ತರಾಗುವದಿಲ್ಲ. ಪ್ರತಿಯೊಬ್ಬ ಅವಿಶ್ವಾಸಿಯು ಅದನ್ನೇ ಮಾಡುವವನಾಗಿದ್ದಾನೆ, ಯಾಕೆಂದರೆ ಅಂತರಿಕ್ಷವನ್ನು ಅದರಲ್ಲಿರುವ ಸಮಸ್ತ ಕಾರ್ಯಗಳ ಸಮೇತವಾಗಿ ಸೃಷ್ಟಿಸುವಷ್ಟು ಮಹಾನ್ ದೇವರನ್ನು ಕಲ್ಪಿಸಿಕೊಳ್ಳುವದಕ್ಕೆ ಅವನಿಂದ ಸಾಧ್ಯವಾಗುವದಿಲ್ಲ. ಯೇಸುವೇ ಎಲ್ಲವನ್ನೂ ಉಂಟು ಮಾಡಿದ್ದಾನೆಂಬುದನ್ನು ಅಂಗೀಕರಿಸಿಕೊಳ್ಳುವದಕ್ಕೆ ಒಬ್ಬ ವಿಶ್ವಾಸಿಗೆ ಯಾವದೇ ಸಮಸ್ಯೆಯಿರತಕ್ಕದ್ದಲ್ಲ. ಆತನು ಕಪ್ಪು ಕುಳಿ, ನವ್ಯತಾರೆ, ಮತ್ತು ಅಂತರಿಕ್ಷದಲ್ಲಿ ಈ ಮುಂಚೆ ತಿಳಿಯದೆ ಇದ್ದ ನಕ್ಷತ್ರಗಳನ್ನು ಅಥವಾ ಗ್ರಹಗಳನ್ನು ಕಂಡು ಹಿಡಿದಾಗ್ಯೂ ಅದರ ಬಗ್ಗೆ ಚಿಂತಿಸಬೇಕಾಗಿಯೂ ಇರುವದಿಲ್ಲ. ಹೊಸದಾಗಿ ದೊರಕುವ ಮಾಹಿತಿಯು ನಾವು ಇನ್ನಷ್ಟು ಆಶ್ಚರ್ಯ ಮತ್ತು ಶ್ಲಾಘನೆಯೊಂದಿಗೆ ಆರಾಧಿಸುವಂತೆ ಮಾಡತಕ್ಕದ್ದು ಯಾಕೆಂದರೆ ದೇವರ ಶಕ್ತಿ, ಪರಾಕ್ರಮ, ಮತ್ತು ಜ್ಞಾನದ ಕುರಿತು ಇನ್ನಷ್ಟು ಹೆಚ್ಚು ಕಲಿತವರಾಗಿದ್ದೇವೆ.

ಹೊಸ ಅನ್ವೇಷಣೆಗಳು ನಮ್ಮ ನಂಬಿಕೆಯನ್ನು ಅಲುಗಾಡಿಸುವದಾದರೆ, ನಾವು ನಮ್ಮ ದೇವರ ಶ್ರೇಷ್ಠತೆ ಹಾಗೂ ವೈಭವವನ್ನು ಮೀತಿಗೊಳಿಸಿರುವದೇ ಅದಕ್ಕೆ ಕಾರಣವಾಗಿರುತ್ತದೆ.

ಒಂದು ದಿಗ್ಭ್ರಮೆ ಹಿಡಿಸುವ ಶಕ್ತಿಯುಳ್ಳ ಮತ್ತು ಸಾಮರ್ಥ್ಯವುಳ್ಳ ಸೃಷ್ಟಿಕರ್ತನ ಪುರಾವೆಯು ನಮ್ಮ ದೇಹದ ಪ್ರತಿಯೊಂದು ಕಣಗಳಲ್ಲೂ ಸೂಚ್ಯಾರ್ಥವಾಗಿರುತ್ತದೆ. ದೇವರು ತನ್ನ ಪ್ರತಿಯೊಂದು ಮಗುವಿಗಾಗಿ ಎಷ್ಟೊಂದು ಕಳಕಳಿಯನ್ನು ಹೊಂದಿರುತ್ತಾನೆಂದರೆ ಆತನಿಗೆ ನಮ್ಮ ತಲೆಯಲ್ಲಿರುವ ಕೂದಲುಗಳ ಸಂಖ್ಯೆಯು ಸಹ ತಿಳಿದಿರುವದಾಗಿದ್ದು, ಆತನ ಚಿಕ್ಕ ವಿಷಯಗಳಲ್ಲಿ ಸಹ ನಮ್ಮ ಬಗ್ಗೆ ಚಿಂತೆ ಮಾಡುವ ಒಬ್ಬ ದೇವರಾಗಿದ್ದಾನೆ (ಲೂಕ 12:6, 7).

"ಈತಬನ ಮೂಲಕವೇ ಜಗತ್ತನ್ನು ಉಂಟುಮಾಡಿದನು" ಎಂಬ ಪದಗುಚ್ಛವು ಆದಿ ಸಭೆಯಲ್ಲಿದ್ದ ಕ್ರೈಸ್ತೀಯ ಸಂಕೀರ್ತನೆ ಒಂದು ಕುರುಹು ಆಗಿರಬಹುದು ಅಥವಾ ನಂಬಿಕೆಯ ಅರಿಕೆ ಆಗಿರಬಹುದಾಗಿದೆ ಎಂದು F. F. Bruce ಹೇಳಿದ್ದು ಸರಿಯಾಗಿಯೇ ಇರಬಹುದಾಗಿದೆ (ನೋಡಿರಿ ಯೋಹಾನ 1:3; ಕೊಲೊಸ್ಸೆ 1:16).[17] 1ರಿಂದ 3 ವಚನಗಳಲ್ಲಿನ ಭಾಷೆಯು ಕ್ರಿಸ್ತನ ಸ್ತುತಿ ಮಾಡುವದರಲ್ಲಿ ಎಷ್ಟೊಂದು ಉದಾತ್ತವಾಗಿದೆಯೆಂದರೆ ಅದು ಆದಿ ಕ್ರೈಸ್ತೀಯ ಸಂಕೀರ್ತನೆಯಲ್ಲಿ ಜೊತೆಗೂಡಿದ ಸ್ವರಗಳನ್ನು ಅನುಕರಣ ಮಾಡುವಂತೆ ತೋರುತ್ತದೆ.

**ವಚನ 3.** ಮಗನು **ದೇವರ ಪ್ರಭಾವದ ಪ್ರಕಾಶ** ಎಂದು ಹೇಳಲಾಗಿರುತ್ತದೆ. ಕ್ರಿಸ್ತನು ತಂದೆಯ ಪ್ರಭಾವವನ್ನು ಪ್ರತಿಬಿಂಬಿಸುತ್ತಾನೆಂಬುದರಲ್ಲಿ ನಾವು ಆತನ ಶ್ರೇಷ್ಠತೆಯನ್ನು ಕಾಣುತ್ತೇವೆ. "ಪ್ರಕಾಶ" (*ἀπαύγασμα*, *apaugasma*) ಎಂಬುದರ ಅರ್ಥವು "ಹೊಳೆಯುವದು," ಅಥವಾ "ದೇವರ ಪ್ರಭಾವವನ್ನು ಪ್ರತಿಬಿಂಬಿಸುವದು" (RSV) ಎಂದಾಗಿರಬಲ್ಲದು. Jerusalem Bible ನಲ್ಲಿ "ದೇವರ ಪ್ರಭಾವದ ಪ್ರಕಾಶಿಸುವ ಬೆಳಕು ಮತ್ತು ಆತನ ಸ್ವಭಾವದ ಪರಿಪೂರ್ಣವಾದ ತದ್ರೂಪ" ಎಂದಿರುತ್ತದೆ. ಹೇಗೂ, ಚಂದ್ರನು ಸೂರ್ಯನ ಬೆಳಕಿನ ಪ್ರತಿಬಿಂಬವಾಗಿರುವಂತೆಯೇ ಆತನು ದೇವರ ಪ್ರಭಾವವನ್ನು ಪ್ರತಿಬಿಂಬಿಸುತ್ತಾನೆಂದು ಹೇಳುವದು ತಪ್ಪಾಗಿರುತ್ತದೆ. ಒಂದು "ನೇರವಾದ ಹೊಳೆಯುವಿಕೆ" ಎಂಬುದು ಉತ್ತಮ ಬಣ್ಣನೆಯಾಗುವದು.

"ದೇವರ ಪ್ರಭಾವದ ಪ್ರಕಾಶವೂ" ಎಂಬ ಪದವು "ಅದೃಶ್ಯನಾದ ದೇವರ ಪ್ರತಿರೂಪ" (ಕೊಲೊಸ್ಸೆ 1:15) ಮತ್ತು "ದೇವರ ಸ್ವರೂಪ" (ಫಿಲಿಪ್ಪಿ 2:6) ಎಂಬುದರೊಂದಿಗೆ ಸಮಾನತೆಯನ್ನು ಹೊಂದಿರುತ್ತದೆ. ದೇವರ ಪ್ರಭಾವವು ಹಳೆಯ ಒಡಂಬಡಿಕೆಯಲ್ಲಿ ಕಣ್ಣು ಕುರುಡಾಗಿಸುವಂತಹ ಬೆಳಕಾಗಿತ್ತು (ವಿಮೋಚನಕಾಂಡ 34:29-35). ಈ ಪ್ರಕಾಶಮಾನತೆಯು ರೂಪಾಂತರಗೊಂಡ ವೇಳೆಯಲ್ಲಿ ಕ್ರಿಸ್ತನು ಕಾಣಿಸಿಕೊಂಡ ರೂಪವನ್ನು ಜ್ಞಾಪಿಸುವಂತಿರುತ್ತದೆ (ಮತ್ತಾಯ 17:2; ಮಾರ್ಕ 9:2, 3; ಲೂಕ 9:29). ಆ ಕ್ಷಣದಲ್ಲಿ, ಆತನು *shekinah* (ಅಕ್ಷರಶಃ, "ವಾಸಿಸು") ದಿಂದ ಹೊಳೆದನು, ಅಂದರೆ, ಹಳೆಯ ಒಡಂಬಡಿಕೆಯಲ್ಲಿ ಚಿತ್ರಿಸಲ್ಪಟ್ಟಿರುವ ರೀತಿಯ ದೇವರ ಪ್ರಸನ್ನತೆಯಿಂದ ಹೊಳೆದನು. ಕಾಣಿಸಿಕೊಂಡ ಪ್ರಭಾವವು ಅಪೊಸ್ತಲರಲ್ಲಿ ತಾವು ಇನ್ನು ಮೇಲೆ ಮೋಶೆಗೆ ಕಿವಿಗೊಡಬಾರದು, ಆದರೆ ಯೇಸುವನ್ನೇ ತಮ್ಮ ಅಂತಿಮ ಅಧಿಕಾರವೆಂದು ಅಂಗೀಕರಿಸಿಕೊಳ್ಳಬೇಕು ಎಂಬ ಮನವರಿಕೆಯನ್ನು ಉಂಟು ಮಾಡಿರತಕ್ಕದ್ದಾಗಿದೆ. ಅದರ ಜೊತೆಗೆ ದೇವರು ಆ ಸತ್ಯವನ್ನು ಒತ್ತಿ ಹೇಳುವದಕ್ಕಾಗಿ "ಈತನ ಮಾತನ್ನು ಕೇಳಿರಿ!" ಎಂದು ಹೇಳಿದನು.

ಇಲ್ಲಿ ಬಣ್ಣಿಸಲಾಗಿರುವ ಪ್ರಭಾವವು ಕ್ರಿಸ್ತನಲ್ಲಿ ದೇವತ್ವವು ನೆಲೆಯಾಗಿರುತ್ತ ದೆಂಬುದನ್ನು ತೋರ್ಪಡಿಸುವಿಕೆಯಾಗಿದೆ (ಕೊಲೊಸ್ಸೆ 2:9). ಯೇಸುವಿನ ಸ್ವಭಾವವೇ ದೇವತ್ವವುಳ್ಳದ್ದೆಂಬುದನ್ನು ತೋರಿಸಿ ಕೊಡುವದು ಲೇಖಕನ ಉದ್ದೇಶಗಳಲ್ಲೊಂದೆಂಬುದು ಸ್ಪಷ್ಟವಾಗಿರುತ್ತದೆ.

ಆತನ ದೇವತ್ವವನ್ನು ಸಾಭಿತುಪಡಿಸುವದಕ್ಕೆ ವಾಗ್ವಾದ ಮಾಡುವದು ನಾಲ್ಕನೆಯ

ಶತಮಾನದಲ್ಲಿ ಅವಶ್ಯಕವಾಗಿತ್ತು ಯಾಕೆಂದರೆ ಕ್ರಿಸ್ತನನ್ನು ಅಪಾರ್ಥಮಾಡಿಕೊಂಡರೆ ಸುವಾರ್ತೆಯ ಇಡೀ ಸ್ವಭಾವವನ್ನೇ ಕಡೆಗಣಿಸಿದಂತಾಗುತ್ತಿತ್ತು. ವಾಸ್ತವದಲ್ಲಿ, ನಾವು ಕ್ರಿಸ್ತನ ಕುರಿತು ತಪ್ಪಾದ ಕಲ್ಪನೆಯನ್ನು ಹೊಂದಿದ್ದರೆ ಮತ್ತು ಆತನನ್ನು ಕೇವಲ ಒಂದು "ದೇವತ್ವದ ಅವತಾರ ಮತ್ತು ದೇವರ ಸತ್ವ ಅಲ್ಲ" ಎಂದು ಎಣಿಸುವದಾದರೆ ನಮ್ಮ ಇಡೀ ಜೀವಿತಗಳೇ ತಪ್ಪಾದವುಗಳಾಗುವವು. ಈ ಹೇಳಿಕೆಯು "ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವೇ ದೇವರಾಗಿತ್ತು" (ಯೋಹಾನ 1:1) ಎಂಬ ಯೋಹಾನನ ಘೋಷಣೆಯೊಂದಿಗೆ ಸಮಾನತ್ವವುಳ್ಳದ್ದಾಗಿದೆ.

ದೇವರು ನಮ್ಮೊಂದಿಗೆ ತನ್ನ ಚಿತ್ತದ ಕುರಿತು ಮಾತಾಡುವವನಾಗಿದ್ದಾನೆ ಎಂಬುದನ್ನು ತೋರಿಸಿ ಕೊಟ್ಟ ಬಳಿಕ, ಲೇಖಕನು ಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರಭಾವದ ಕುರಿತು ಒತ್ತಿ ಹೇಳಿದನು. ಪ್ರಥಮ ಶತಮಾನದಲ್ಲಿ ಈ ಸತ್ಯವು ಏಕೆ ಜೀವಧಾರಕವಾಗಿತ್ತು? ಯೆಹೂದ್ಯರು ದೇವಾಲಯದ ಸೌಂದರ್ಯದಲ್ಲಿ ಹೆಚ್ಚಳ ಪಟ್ಟುಕೊಳ್ಳುತ್ತಿದ್ದರು ಮತ್ತು ಅದನ್ನು ತಮ್ಮ ಮಧ್ಯದಲ್ಲಿ ದೇವರ ಪ್ರಸನ್ನತೆಯಿರುವಿಕೆಯನ್ನು ತೋರ್ಪಡಿಸುವಂತದ್ದೆಂದು ಕಂಡರು. ಕ್ರಿಸ್ತನ ಪ್ರಭಾವವು, ಶೀಘ್ರದಲ್ಲಿಯೇ (ಕ್ರಿ.ಶ. 70ರಲ್ಲಿ) ನಾಶಗೊಳ್ಳಲಿದ್ದ ದೇವಾಲಯದ ಪ್ರಭಾವಕ್ಕಿಂತಲೂ ಎಷ್ಟೋ ಹೆಚ್ಚು ಅಧಿಕವಾಗಿತ್ತೆಂಬುದನ್ನು ಯೆಹೂದಿ ಕ್ರೈಸ್ತರು ಅರ್ಥಮಾಡಿಕೊಳ್ಳಬೇಕಾಯಿತು.

ಕ್ರಿಸ್ತನು **ಆತನ ತತ್ವದ ಮೂರ್ತಿಯೂ** (ಸ್ವಭಾವದ ಪ್ರತಿರೂಪ) ಆಗಿದ್ದಾನೆ. ಒಂದು ನಾಣ್ಯವು ಅದು ಯಾವದರಿಂದ ತಯಾರಿಸಲ್ಪಟ್ಟಿತೋ ಆ ಛಾಪು ಅಥವಾ ಠಸ್ಸೆಯ[18] ರೂಪವನ್ನು ಪ್ರತಿನಿಧಿಸುವ ರೀತಿಯಲ್ಲಿಯೇ, ದೇವಕುಮಾರನು "ಆತನ ಸ್ವಭಾವದ ಛಾಪನ್ನೇ ಹೊಂದಿರುತ್ತಾನೆ" (RSV). "ಸ್ವರೂಪ" (χαρακτήρ, *charaktēr*) ಎಂಬುದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ ಮತ್ತು ಒಂದು ನಿಖರವಾದ ತದ್ರೂಪವನ್ನು ಸೂಚಿಸುತ್ತದೆ. ಇದು ಆಂಗ್ಲದಲ್ಲಿ "character" ಎಂಬ ಪದವು ನೀಡುವಂತಹ ಅರ್ಥವನ್ನು ನೀಡುವದಿಲ್ಲ. ಬೇರೊಂದು ಕಡೆಯಲ್ಲಿ ಯೇಸುವು ದೇವರ *eikōn* ("ದೇವರ ಪ್ರತಿರೂಪ") ಎಂದು ಕರೆಯಲ್ಪಟ್ಟಿದ್ದಾನೆ (2 ಕೊರಿಂಥ 4:4; ಕೊಲೊಸ್ಸೆ 1:15). 1 ಕೊರಿಂಥ 11:7ರಲ್ಲಿ ಪುರುಷನು "ದೇವರ ಪ್ರತಿರೂಪ" [*eikōn*] ಎಂದು ಕರೆಯಲ್ಪಟ್ಟಿದ್ದಾನೆ. *Charaktēr* ಎಂಬುದು ನಿಖರವಾದ (ಕರಾರುವಾಕ್ಕಾದ) ತದ್ರೂಪವನ್ನು ಸೂಚಿಸಿದರೆ, *eikōn* ಎಂಬುದು ಪ್ರತಿನಿಧಿಸುವ ಗುಣಗಳನ್ನು ಮಾತ್ರವೇ ಸೂಚಿಸುತ್ತದೆ. ಯೇಸುವು ತನ್ನ ತಂದೆಯಾಗಿರುವ ದೇವರ ಎಲ್ಲಾ ಗುಣಲಕ್ಷಣಗಳನ್ನು ಹೊಂದಿರುತ್ತಾನೆ. ಪ್ರಾಚೀನ ಬರಹಗಾರನಾದ Mopsuestiaದ Theodoreನು (ಕ್ರಿ.ಶ. 350-428) ಹೇಳಿದ್ದೇನೆಂದರೆ "ವಾಕ್ಯವು ದೇವರಾಗಿದ್ದನು" (ಯೋಹಾನ 1:1) ಎಂಬುದು "ಈತನು . . . ಆತನ ತತ್ವದ ಮೂರ್ತಿ" ಎಂಬುದಕ್ಕೆ ಸಮಾನವಾದದ್ದು ಎಂಬದೆ.[19]

ಹಾಗಾದರೆ, ಈ ಭಾಷೆಯ ಪ್ರಕಾರ, ಯೇಸುವು ಒಂದು "ತದ್ರೂಪ" – ಆದರೆ ಇದರರ್ಥವು ನಿಜವಾದದ್ದಕ್ಕಿಂತ ಬೇರೊಂದು ಕಾರ್ಯವೆಂದು ಆಗಿರುವದಿಲ್ಲ. "ಅನುಭವಾತೀತವಾದ ಸತ್ಯವನ್ನು ಕರಾರುವಾಕ್ಕಾಗಿ ಬಣ್ಣಿಸುವದಕ್ಕೆ ಮಾನವ ಭಾಷೆಯು ಸಾಕಾದದ್ದಾಗಿರುವದಿಲ್ಲ"[20] ಎಂಬದಾಗಿ Chrysostom ವಿವರಿಸುತ್ತಾನೆ. ಬೇರೊಂದು ಕಡೆಯಲ್ಲಿರುವ ಸರಳವಾದ ವಾಕ್ಯಭಾಗದ ಉಲ್ಲಂಘನೆ ಮಾಡುತ್ತಾ ತಪ್ಪಾದ ಮುಕ್ತಾಯಕ್ಕೆ ಬರುವಂತೆ ಅನುವಾದಿತ ಪದಗಳಿಗೆ ನಾವು ಅವಕಾಶ ಕೊಡಬಾರದು! ಕ್ರಿಸ್ತನು ತಂದೆಯೊಂದಿಗೆ ಹೊಂದಿರುವ ನಿಕಟತೆಯ ಕಾರಣದಿಂದ ಬೇರೆ ಯಾವದೇ ಜೀವಿಗಿಂತ ಅಥವಾ ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ. ತಂದೆಗಿಂತ ವ್ಯತ್ಯಾಸವಾದ ಮತ್ತೊಬ್ಬ ವ್ಯಕ್ತಿಯಾಗಿದ್ದರೂ, ಆತನು ದೈವಿಕನಾಗಿದ್ದಾನೆ, ಮತ್ತು

ದೇವರ ತಿರುಳನ್ನೇ ಹೊಂದಿದವನಾಗಿದ್ದಾನೆ (ಯೋಹಾನ 10:30; 17:20, 21)[21] ಕುಪಂಥಗಳು, ಪ್ರಾಚೀನವಾಗಿರಬಹುದು ಅಥವಾ ಆಧುನಿಕವಾಗಿರಬಹುದು, ಅವುಗಳು ಯೇಸುವನ್ನು ಒಬ್ಬ ನಿರ್ಲಯ ಮನುಷ್ಯ ಅಥವಾ ಅತ್ಯುನ್ನತ ದೇವದೂತನು ಎಂದು ಸಾರುವವುಗಳಾಗಿದ್ದು ಇಬ್ರಿಯರಿಗೆ ಬರೆದ ಪತ್ರಿಕೆಯ ಅರ್ಥವನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳುವವುಗಳಾಗಿವೆ. ಯೇಸುವು ತಂದೆಯ ಸ್ವಭಾವವನ್ನು ಹೊಂದಿದ್ದಾನೆ: ಇದು ದಿಗ್ಭ್ರಮೆ ಹಿಡಿಸುವಂತದ್ದು, ಆದರೆ ಇದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಘೋಷಿಸಲ್ಪಟ್ಟಿರುವ ಸತ್ಯವಾಗಿದೆ! ಈ ವ್ಯಕ್ತಗೊಳಿಸುವಿಕೆಯು ಬಹಳ ದೊಡ್ಡದು ಮತ್ತು ಕ್ರಿಸ್ತನ ದೇವತ್ವದ ಬಗ್ಗೆ ಅತ್ಯಂಥ ಗಹನವಾದ ಘೋಷಣೆಯಾಗಿರುತ್ತದೆ. "ವ್ಯಕ್ತಿ" ಅಥವಾ "ಸ್ವಭಾವ"ವು (ὑπόστασις, *hupostasis*) ಒಬ್ಬನ ಅಸ್ತಿತ್ವ ಅಥವಾ ತಿರುಳು (ಸತ್ವ) ಆಗಿರುತ್ತದೆ. ಈ ವಾಕ್ಯಭಾಗವು, ಪ್ರಶ್ನೆಯೇ ಇಲ್ಲದೆ, ಯೇಸುವು ದೇವರಂತಹ ಅದೇ ಸ್ವಭಾವವನ್ನು ಹೊಂದಿರುವವನೆಂಬ ದೃಷ್ಟಿಕೋನವನ್ನು ಬೆಂಬಲಿಸುತ್ತದೆ.

ನಂತರ, ಕ್ರಿಸ್ತನು **ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು** ಎಂಬದಾಗಿ ಲೇಖಕನು ಹೇಳುತ್ತಾನೆ. ಇದು ಕೊಲೊಸ್ಸೆ 1:17ರಲ್ಲಿ ಸಿಕ್ಕುವ ಅದೇ ಯೋಚನೆಯೇ ಆಗಿರುತ್ತದೆ: "ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು." ಇದು ಒದಗಿಸಲ್ಪಡುವ ಮೂಲಕ ಕಾರ್ಯಮಾಡುವದರ ಬಣ್ಣನೆಯಾಗಿರುತ್ತದೆ. ಲೋಕವು ದೇವರ "ವಾಕ್ಯ" (ῥῆμα, *rhēma*) ದಿಂದ ಸೃಷ್ಟಿಸಲ್ಪಟ್ಟ ರೀತಿಯಲ್ಲಿಯೇ, ಅದು ಆತನ ವಾಕ್ಯದ ಮೂಲಕವೇ – ಆತನ ಸಂರಕ್ಷಿಸುವ ಶಕ್ತಿಯಿಂದ – ಪೋಷಿಸಲ್ಪಡುತ್ತದೆ. ಆತನು ಸಮಸ್ತವನ್ನೂ ಸೃಷ್ಟಿಸಿರುವದು ಎಷ್ಟು ನಿಶ್ಚಯವೋ, ಆತನಿಲ್ಲದೆ ಯಾವದೂ ಅಸ್ತಿತ್ವದಲ್ಲಿರಲಾಗದು.

ಇಲ್ಲಿ ತಿಳಿಸಲ್ಪಟ್ಟಿರುವ ಹೇಳಿಕೆಯ ಅರ್ಥವು ಆತನು ವಿಶ್ವದ ಕ್ರಮವನ್ನು ಮತ್ತು ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗುತ್ತಾನೆ ಎಂದು ಸಹ ಆಗಿರುತ್ತದೆ. "ಸಮಸ್ತ" ಎಂಬುದು ದೇವದೂತರು, ಮನುಷ್ಯರು, ಸೂರ್ಯರು, ಚಂದ್ರರು, ಮತ್ತು ನಕ್ಷತ್ರಗಳನ್ನು ಒಳಗೊಂಡಿರುತ್ತದೆ (ನೋಡಿರಿ ಆದಿಕಾಂಡ 1:14-19). ಇದರರ್ಥವು ಯೇಸು ಪ್ರತಿ ದಿನವೂ ಒಂದು ಅದ್ಭುತವನ್ನು ಮಾಡುವ ಮೂಲಕ ಅಥವಾ ಒಂದು ಮಾತನ್ನು ಆಡುವ ಮೂಲಕ ವಿಶ್ವದ ಕ್ರಮವನ್ನು ಕಾಪಾಡಿಕೊಂಡು ಹೋಗುತ್ತಾನೆಂದೋ? ಇಲ್ಲ, ಆತನು ಕೇವಲ ಒಂದು ಭೌತಿಕ ವ್ಯವಸ್ಥೆಯನ್ನು ಸ್ಥಳದಲ್ಲಿ ವ್ಯವಸ್ಥೆ ಮಾಡಿರುತ್ತಾನಷ್ಟೆ, ಅದು ಒಂದು ಕ್ರಮವಾದ ವಿಧದಲ್ಲಿ ವರ್ತಿಸುತ್ತದೆ. ಸೂರ್ಯನು ಪ್ರತಿ ದಿನ ಮುಂಜಾನೆ ಕಾಣಿಸಿಕೊಳ್ಳುತ್ತಾನೆ ಯಾಕೆಂದರೆ ಆದಿಯಿಂದ ಇರುವ ಆ ವ್ಯವಸ್ಥೆಯನ್ನು ಬದಲಾಯಿಸುವಂತೆ ಯೇಸುವು ನುಡಿದಿರುವದಿಲ್ಲ. ನಾವು ಅದನ್ನು ದೇವರ ಸಾಮಾನ್ಯವಾದ ಒದಗಿಸುವಿಕೆ ಎಂದು ಕರೆಯುತ್ತೇವೆ.

ದೇವರ ನುಡಿದ ವಾಕ್ಯವು ಶೂನ್ಯದಿಂದ ಲೋಕಗಳನ್ನು ಉಂಟು ಮಾಡಿತು (ಇಬ್ರಿಯ 11:3). ಯೇಸುವೇ "ಎಲ್ಲಾ ಕಾರ್ಯಗಳನ್ನು ಅವುಗಳಿಗೆ ನೇಮಕವಾಗಿರುವ ಪಥದಲ್ಲಿ ಮುಂದಕ್ಕೆ ಕರೆದೊಯ್ಯುವವನಾಗಿದ್ದಾನೆ."[22] ಆತನ ಪರಾಕ್ರಮದ, ಅಧಿಕಾರಯುಕ್ತ, ಮತ್ತು ಪರಿಣಾಮಕಾರಿಯಾದ ವಾಕ್ಯದ ಶಕ್ತಿಯ ಮೂಲಕವಾಗಿ ಗ್ರಹಗಳು ಅವುಗಳ ಕಕ್ಷೆಗಳಲ್ಲಿಡಲ್ಪಟ್ಟಿರುತ್ತವೆ. ದೇವರು ಸೃಷ್ಟಿಕರ್ತನೆಂಬ ಭಾವನೆಯು ಹಳೆಯ ಒಡಂಬಡಿಕೆಯ ನಂಬಿಗಸ್ತ ಯೆಹೂದ್ಯರಿಗೆ ಚೆನ್ನಾಗಿ ತಿಳಿದಿತ್ತು (ನೋಡಿರಿ ಯೆಶಾಯ 40:21, 22). ನಾವು ಈ ಯೋಚನೆಗಳನ್ನು ಹೆಚ್ಚು ಧ್ಯಾನಿಸಬೇಕಾದ ಮತ್ತು ದೇವರ ಸೃಷ್ಟಿಸುವ ಶಕ್ತಿ ಮತ್ತು ಒದಗಿಸುವಿಕೆಯಲ್ಲಿ ಪೂರ್ಣವಾಗಿ ನಂಬಿಕೆಯಿಡುವ ಅಗತ್ಯವಿರುತ್ತದೆ.

**ಕ್ರಿಸ್ತನು ಪಾಪವಿಶುದ್ಧಿಮಾಡಿದ್ದಾನೆ.** NIVಯು ಆತನು "ಪಾಪಗಳಿಗೆ ಶುದ್ಧೀಕರಣವನ್ನು ಒದಗಿಸಿದ್ದಾನೆ" ಎಂದು ಹೇಳುತ್ತದೆ. ಈ ಸರಳವಾದ ಮಾತುಗಳಲ್ಲಿ ಸುವಾರ್ತೆಯ ಹೃದಯಭಾಗ

ಸಿಕ್ಕುತ್ತದೆ. ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ, ನೈತಿಕ ಶುದ್ಧೀಕರಣವು ಕೇವಲ ಯಜ್ಞದ ಮೂಲಕ ಮಾತ್ರವೇ ಮಾಡಲ್ಪಡುವದಕ್ಕೆ ಸಾಧ್ಯವಿತ್ತು (ಇಬ್ರಿಯ 9:22). ಯೇಸುವು ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸುವ ಮೂಲಕ ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಒದಗಿಸಿದನು. ಅದರ ಪ್ರಯೋಜನವು ಏನೆಂದರೆ ನಮಗೆ ನಿರಂತರವಾಗಿ ಕ್ಷಮಾಪಣೆಯು ಲಭ್ಯವಿರುತ್ತದೆ (1 ಯೋಹಾನ 1:7). “ಮಾಡಿದ ಮೇಲೆ” (ποιησάμενος, *poiēsamenos*, ಇದು ποιέω, *poieō* ಎಂಬದರಿಂದ ಬಂದದ್ದು), ಎಂಬುದು ಒಂದು ಅನಿಶ್ಚತ ಭೂತಕಾಲರೂಪವಾಗಿದ್ದು, ಅದು ಗತಕಾಲದಲ್ಲಿ ಸಾಧಿಸಲ್ಪಟ್ಟಿತೆಂಬುದನ್ನು ತೋರಿಸುತ್ತದೆ. ಇದು ಕ್ರಿಸ್ತನ ವಿಮೋಚನಾ ಕಾರ್ಯವು ಸಂಪೂರ್ಣಗೊಂಡಿದೆ ಎಂಬುದನ್ನು ಒತ್ತಿ ಹೇಳುತ್ತದೆ, ಇದೇ ಇಬ್ರಿಯರಿಗೆ ಬರೆದ ಪತ್ರಿಕೆಯು ಹೇಳಲಿಚ್ಛಿಸುವ ಮುಖ್ಯ ಅಂಶವಾಗಿರುತ್ತದೆ.

ಯೇಸು ಕೇವಲ ನೈತಿಕವಾಗಿ ಯಾವದು ಸರಿಯೆಂಬುದನ್ನು ಕಲಿಸುವದಕ್ಕೆ ಅಥವಾ ಒಂದು ಮಾದರಿ ಅಥವಾ ಒಬ್ಬ ರಕ್ತಸಾಕ್ಷಿಯಾಗುವದಕ್ಕೆ ಮಾತ್ರವೇ ಬರಲಿಲ್ಲ. ನಮಗೆ ನಿತ್ಯಜೀವವು ಸಿಕ್ಕುವಂತಾಗಲು ಪಾಪಗಳನ್ನು ನಿವಾರಿಸುವದಕ್ಕೆ ಬಂದನು. ಹೇಗೂ, ಇಲ್ಲಿರುವ ಮಹಾನ್ ಸತ್ಯವೇನೆಂದರೆ, ದೇವಕುಮಾರನು ಪಾಪಗಳ ವಿಶುದ್ಧಿಯನ್ನು ಮಾಡಿದ್ದು ಬೇರೆ ಯಾವನೂ ಸಾಧಿಸಲಿಕ್ಕಾಗದ ಒಂದು ಕಾರ್ಯವಾಗಿರುತ್ತದೆ. ಮಹಾಯಾಜಕನಿಗೆ ಮಾಡಲಾಗದ್ದನ್ನು ಆತನು ಮಾಡಿದನು, ಯಾಕೆಂದರೆ ಯಾಜಕನ ಕಾರ್ಯವು ಕೇವಲ ಒಂದು ವರ್ಷದ ಮಟ್ಟಿಗೆ ಮಾತ್ರವೇ ಪಾಪಪರಿಹಾರವನ್ನು ಸಂಪಾದಿಸಿ ಕೊಡುತ್ತಿತ್ತು. ಅದಕ್ಕೆ ತದ್ವಿರುದ್ಧವಾಗಿ, ಯೇಸು ಸದಾಕಾಲಕ್ಕೂ ನಮ್ಮ ಪಾಪಗಳ ಸಂಪೂರ್ಣ ಪರಿಹಾರವನ್ನು ಗಳಿಸಿ ಕೊಟ್ಟನು. ಆತನು ನಮಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿ ವಿಮೋಚನೆಯ ಕಾರ್ಯವನ್ನು ಮುಂದುವರೆಸಿರುತ್ತಾನೆ (ಇಬ್ರಿಯ 7:25).

ಮಗನು ವಿಮೋಚಕನಾಗಿದ್ದಾನೆ. ನಮ್ಮ ಪಾಪಗಳ ವಿಶುದ್ಧಿಯನ್ನು ಸಾಧಿಸಿದ ಬಳಿಕ, **ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು**. ಯೇಸು ಸ್ತೇಫನನಿಗೆ ಪರಲೋಕದಲ್ಲಿ ಸಿಂಹಾಸನ ಬಲಗಡೆಯಲ್ಲಿ ಕಾಣಿಸಿಕೊಂಡಾಗ, ಆತನು ನಿಂತವನಾಗಿದ್ದನು (ಅಪೊಸ್ತಲರ ಕೃತ್ಯಗಳು 7:56)! ಇಬ್ರಿಯರಿಗೆ ಪುಸ್ತಕವು ಈಗ “ಆಸನಾರೂಢನಾದನು” ಎಂದು ಹೇಳುತ್ತದೆ, ಈ ಮೂಲಕ ಆತನು ನಿರಂತರವಾಗಿ ತನ್ನನ್ನು ಅರ್ಪಿಸಿಕೊಳ್ಳುವದನ್ನು ಮುಂದುವರೆಸುತ್ತಾನೆಂಬ ಯಾವದೇ ವಿಧವಾದ ಸಿದ್ಧಾಂತವನ್ನು ಖಂಡಿಸುತ್ತದೆ.

ಇಲ್ಲಿ ಮಾಡಿರುವ ಉಲ್ಲೇಖನವು ಕೀರ್ತನೆ 110:1ನೇ ವಚನದ್ದಾಗಿದೆ, ಅದು ಇಬ್ರಿಯರಿಗೆ ಪುಸ್ತಕದಲ್ಲಿ ಸತತವಾಗಿ ಉಲ್ಲೇಖಿಸಲ್ಪಟ್ಟಿರುವ ಮುಖ್ಯ ವಾಕ್ಯಭಾಗವಾಗಿದೆ (1:13; 8:1; 10:12, 13; 12:2). ಇಬ್ರಿಯ 10:11ನೇ ವಚನವು ಆಸನಾರೂಢನಾಗಿರುವ ಕ್ರಿಸ್ತನೊಂದಿಗೆ ಪ್ರತಿ ದಿನವೂ ನಿಂತಿರುವ ಆರೋನನ ವಂಶದ ಯಾಜಕರ ವಿರುದ್ಧ ಹೋಲಿಕೆ ಮಾಡುತ್ತದೆ. ಯೆಹೂದಿ ಯಾಜಕರಿಗೆ ಕುಳಿತುಕೊಳ್ಳುವಂತೆ ಯಾವದೇ ಅನುಗ್ರಹವು ಮಾಡಲ್ಪಟ್ಟಿರಲಿಲ್ಲ; ದೇವದರ್ಶನ ಗುಡಾರದಲ್ಲಿ ಅಸನವೇ ಇರಲಿಲ್ಲ. ಯೆಹೂದಿ ಯಾಜಕರು ಸಾಕಾಗದಂಥ ರಕ್ಷಣೆಯನ್ನು ಸಾಧಿಸಿಕೊಳ್ಳುವದಕ್ಕೆ ನಿರಂತರವಾಗಿ ಕೆಲಸ ಮಾಡುತ್ತಿದ್ದರು. ಅದಕ್ಕೆ ತದ್ವಿರುದ್ಧವಾಗಿ, ಯೇಸು ಒಂದೇ ಸಾರಿ ಶಿಲುಬೆಯ ಮೇಲೆ ಮಾಡಿದ ವಿಮೋಚನಾ ಕೆಲಸದಿಂದ ನಮ್ಮ ರಕ್ಷಣೆಯನ್ನು ಪೂರ್ಣವಾಗಿ ತಂದನು!

ಕೀರ್ತನೆ 110 ದಾವೀದನ ಮನೆತನದ ಒಬ್ಬ ರಾಜನನ್ನು ಉದ್ದೇಶಿಸಿ ಮಾತಾಡುತ್ತದೆ. ಅದು “ದಾವೀದನು ‘ಹೋಗಿ ಯೆಹೋವನ ಸನ್ನಿಧಿಯಲ್ಲಿ ಕೂತುಕೊಂಡ’ ಪ್ರಕಾರವೇ ದೈವಿಕ

ಪ್ರಸನ್ನತೆಯಲ್ಲಿ ಆಸೀನರಾಗುವದು ದಾವೀದನ ಮನೆಯವರ ರಾಜಾಧಿಕಾವಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ" (2 ಸಮುವೇಲ 7:18).[23] ಯೇಸುವಿನ ಮೆಸ್ಸೀಯತ್ವವನ್ನು ಸಾಭಿತುಪಡಿಸುವದಕ್ಕೆ ಈ ಕೀರ್ತನೆಯು ಆದಿ ಸಭೆಯ ನೆಚ್ಚಿನ ಪುರಾವೆಯ ವಾಕ್ಯಭಾಗವಾಯಿತು. (ನೋಡಿರಿ ಮಾರ್ಕ 12:37; ಅಪೊಸ್ತಲರ ಕೃತ್ಯಗಳು 2:34; 1 ಕೊರಿಂಥ 15:25; ಎಫೆಸ 1:20.) ಇದನ್ನು ಆತನ ಕೆಲಸವು ಪೂರ್ಣಗೊಂಡಿತೆಂಬುದನ್ನು ತೋರಿಸುವದಕ್ಕೆ ಮಾತ್ರವಲ್ಲ, ಆದರೆ ಆಸನಾರೂಢನಾಗಿರುವ ವೇಳೆ ಆತನು ದೇವರ ಸಂಗಡ ಆಳ್ವಿಕೆಯನ್ನು ಸಹ ಮಾಡುತ್ತಾನೆಂಬುದನ್ನು ತೋರಿಸುವದಕ್ಕೆ ಬಳಸಲಾಯಿತು (ಅಪೊಸ್ತಲರ ಕೃತ್ಯಗಳು 2:33-36). ಆತನು ಒಬ್ಬ "ಪ್ರಭುವೂ ರಕ್ಷಕನೂ" ಆಗಿದ್ದಾನೆ (ಅಪೊಸ್ತಲರ ಕೃತ್ಯಗಳು 5:31) ಮತ್ತು ಆತನು ತನ್ನ ತಂದೆಯ ಸಂಗಡ ಸಿಂಹಾಸನಾರೂಢನಾಗಿದ್ದಾನೆ!

## ಕ್ರಿಸ್ತನು ದೇವರ ಮಗನು, ದೇವದೂತರಿಗಿಂತ ಶ್ರೇಷ್ಠನು (1:4-14)

**1:4-7**

**4ಈತನು ದೇವದೂತರಿಗಿಂತಲೂ ಉತ್ತಮನಾದನು; ಅವರಿಗಿಂತ ಶ್ರೇಷ್ಠವಾದ ಹೆಸರನ್ನು ಹೊಂದಿದನಲ್ಲಾ; ಹೇಗಂದರೆ –**

**5ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ**
**ಎಂತಲೂ**
**ನಾನು ಅವನಿಗೆ ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು**
**ಎಂತಲೂ ದೇವರು ತನ್ನ ದೂತರೊಳಗೆ ಯಾವನಿಗಾದರೂ ಎಂದಾದರೂ ಹೇಳಿದ್ದುಂಟೋ?**
**6ಇದಲ್ಲದೆ ಆತನು ತನ್ನ ಚೊಚ್ಚಲ ಮಗನನ್ನು ಭೂಲೋಕದೊಳಗೆ ತಿರಿಗಿ ಬರಮಾಡುವಾಗ**
**ದೇವರ ದೂತರೆಲ್ಲರೂ ಆತನಿಗೆ ಅಡ್ಡ ಬೀಳಲಿ 7ಎಂದು ಹೇಳುತ್ತಾನೆ. ದೂತರ ವಿಷಯದಲ್ಲಿ ಹೇಳುವದೇನಂದರೆ –**
**ದೇವರು ತನ್ನ ದೂತರನ್ನು ಗಾಳಿಗಳನ್ನಾಗಿಯೂ**
**ತನ್ನ ಸೇವಕರನ್ನು ಅಗ್ನಿಜ್ವಾಲೆಯನ್ನಾಗಿಯೂ ಮಾಡುತ್ತಾನೆ ಎಂಬದು.**

4 ಮತ್ತು 5 ವಚನಗಳಲ್ಲಿ, ಲೇಖಕನು ದೇವದೂತರಿಗೆ ಸಂಬಂಧಿಸಿದಂತೆ ಯೇಸುವಿಗಿರುವ ಉನ್ನತವಾದ ಸ್ಥಾನ ಹಾಗೂ ಇರುವಿಕೆ ಬಗ್ಗೆ ಮಾತಾಡುತ್ತಾನೆ. ಆತನು ಹೇಳಲಿಚ್ಛಿಸುವ ಅಂಶವು ಏನೆಂದರೆ ಯಾವನೂ ಕ್ರೈಸ್ತತ್ವದಿಂದ ವಿಮುಖರಾಗಬಾರದು, ಯಾಕೆಂದರೆ ಕ್ರಿಸ್ತನು ದೇವದೂತರಿಗಿಂತಲೂ, ಮಾತ್ರವಲ್ಲದೆ ಪ್ರವಾದಿಗಳಿಗಿಂತಲೂ ಶ್ರೇಷ್ಠನಾಗಿದ್ದಾನೆ. ಆತನು ವಿರುದ್ಧ ಹೋಲಿಕೆಗಳನ್ನು ಸತ್ಯದ ಮೂರು ಗೆರೆಗಳನ್ನು ಎಳೆಯುವ ಮೂಲಕ ಮಾಡುವವನಾಗಿ, (1) ಕ್ರಿಸ್ತನು ಏನಾದನು, (2) ಆತನು ಯಾರು, ಮತ್ತು (3) ಆತನಿಗಿರುವ ಘನತೆಯ ಸ್ಥಾನ ಇವುಗಳನ್ನು ಒತ್ತಿ ಹೇಳುತ್ತಾನೆ.

"ದೇವದೂತರ ಮೇಲೆ ಕ್ರಿಸ್ತನು ಶ್ರೇಷ್ಠನು ಎಂಬುದರ ಬಗ್ಗೆ ವಾಗ್ವಾದ ಮಾಡುವದೇಕೆ?" ಎಂದು ನಾವು ಕೇಳಬಹುದು. ಗತ ಯೆಹೂದಿ ಮತದಲ್ಲಿ, ಅವರು ಅತ್ಯಂಥ ಉನ್ನತಕ್ಕೇರಿಸಲ್ಪಟ್ಟಿರುವ ಜೀವಿಗಳೆಂದು[24] ಮತ್ತು ಪರಲೋಕದ ಪವಿತ್ರಸ್ಥಳದಲ್ಲಿ ಸೇವೆ ಮಾಡುವ ಯಾಜಕನು ಮಿಕಾಯೇಲನಾಗಿದ್ದನು ಎಂದು ಭಾವಿಸಲಾಗುತ್ತಿತ್ತು.[25] ಈ ಆತ್ಮೀಕ ಕೆಲಸಕ್ಕೆ ದೇವದೂತರಲ್ಲಿಯೇ ಅತ್ಯಂತ ಶ್ರೇಷ್ಠನಾದ ದೂತನ ಸೇವೆಯ ಅಗತ್ಯವಿರುತ್ತದೆಂದು

ಯೆಹೂದ್ಯರು ನಂಬಿದ್ದರು.

ದೇವದೂತರ ಕುರಿತಾದ ಗೊಂದಲವು ಮೃತ ಸಮುದ್ರದಲ್ಲಿ ಸಿಕ್ಕ ಪ್ರೇರಿತವಲ್ಲದ ವಾಕ್ಯಭಾಗಗಳಲ್ಲಿ ಸಿಕ್ಕುವದಾಗಿದ್ದು ಅವುಗಳು ಇಬ್ಬರು ಮೆಸ್ಸೀಯರ ಬಗ್ಗೆ ತಿಳಿಸುತ್ತವೆ. ಇವರಲ್ಲಿ ಒಬ್ಬನು ಅರಸುತನದ ವ್ಯಕ್ತಿಯಾಗಿರಬೇಕಾಗಿದ್ದು ಆತನ ಆಳ್ವಿಕೆಯು ಆತನ ಯಾಜಕತ್ವದ ಚಟುವಟಿಕೆಗಳಿಗೆ ಅಧೀನವಾಗಿರಬೇಕಿತ್ತು. ಇಬ್ಬರು ವ್ಯಕ್ತಿಗಳು ಪ್ರಧಾನದೂತನಾದ ಮಿಕಾಯೇಲನ ಅಧೀನದಲ್ಲಿರಬೇಕಿತ್ತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದರಲ್ಲಿನ ಉಪದೇಶವು "ಬರಲಿರುವ ಲೋಕವನ್ನು" ಒಬ್ಬ ದೇವದೂತ ಸಂಬಂಧಿತ ಜೀವಿಯು ಆಳುವನು ಎಂಬದೇ.[26]

ದೇವದೂತರು ಧರ್ಮಶಾಸ್ತ್ರ ಕೊಡುವಿಕೆಯಲ್ಲಿ ಪಾಲುಗಾರರಾಗಿದ್ದರಾದ್ದರಿಂದ, ಯೆಹೂದ್ಯರ ಮಧ್ಯದಲ್ಲಿ ಅವರಿಗೆ ಬಹಳ ಸನ್ಮಾನವಿತ್ತು. ಈ ದೇವದೂತರ ಕುರಿತ ಸತ್ಯವು ಲೇಖಕನು ಮುಂದಿಡುತ್ತಿದ್ದ ಕಾರ್ಯಕ್ಕೆ ವಾದದ ಅಗತ್ಯವನ್ನೆಬ್ಬಿಸುವಕ್ಕೆ ಸಾಕಾಗಿತ್ತು.

**ವಚನ 4.** ಕ್ರಿಸ್ತನು ಏನಾದನು ಎಂಬುದರ ಕಾರಣದಿಂದ ಆತನು ದೇವದೂತರಿಗಿಂತ ಶ್ರೇಷ್ಠನು ಎಂದು ಈ ವಚನವು ಹೇಳುತ್ತದೆ: **ಈತನು ದೇವದೂತರಿಗಿಂತಲೂ ಉತ್ತಮನಾದನು; ಅವರಿಗಿಂತ ಶ್ರೇಷ್ಠವಾದ ಹೆಸರನ್ನು ಹೊಂದಿದನಲ್ಲಾ.** "ಆದನು" ಎಂಬುದು "ಮಾಡಲ್ಪಟ್ಟನು" ಎಂಬುದಕ್ಕಿಂತ ಉತ್ತಮವಾದ ಅನುವಾದವಾಗಿರುತ್ತದೆ, ಯಾಕೆಂದರೆ ಎರಡನೆಯ ಅನುವಾದವು ಆತನು "ಮಾಡಲ್ಪಟ್ಟ" ಜೀವಿ ಎಂಬರ್ಥವನ್ನು ಕೊಡಬಲ್ಲದ್ದಾಗಿದೆ. "ಮಾಡಲ್ಪಟ್ಟು" ಎಂಬುದು ಆತನು ದೇವತ್ವದಲ್ಲಿ ಎರಡನೆಯ ಸದಸ್ಯನು ಮತ್ತು "ಸಮಸ್ತವನ್ನೂ" ಉಂಟು ಮಾಡಿದವನು ಎಂಬ ಯೋಹಾನನ ಸಾಕ್ಷಿಗೆ ವಿರುದ್ಧವಾಗುತ್ತದೆ (ಯೋಹಾನ 1:3). "ಮಾಡಲ್ಪಟ್ಟು" ಎಂಬ ಅನುವಾದವನ್ನು ಬಳಸುವದಾದರೆ, ಅದು ಕೇವಲ ಆತನ ಮಾನವ ಸ್ವಭಾವವನ್ನು ಸೂಚಿಸಬಹುದಾಗಿದೆ. ದೈವಿಕ, ನಿತ್ಯನಾದ ಮಗನಾದ ಯೇಸು, ಒಬ್ಬ ಮನುಷ್ಯನಾದನು.

ಯೇಸುವಿನ ಶ್ರೇಷ್ಠವಾದ ಹೆಸರು ಆತನ ವಿಧೇಯತೆ ಹಾಗೂ ಮಹಿಮೆಗೊಳಿಸಲ್ಪಡುವಿಕೆ ಮೂಲಕ ಬಂದಿತು (ಫಿಲಿಪ್ಪಿ 2:8-11). ಆತನು ಏನೆಲ್ಲಾ ಆಗಿದ್ದಾನೆ ಮತ್ತು ಮಾಡಿದ್ದಾನೆಂಬದರ ಕಾರಣದಿಂದ, ಆತನು "ಮಗನು" ಎಂಬ ಹೆಸರು ಹೊಂದಿದ್ದಾನೆ, ಅದು ದೇವದೂತರನ್ನು ಬಣ್ಣಿಸುವದಕ್ಕೆ ಬಳಸಲಾಗಿರುವ ಯಾವದೇ ಹೆಸರಿಗಿಂತಲೂ ಎಷ್ಟೋ ಉತ್ತಮವಾದದ್ದು.

ಮಗನು ದೇವದೂತರಿಗಿಂತಲೂ ಒಂದು ಶ್ರೇಷ್ಠವಾದ ಸ್ಥಾನ, ಸವಲತ್ತು, ಮತ್ತು ಅಧಿಕಾರ ಹೊಂದಿರುತ್ತಾನೆ. ದೇವರ ದೂತರು ದೇವರ ಸೃಷ್ಟಿ ಮಂಡಲದಲ್ಲಿ ಕೇವಲ ಸೇವಕರು ಅಥವಾ ದಾಸರು ಆಗಿದ್ದಾರೆ. "ಉತ್ತಮ" (κρείττων, *kreittōn*) ಎಂದರೆ RSVಯು ಅನುವಾದಿಸಿರುವ ಪ್ರಕಾರ "ಉಚ್ಚ" ಎಂದಾಗಿರುತ್ತದೆ. "ಅಷ್ಟೊಂದು" ಎಂಬ ಅರ್ಥವನ್ನು ನೀಡುವ τοσοῦτος (*tosoutos*), ಮತ್ತು "ಉತ್ತಮ" ಎಂಬ ಅರ್ಥವನ್ನು ನೀಡುವ *kreittōn* ಎಂಬ ಪದಗಳು ಮಗನ ಸ್ಥಾನವನ್ನು ಬಣ್ಣಿಸುತ್ತವೆ. ಒಂದಕ್ಕಿಂತ ಉತ್ತಮವಾದದ್ದು ಎಂಬ ಯೋಚನೆಯು ಇಬ್ರಿಯರಿಗೆ ಪುಸ್ತಕದಲ್ಲಿ ವಿವಿಧ ರೂಪಗಳಲ್ಲಿ ಬಳಸಲ್ಪಟ್ಟಿದೆ (ಹನ್ನೆರಡು ವಚನಗಳಲ್ಲಿ: 1:4; 6:9; 7:7 ["ಎಷ್ಟೋ ಶ್ರೇಷ್ಠವಾದ"], 19, 22; 8:6; 9:23; 10:34; 11:16, 35, 40; 12:24).

ಯೇಸು ಕೇವಲ ಒಬ್ಬ ದೇವದೂತನೆಂದು, ಆ ಅರ್ಥದಲ್ಲಿ ಮಾತ್ರರವೇ "ದೇವರ ಮಗನು" ಆಗಿದ್ದಾನೆಂದು ಕೆಲವರು ಯೋಚಿಸಿಕೊಂಡಿರಬಹುದಾಗಿದೆ (ನೋಡಿರಿ ಯೋಬನು 1:6; 2:1; 38:7). ಅದಕ್ಕೆ ತದ್ವಿರುದ್ಧವಾಗಿ ಲೇಖಕನು, ದೇವದೂತರಿಗಿಂತಲೂ ಯೇಸು ಶ್ರೇಷ್ಠನೆಂದು ತೋರಿಸಿ ಕೊಡುತ್ತಾನೆ ಮತ್ತು ಆತನು ದೇವರ ಸಂಗಡ ಹೊಂದಿರುವ ನಿಕಟವಾದ ಸ್ಥಾನದ

ಮೂಲಕ ಈ ಸತ್ಯವನ್ನು ತೋರ್ಪಡಿಸುತ್ತಾನೆ. ವಾಚಕರು ಮೊದಲು ಯೇಸುವಿನ ಸ್ವಭಾವದ ಕುರಿತಾದ ಸಮರ್ಪಕ ಬಾಹ್ಯನೋಟವನ್ನು ಹೊಂದಿಕೊಳ್ಳುವ ಹೊರತು, ಅವರು ಮೇಲೆ ಅವರ ಹಿಂಸಕರು ತರುವಂತಹ ಸಮಸ್ಯೆಗಳನ್ನು ಮತ್ತು ನಂಬಿಕೆಯ ಕೊರತೆಯನ್ನು ಎದುರಿಸುವದಕ್ಕಾಗುವದಿಲ್ಲ ಎಂದು ಲೇಖಕನು ಖಂಡಿತವಾಗಿ ಹೇಳುತ್ತಾನೆ.

ತಾನು ನರಾವತಾರವನ್ನೆತ್ತುವ ಮುಂಚೆ, ಯೇಸುವು "ವಾಕ್ಯ" (λόγος, *logos*) ಎಂದು ಕರೆಯಲ್ಪಟ್ಟನು. ಕನಿಷ್ಠ, ಆತನಿಗೆ ಯೋಹಾನ 1:1, 14ರಲ್ಲಿ ಅನ್ವಯಿಸಲ್ಪಟ್ಟಿರುವ ಪದ ಅದೇ ಆಗಿದೆ. ಒಂದು ಸಾದೃಶ್ಯವು, ಬಹುಶಃ ಅದು ದುರ್ಬಲವಾಗಿರಬಹುದಾದರೂ, ಅದೇನೆಂದರೆ ಒಂದು ವಾಕ್ಯವು ದೇವರ ಬಗ್ಗೆ ತಿಳಿಯಬಹುದಾದ ಸಕಲ ಜ್ಞಾನವನ್ನು ಒಳಗೊಂಡಿರಬಲ್ಲದಾದರೆ, ಆತನು – "logos" – ಅದನ್ನು ವ್ಯಕ್ತಪಡಿಸುವನು. ಆದದರಿಂದ, ಯೇಸುವು ದೇವರ ಮೂರ್ತರೂಪವೇ ಆಗಿದ್ದಾನೆ (ಯೋಹಾನ 14:7-11). ಆತನ ಕುರಿತಾದ ಈ ಬೋಧನೆಯು ಎಫೆಸ 1:19-21 ಮತ್ತು ಫಿಲಿಪ್ಪಿ 2:9-11ರಲ್ಲಿ ಪೌಲನು ಆತನ ವಿಷಯದಲ್ಲಿ ಹೇಳಿದ್ದರೊಂದಿಗೆ ಪೂರ್ಣ ಸಹಮತವನ್ನು ಹೊಂದಿರುತ್ತದೆ.

ಲೇಖಕನು ವಾಸ್ತವದಲ್ಲಿ ಒಂದು ಮೌನ ವಾದವನ್ನು ಮಾಡಿದನು. ಒಟ್ಟಾರೆಯಾಗಿ ಆತನು ಹೇಳಿದ್ದೇನೆಂದರೆ, "ಮಗನ ವಿಷಯದಲ್ಲಿ 'ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ' ಎಂದು ಹೇಳಲ್ಪಟ್ಟಿತಾದ್ದರಿಂದ ಮತ್ತು ಒಬ್ಬ ದೇವದೂತನ ಬಗ್ಗೆ ಆ ರೀತಿಯಾಗಿ ಏನನ್ನೂ ಹೇಳಲಿಲ್ಲವಾದ್ದರಿಂದ, ಈ ವಾಸ್ತವಾಂಶವು ದೇವದೂತರು ಯೇಸುವಿಗಿಂತ ಕಡಿಮೆಯಾದವರು ಎಂಬುದನ್ನು ಸಾಭಿತುಪಡಿಸುತ್ತದೆ" ಎಂಬದೆ. ಒಬ್ಬನು ಈ ಕೆಳಗಿನಂತೆ ಊಹೆಗಳನ್ನು ಮಾಡುವದಕ್ಕಾಗುವದಿಲ್ಲ ಎಂಬದನ್ನು ಸೂಚಿಸುತ್ತಾನೆ: "ಯಾವ ದೇವದೂತನು ಸಹ 'ಮಗನು' ಎಂದು ಕರೆಯಲ್ಪಟ್ಟಿಲ್ಲವಾದರೂ (ಈ ವಿಶೇಷ ಅರ್ಥದಲ್ಲಿ), ಈಗಲೂ ನಾವು ಒಬ್ಬ ದೂತನನ್ನು 'ಮಗನು' ಎಂದು ಕರೆಯಬಹುದು ಯಾಕೆಂದರೆ ನಾವು ಹಾಗೆ ಮಾಡುವದರ ವಿರುದ್ಧವಾಗಿ ಏನನ್ನೂ ಹೇಳಿರುವದಿಲ್ಲ." ಇಲ್ಲ, ಈ ಪತ್ರಿಕೆಯು ನಮ್ಮ ಮೇಲೆ ಕೆಳಗಿನ ತರ್ಕವನ್ನು ಹೊರಿಸುತ್ತದೆ: "ದೇವದೂತರು ಪುತ್ರರೆಂದು ಪರಿಚಯಿಸಲ್ಪಡುವ ಕುರಿತು ಏನೂ ಹೇಳಲ್ಪಟ್ಟಿರುವದಿಲ್ಲ; ಆದುದರಿಂದ, ಅಂಥ ಯಾವ ಸಂಗತಿಯೂ ಸತ್ಯವಾಗಿರಲಾರದು." ನಾವು ಸತ್ಯವಾಗಿರುವದರ ವಿರುದ್ಧದ ಮುಕ್ತಾಯಕ್ಕೆ ಬರುವಂತಹ ಯಾವದೇ ತೀರ್ಮಾನಗಳನ್ನು ಮಾಡುವದಕ್ಕಾಗುವದಿಲ್ಲ.

**ವಚನ 5.** ಯೇಸುವು ದೇವದೂತರಿಗಿಂತಲೂ ಶ್ರೇಷ್ಠನೆಂದು ತೋರಿಸುವದಕ್ಕೆ ಇಬ್ರಿಯರಿಗೆ ಪತ್ರಿಕೆಯಲ್ಲಿ ಕೊಡಲಾಗಿರುವ ಎರಡನೆಯ ಸತ್ಯವೆಂದರೆ ಆತನು ಏನಾಗಿದ್ದಾನೆಂಬ ವಾಸ್ತವಾಂಶವೇ: **ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ ಎಂತಲೂ ನಾನು ಅವನಿಗೆ ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು ಎಂತಲೂ ದೇವರು ತನ್ನ ದೂತರೊಳಗೆ ಯಾವನಿಗಾದರೂ ಎಂದಾದರೂ ಹೇಳಿದ್ದುಂಟೋ?**

"ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ" ಎಂಬುದು ಮೊದಲನೆಯ ಅಧ್ಯಾಯದಲ್ಲಿರುವ ಹಳೆಯ ಒಡಂಬಡಿಕೆಯ ಉಲ್ಲೇಖನಗಳಲ್ಲಿ ಮೊದಲನೆಯದ್ದಾಗಿದ್ದು ಅದು ಕೀರ್ತನೆ 2:7ರಿಂದ ತೆಗೆದುಕೊಂಡದ್ದಾಗಿದೆ. ಈ ನಿರ್ದಿಷ್ಟವಾದ ಕೀರ್ತನೆಯನ್ನು ಪ್ರಕಟನೆ 12:5ರಲ್ಲಿ ಮತ್ತು 19:15ರಲ್ಲಿ ಯೇಸುವಿಗೆ, ಹಾಗೂ ಪ್ರಕಟನೆ 2:27ರಲ್ಲಿ ಆತನ ರಾಜ್ಯದ ಆಳ್ವಿಕೆಯಲ್ಲಿ ಪಾಲುಗಾರರಾಗುವವರಿಗೆ ಅನ್ವಯಗೊಳಿಸಬಹುದಾಗಿದೆ.

ಕೀರ್ತನೆ 2:7 ಒಬ್ಬ ವಿಶೇಷನಾದ ದೇವದೂತನಿಗೆ ಅನ್ವಯವಾಗುತ್ತದೆಂದು ಯೆಹೂದ್ಯರು ಯೋಚಿಸಿಕೊಂಡಿರಬಹುದು. ಉದಾಹರಣೆಗೆ, ಒಂದು ವೇಳೆ ಒಬ್ಬ ರಬ್ಬಿಯನ್ನು "ದೇವರು

ಯಾರನ್ನು 'ಮಗನು' ಎಂದು ಸಂಬೋಧಿಸುವನು?" ಎಂದು ಕೇಳಿದ್ದಾದರೆ ಆತನು ಹೀಗೆ ಉತ್ತರಿಸುತ್ತಿದ್ದನು, "ಸ್ಪಷ್ಟವಾಗಿರುವಂತೆ, ದೇವರು ಒಬ್ಬ ಬಲವಾದ ದೇವದೂತನನ್ನು ಸಂಬೋಧಿಸುತ್ತಿದ್ದಾನೆ ಯಾಕೆಂದರೆ ದೇವದೂತರು ಆಗಾಗ್ಗೆ 'ದೇವ ಪುತ್ರರು' ಎಂದು ಕರೆಯಲ್ಪಟ್ಟಿದ್ದಾರೆ" ಎಂಬದೆ (ಯೋಬನು 1:6; 2:1; 38:7). ಹೇಗೂ, ಇಬ್ರಿಯರಿಗೆ ಬರೆದ ಪತ್ರಿಕೆಯು ಆ ಅಭಿಪ್ರಾಯವನ್ನು ಈ ವಚನಗಳಲ್ಲಿ ಖಂಡಿಸುತ್ತದೆ ಮತ್ತು ನಂತರ ವಚನಗಳು ಕ್ರಿಸ್ತನೇ ಮಗನಾಗಿದ್ದು ದೇವದೂತನಿಗೆ ಸಂಬಂಧಿಸಿದ ಜೀವಿಯು ಮಗನಲ್ಲ ಎಂಬುದನ್ನು ತೋರಿಸುತ್ತವೆ. ಯೇಸುವು ಮಗನೆಂಬದಾಗಿ ದೇವರಿಂದ ಎರಡು ಸಂದರ್ಭಗಳಲ್ಲಿ ಒಪ್ಪಿಕೊಳ್ಳಲ್ಪಟ್ಟಿದ್ದಾನೆ (ಮತ್ತಾಯ 3:17; 17:5). ದೇವರು ಒಬ್ಬ ದೇವದೂತನನ್ನು "ಮಗನು" ಎಂದು ಕರೆದನೆಂಬದಾಗಿ ಯಾವನೂ ಹೇಳಿಕೊಳ್ಳುವದಕ್ಕೆ ಸಾಧ್ಯವಿಲ್ಲ ಎಂದು ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳುತ್ತಾನೆ.

ಕೀರ್ತನೆ 2:7ರ ಪ್ರವಾದನೆಯು ಕ್ರಿಸ್ತನ ನರಾವತಾರವನ್ನು ಸೂಚಿಸುವದಿಲ್ಲ, ಆದರೆ ಆತನ ಪುನರುತ್ಥಾನವನ್ನು ಸೂಚಿಸುತ್ತದೆ. ಕ್ರಿಸ್ತನು ಸಮಾಧಿಯಿಂದ ಪರಲೋಕದಲ್ಲಿರುವ ಸಿಂಹಾನಕ್ಕೆ ಏರಿಸಲ್ಪಟ್ಟಿರುವದು ಶಾಸ್ತ್ರಗಳಲ್ಲಿ ಆತನ ನರಾವತಾರಕ್ಕಿಂತಲೂ ಎಷ್ಟೋ ಪ್ರಾಮುಖ್ಯತೆಯುಳ್ಳದ್ದಾಗಿದೆ. ಮರಿಯಳ ಮೂಲಕ ಜನಸಿದ್ದಲ್ಲ, ಆದರೆ ಯೇಸು ಸತ್ತವರೊಳಗಿಂದ ಹೊಂದಿದ ಪುನರುತ್ಥಾನವೇ ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಹೆಚ್ಚು ಗಮನವನ್ನು ಹೊಂದಿರುತ್ತದೆ. ವಾಸ್ತವದಲ್ಲಿ, ಯೇಸುವನ್ನು ಶಕ್ತಿಯ ಮೂಲಕ ದೇವರ ಮಗನೆಂದು ಘೋಷಿಸಿದ್ದು ಪುನರುತ್ಥಾನವೇ ಆಗಿದೆ (ರೋಮಾ 1:4).

"ನಾನು ಅವನಿಗೆ ತಂದೆಯಾಗಿರುವೆನು" ಎಂಬ ಪದವು 2 ಸಮುವೇಲ 7:14ರಿಂದ ಬಂದದ್ದಾಗಿದೆ. ದೇವರು ಮತ್ತು ಯೇಸುವಿನ ತಂದೆ/ಮಗ ಸಂಬಂಧವು ಸೃಷ್ಟಿಕರ್ತನು ದೇವದೂತರೊಂದಿಗೆ ಹೊಂದಿರುವ ಸಂಬಂಧಕ್ಕಿಂತ ಹೆಚ್ಚು ಆಪ್ತವಾದದ್ದು.

2 ಸಮು ಮಾತುಗಳು ಮೂಲತಃ ದಾವೀದ ಅಥವಾ ಸೊಲೊಮೋನನ್ನು ಸೂಚಿಸುವಂತೆ ತೋರುತ್ತವೆ, ಆದರೆ ಇಬ್ರಿಯರಿಗೆ ಪುಸ್ತಕದಲ್ಲಿ "ಎರಡು ಸಾರಿ ಸೂಚಿಸಲ್ಪಟ್ಟಿರುವದು" ದೇವರು ಕ್ರಿಸ್ತನನ್ನು ಸೂಚಿಸಿ ಹೇಳುತ್ತಿದ್ದಾನೆಂಬುದನ್ನು ತೋರಿಸುತ್ತದೆ. ಬಹುಶಃ ಪ್ರವಾದನೆಯನ್ನು ಬಣ್ಣಿಸುವದಕ್ಕೆ ಇರುವ ಉತ್ತಮ ದಾರಿಯೆಂದರೆ ಇದೆ: ಐತಿಹಾಸಿಕವಾಗಿ, ಆ ಮಾತುಗಳು ಭಾಗಶಃ ದಾವೀದನಲ್ಲಿ ಅಥವಾ ದಾವೀದನ ಮಗನಾದ, ಸೊಲೊಮೋನನಲ್ಲಿ ನೆರವೇರಿರಬಹುದು, ಆತನು ಮೊದಲನೆಯ ದೇವಾಲಯ ಕಟ್ಟುವದನ್ನು ಪೂರ್ತಿಗೊಳಿಸಿದನು. ಹೇಗೂ, "ಪರಿಪೂರ್ಣ ನೆರವೇರಿಕೆಯು ದಾವೀದನ ಶ್ರೇಷ್ಠ ಕುಮಾರನು ಕಾಲದ ತನಕ ಬರಲಿಲ್ಲ."[27]

ಹಳೆಯ ಒಡಂಬಡಿಕೆಯು ಈ ವಿಧವಾದ ಪ್ರವಾದನೆಯ ಹಲವಾರು ಪ್ರಕರಣಗಳನ್ನು ಹೊಂದಿದೆ, ಸಾಂಕೇತಿಕ ಮತ್ತು ನಿರ್ದಿಷ್ಟ ಪ್ರವಾದನೆ ಎರಡೂ ವಿಧದಲ್ಲಿಯೂ ಹೊಂದಿದೆ. "ನನ್ನ ಮಗನನ್ನು ಐಗುಪ್ತದೇಶದೊಳಗಿಂದ ಕರೆದೆನು" ಎಂಬುದರ (ಮತ್ತಾಯ 2:15, ಹೋಶೇಯ 11:1ರಿಂದ) ಸಾಂಕೇತಿಕ ನೆರವೇರಿಕೆಯು ಇಸ್ರಾಯೇಲ್ಯರು ಕೆಲವು ಸಾರಿ ಕ್ರಿಸ್ತನನ್ನು ಮತ್ತು ಆತನ ಕೆಲಸಗಳನ್ನು ಸೂಚಿಸುವ ಜನರು ಎಂಬುದನ್ನು ತೋರಿಸುತ್ತದೆ. ಹೀಗೆ ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನರು, ಕೆಲವೊಂದು ದಾರಿಗಳಲ್ಲಿ, ಕ್ರಿಸ್ತನಿಗೆ ಛಾಯೆಯಾಗಿದ್ದರು. ಅದೇ ರೀತಿಯಲ್ಲಿ, ಅರಣ್ಯದಲ್ಲಿ ಸರ್ಪವು ಸ್ವಸ್ಥತೆಯನ್ನುಂಟು ಮಾಡಿತು ಆದರೆ ಅದು ಶಿಲುಬೆಯ ಮೇಲೆ ಏರಿಸಲ್ಪಟ್ಟಂಥ ಕ್ರಿಸ್ತನನ್ನು ಸಹ ಪ್ರತಿನಿಧಿಸಿತ್ತು (ಯೋಹಾನ 3:14). ಇಸ್ರಾಯೇಲ್ಯರಿಗೆ ಅರಣ್ಯದಲ್ಲಿ ನೀರು ಮತ್ತು ಆಹಾರಗಳ ಒದಗಿಸಲ್ಪಡುವಿಕೆ ಯೇಸುವಿಗೆ

ಸಂಕೇತಗಳಾಗಿದ್ದವು (1 ಕೊರಿಂಥ 10:1-4). ಕೊಯ್ಯಲ್ಪಟ್ಟ ಪ್ರತಿಯೊಂದು ಪಸ್ಕದ ಕುರಿಮರಿಯು ಯೇಸುವಿನೆಡೆಗೆ ಬೆರಳು ತೋರಿಸುವದಾಗಿತ್ತು (1 ಕೊರಿಂಥ 5:7). ಯೆಶಾಯ 7:14 ("ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು") ಎಂಬುದಕ್ಕೆ ಯೆಶಾಯನ ಕಾಲದಲ್ಲಿ ಒಂದು ನಿರ್ದಿಷ್ಟವಾದ ಅರ್ಥವಿತ್ತು, ಆದರೆ ಮತ್ತಾಯ 1:21-23ರಿಂದ ತೋರ್ಪಡಿಸಲ್ಪಟ್ಟಿರುವ ಪ್ರಕಾರ, ಅದರ ಅತ್ಯಂಥ ದೊಡ್ಡದಾದ ನೆರವೇರಿಕೆಯು ಯೇಸುವಿನಲ್ಲಾಗಿತ್ತು.

2 ಸಮುವೇಲ 7:14-17ರ ಭಾಗವು ದಾವೀದ ಅಥವಾ ಸೊಲೊಮೋನನಿಗೆ ಅನ್ವಯಿಸಲ್ಪಟ್ಟಿರುತ್ತದೆ, ಆದರೆ ಅದು "ಶ್ರೇಷ್ಠ ಸೊಲೊಮೋನ"ನನ್ನು ಸಹ ಸೂಚಿಸುವದಾಗಿತ್ತು, ಆತನೇ ಯೆಸು. "ಅವನು ತಪ್ಪುಮಾಡಿದರೆ ಅವನಿಗೆ ಮನುಷ್ಯಶಿಕ್ಷೆಯನ್ನು ಕೊಡುವೆನು" ಎಂಬ ಪದಗುಚ್ಛವು ಕ್ರಿಸ್ತನಿಗೆ ಅನ್ವಯವಾಗುವದಕ್ಕಂತೂ ಸಾಧ್ಯವಿಲ್ಲ, ಯಾಕೆಂದರೆ ಆತನು ಪಾಪರಹಿತನು. ದಾವೀದನು ಕ್ರಿಸ್ತನ ಛಾಯೆಯಾಗಿದ್ದನು, ಆದರೆ ಆತನು ಮಾಡಿದ ಎಲ್ಲದರಲ್ಲಿಯೂ ಅಲ್ಲ; ಹಾಗಾದರೆ ಅದು ಈ ಪ್ರವಾದನೆಯ ವಿಷಯದಲ್ಲಿಗೂ ಆಗಿದೆ. ಯೆಹೆಜ್ಕೇಲ 34:23, 24 ವಚನಗಳು, "ದಾವೀದ"ನ ಕುರಿತು ಮಾತಾಡುತ್ತಾ, ದಾವೀದನ ಉತ್ತರಾಧಿಕಾರಿಯ ಬಗ್ಗೆ ಸೂಚಿಸುತ್ತದೆ, ಅವನು ಸತ್ತ ಅರಸನಿಗೆ ವೈಯಕ್ತಿಕ ಉತ್ತರಾಧಿಕಾರಿಯಂತಲ್ಲ. ಆತನು ಮೆಸ್ಸೀಯನಾದ ಕ್ರಿಸ್ತನು ಆಗಿರತಕ್ಕದ್ದು. ಇಬ್ರಿಯರಿಗೆ ಪುಸ್ತಕದ ಬರಹಗಾರನು ಹೇಳುತ್ತಿರುವದೇನೆಂದರೆ, ಈ ವಾಗ್ದಾನವು ಬರೋಣದಲ್ಲಿ ನೆರವೇರಿತು, ಆತನು ದೇವರ ಮಗನು ಮತ್ತು ದಾವೀದನ ಸಂತತಿ ಎರಡೂ ಆಗಿದ್ದಾನೆ. ಮೃತ ಸಮುದ್ರದ ಸುರುಳಿಗಳೊಳಗೆ ಸಿಕ್ಕ *The Midrash*[28] ಎಂಬ ಪುಸ್ತಕದಲ್ಲಿನ ಒಂದು ಟಿಪ್ಪಣಿಯು 2 ಸಮುವೇಲ 7:12-17ನ್ನು ಒಂದು ಮೆಸ್ಸೀಯನಿಗೆ ಸಂಬಂಧಿಸಿದ ವಾಕ್ಯಭಾಗವಾಗಿ ಅರ್ಥನಿರೂಪಿಸುವದಾಗಿದ್ದು ಅದು ಅಂತ್ಯಕಾಲದ ವೇಳೆ ಉದಯಿಸಲಿದ್ದ "ದಾವೀದನ ಮೊಳಕೆ"ಗೆ ಸಂಬಂಧ ಪಟ್ಟದ್ದಾಗಿದೆ.

ಲೇಖಕನು ಅವುಗಳ ಮೂಲ ಸನ್ನಿವೇಶಾತ್ಮಕ ಅರ್ಥಗಳನ್ನು ಪರಿಗಣಿಸದೆಯೇ ಗೊತ್ತುಗುರಿಯಿಲ್ಲದೆ ಪುರಾವೆಯ ವಾಕ್ಯಭಾಗಗಳನ್ನು ಹುಡುಕಲಿಲ್ಲ. C. H. Dodd ಗಮನಕ್ಕೆ ತರುವದೇನೆಂದರೆ "ಕಾರ್ಯತಃ ಹೊಸ ಒಡಂಬಡಿಕೆಯಲ್ಲಿರುವ ಹಳೆಯ ಒಡಂಬಡಿಕೆಯ ಎಲ್ಲಾ ಉಲ್ಲೇಖನಗಳು, ಅಲ್ಲಲ್ಲಿ ಆಯ್ದ ತುಂಡುಗಳು ಮತ್ತು ಭಾಗಗಳಾಗಿರುವದರ ಬದಲಾಗಿ, ಅವುಗಳು ಹೆಚ್ಚಾಗಿ ಒಂದು ಸಮಗ್ರದ ಭಾಗಗಳಾಗಿರುತ್ತವೆ – ಲೇಖಕರು ಬೇರ್ಪಡಿಸಲ್ಪಟ್ಟ ಸನ್ನಿವೇಶಗಳಿಂದ ಆರಿಸಿಕೊಳ್ಳಲಿಲ್ಲ ಆದರೆ ತಮ್ಮ ಉಲ್ಲೇಖನಕ್ಕೆ ಸಮರ್ಪಕವಾದ ಮೂಲವೆಂದು ತಾವು ಗುರುತಿಸಿದ ಹಾಗೆ ಇಡೀ ಸನ್ನಿವೇಶದಿಂದ ಆರಿಸಿಕೊಂಡಿರುತ್ತಾರೆ."[29] R. V. G. Taskerನು ಶಾಸ್ತ್ರಗಳನ್ನು ಉಲ್ಲಂಘಿಸುವದರಲ್ಲಿ ಇಬ್ರಿಯರಿಗೆ ಪುಸ್ತಕದ ಲೇಖಕನು ಬಳಸಿದ ವಿಧಾನದ ಬಗ್ಗೆ ಸಂದೇಶ ವ್ಯಕ್ತಿಪಡಿಸುವವರು ಅದನ್ನು ಕಟುವಾಗಿ ವಿಮರ್ಶಿಸಿದ್ದು ತರವಲ್ಲ ಎಂದು ಹೇಳುವ ಮೂಲಕ ಅದಕ್ಕೆ ಸಮ್ಮತಿಯನ್ನು ಸೂಚಿಸುತ್ತಾನೆ:

> ಬೈಬಲ್ ಪಂಡಿತರು, ಒಂದು ಪ್ರವಾದನಾ ನುಡಿಗೆ ಯಾವದು ಪ್ರಚೋದನೆಯನ್ನು ನೀಡಿತು ಎಂಬುದರ ನಿಖರವಾದ ಐತಿಹಾಸಿಕ ಪರಿಸ್ಥಿತಿಯನ್ನು ಹುಡುಕುವವರಾಗಿ, "ದೈವಿಕ ಪ್ರಕಟಣೆಯು ಸಂಪೂರ್ಣವಾಗಿ ಅದು ಮೊದಲು ಕೊಡಲ್ಪಟ್ಟ ಪರಿಸ್ಥಿತಿಯನ್ನು ಅವಲಂಬಿಸಿರುವದೂ ಇಲ್ಲ, ಅದರ ಮಹತ್ವಪೂರ್ಣತೆಯು ಮನುಷ್ಯನು ಅದನ್ನು ಮೊದಲ ಸಾರಿ ನುಡಿದ ಐತಿಹಾಸಿಕ ಸ್ಥಿತಿಗೆ ಸೀಮಿತವಾದದ್ದೂ ಅಲ್ಲ, ಆದರೆ ಅದು ಎಷ್ಟೋ ಹೆಚ್ಚಾದ ಪರಾಮರ್ಶೆಗೆ ಒಳಪಟ್ಟದ್ದು" ಎಂಬುದನ್ನು ಮರೆತು ಬಿಟ್ಟಿದ್ದಾರೆ.[30]

ಈ ಭಾವನೆಯು ಹಳೆಯ ಮತ್ತು ಹೊಸ ಒಡಂಬಡಿಕೆಗಳ ನಡುವಿನ ಇಡೀ ಸಂಬಂಧದ

ಮೇಲೆ ಪರಿಣಾಮವನ್ನು ಬೀರುತ್ತದೆ:

> ಇಬ್ರಿಯರಿಗೆ ಬರೆದ ಪುಸ್ತಕವು ಹಳೆಯ ಹಾಗೂ ಹೊಸ ಒಡಂಬಡಿಕೆಗಳ ನಡುವಿನ ಸಂಬಂಧದ ಅರ್ಥನಿರೂಪಿಸುವಕ್ಕೆ ಮಾಡಿದ ಪ್ರಯತ್ನಗಳಲ್ಲಿ ಅತ್ಯಂಥ ಪ್ರಾಚೀನ ಮತ್ತು ಅತ್ಯಂಥ ಯಶಸ್ಸಿನ ಪ್ರಯತ್ನಗಳಲ್ಲೊಂದಾಗಿದೆ ಮತ್ತು . . . ಈ ಪುಸ್ತಕದ ಮೌಲ್ಯದ ಬಹುಪಾಲು ಭಾಗವು ಇದಕ್ಕೆ ಮುಂಚೆ ಅಸಡ್ಡೆಯಿಂದ ತಳ್ಳಿಹಾಕಲ್ಪಟ್ಟಂಥ ವ್ಯಾಖ್ಯಾನ ವಿಧಾನದಲ್ಲಿ ಸಿಕ್ಕುತ್ತವೆ.[31]

ವಾಕ್ಯಭಾಗಗಳ ಸಾಲನ್ನು ಬಳಸುವದು ಆದಿ ಸಭೆಯಲ್ಲಿದ್ದ ಒಂದು ವೈಶಿಷ್ಟ್ಯವಾದ ಪರಿಪಾಠವಾಗಿತ್ತು. ಲೇಖಕನು ಒಂದು ವಾಕ್ಯಭಾಗವನ್ನು ಪರಿಚಯಿಸುವನು, ಯೆಹೂದಿ ಅಭಿಪ್ರಾಯವನ್ನು ತಪ್ಪೆಂದು ಖಂಡಿಸುತ್ತಿದ್ದನು, ಮತ್ತು ನಂತರ ಅದು ಹೇಗೆ ಕ್ರಿಸ್ತನಿಗೆ ಅನ್ವಯವಾಗುತ್ತದೆಂಬುದನ್ನು ತೋರಿಸಿ ಕೊಡುತ್ತಿದ್ದನು. ಇದರ ಉದಾಹರಣೆಗಳು ಅಪೊಸ್ತಲರ ಕೃತ್ಯಗಳು 2:25–28, 33–36; 13:34–37ರಲ್ಲಿ ಸಿಕ್ಕುತ್ತವೆ. ಆದದರಿಂದ, ಇಬ್ರಿಯ 1:5–13, ಹಳೆಯ ಒಡಂಬಡಿಕೆಯ ಏಳು ಉಲ್ಲೇಖನಗಳನ್ನು ಹೊಂದಿರುವ ಅದು ಶಾಸ್ತ್ರಗಳನ್ನು ಅನ್ವಯಪಡಿಸಿಕೊಳ್ಳುವದರ ಸೂಕ್ತವಾದ ವಿಧಾನವನ್ನು ತೋರ್ಪಡಿಸುತ್ತದೆ.

**ವಚನ 6. ಎಂದು ಹೇಳುತ್ತಾನೆ** ಎಂಬ ಮುನ್ನುಡಿಯ ಸರಳವಾದ ಅರ್ಥವು ದೇವರು ಈ ಸತ್ಯವನ್ನು ಘೋಷಿಸಿದ್ದಾನೆ ಎಂಬದೆ! ದೇವರು ಸ್ವತಃ ವಾಕ್ಯಭಾಗದ ಮೂಲಕ ಮಾತಾಡುತ್ತಾನೆ. ಶಾಸ್ತ್ರಗಳು ದೈವಿಕವಾಗಿ ಪ್ರೇರಿತವಾದವುಗಳೆಂಬ ಬಗ್ಗೆ ಲೇಖಕನು ಹೊಂದಿಸುವ ಅಭಿಪ್ರಾಯದ ಅಂತದೃಷ್ಟಿಯನ್ನು ಈ ಪದಗುಚ್ಛವು ನಮಗೆ ಕೊಡುತ್ತದೆ. ಲೇಖಕನು ಇದರ ದೈವಿಕ ಅಧಿಕಾರವನ್ನು ಗುರುತಿಸಿದವನಾಗಿ ಈ ವಾಕ್ಯಭಾಗವನ್ನು ಉಲ್ಲೇಖಿಸಿದನು.

ಈ ವಚನದಲ್ಲಿರುವ ಉಲ್ಲೇಖನವು ಕೀರ್ತನೆ 97:7ರಿಂದ ತೆಗೆದುಕೊಂಡದ್ದೆಂದು ಪರಿಗಣಿಸಲ್ಪಟ್ಟಿದೆಯಾದರೂ, ಅದು LXX ನಲ್ಲಿರುವ ಧರ್ಮೋಪದೇಶಕಾಂಡ 32:43ರೊಂದಿಗೆ ನಿಕಟವಾಗಿ ಹೊಂದಿಕೆಯಾಗುತ್ತದೆ. ಇದರ ಈ ರೂಪವು ಮೃತ ಸಮುದ್ರ ಸುರುಳಿಗಳಲ್ಲಿ ಸಹ ಸಿಕ್ಕುತ್ತದೆ.[32] ಧರ್ಮೋಪದೇಶಕಾಂಡ 32:43ನೇ ವಚನವು ರೋಮಾ 15:10ರಲ್ಲಿ ಸಹ ಉಲ್ಲೇಖಿಸಲ್ಪಟ್ಟಿದೆ, ಅಲ್ಲಿ ಪೌಲನು ಅದನ್ನು "ಆತನು ಹೇಳುತ್ತಾನೆ" ಎಂಬ ಮುನ್ನುಡಿಯೊಂದಿಗೆ ತಿಳಿಸುತ್ತಾನೆ, ಅದನ್ನೇ ಇಬ್ರಿಯರಿಗೆ ಬರೆದ ಪುಸ್ತಕದಲ್ಲಿ ಕಾಣುತ್ತೇವೆ.[33] ಇದು ಪೌಲನ ಕರ್ತೃತ್ವಕ್ಕೆ ಇನ್ನೊಂದು ಸೂಚಕವೋ, ಅಥವಾ ಅದೊಂದು ಸಾಮಾನ್ಯ ಅರ್ಥದಲ್ಲಿ ಹೇಳಲ್ಪಟ್ಟದ್ದೋ?

ಯೇಸು ಕೊಲೊಸ್ಸೆ 1:15, 18ರಲ್ಲಿ **ಚೊಚ್ಚಲ ಮಗ** (πρωτότοκος, *prōtotokos*) ಎಂದು ಕರೆಯಲ್ಪಟ್ಟಿದ್ದಾನೆ. ಆ ವಚನಗಳಲ್ಲಿ "ಚೊಚ್ಚಲ ಮಗ" ಎಂದೆ "ಸತ್ತವರೊಳಗಿಂದ ಎದ್ದು ಬಂದವರಲ್ಲಿ ಪ್ರಥಮನು" ಎಂದರ್ಥವಾಗಿರುತ್ತದೆ, ಮತ್ತು ಅದು ಇಲ್ಲಿ ಅದೇ ಅರ್ಥವನ್ನು ಹೊಂದಿರಬಹುದಾಗಿದೆ. ಯೇಸು ಇನ್ನು ಸಾಯತಕ್ಕವನಲ್ಲ ಎಂಬ ಅರ್ಥದಲ್ಲಿ ಈ ಬಣ್ಣನೆಗೆ ಹೊಂದಿಕೆಯಾಗುತ್ತಾನೆ. ಲಾಜರನು ಮುಂಚೆ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಆದರೆ ಆತನು ನಿಶ್ಚಯವಾಗಿಯೂ ಮತ್ತೊಂದಾವರ್ತಿ ಮರಣಕ್ಕೊಳ ಗಾದನು (ಯೋಹಾನ 11), ಅದೇ ರೀತಿಯಲ್ಲಿ ಕರ್ತನ ಪುನರುತ್ಥಾನದ ಬಳಿಕ ಸತ್ತವರೊಳಗಿಂದ ಎದ್ದು ಯೆರೂಸಲೇಮಿನೊಳಗೆ ಬಂದವರು ಸಹ ಮರಣಿಸಿದ್ದಾರೆ (ಮತ್ತಾಯ 27:52, 53). ಯೇಸು ಮರಣದ ಮೇಲೆ ಸಹ ತನ್ನ ಉಚ್ಛ ಶಕ್ತಿಯನ್ನು ತೋರ್ಪಡಿಸುವವನಾಗಿ ಎದ್ದು ಬಂದನು, ಅದನ್ನು ಜಯಿಸಿದವನಾಗಿ "ಮರಣಾಧಿಕಾರಿ ಯನ್ನು, ಅಂದರೆ ಸೈತಾನನನ್ನು ಅಡಗಿಸಿಬಿಟ್ಟನು" (2:14).

ಹೇಗೂ, ಆ ಬಿರುದು ಅದಕ್ಕಿಂತ ಹೆಚ್ಚಿನದನ್ನು ಒಳಗೊಂಡಿರುವಂತೆ ತೋರುತ್ತದೆ.

F. F. Bruce ಹೇಳಿದ್ದೇನೆಂದರೆ "ಆತನು ಸಕಲ ಸೃಷ್ಟಿಗೂ ಮುಂಚೆ ಇದ್ದವನು ಹಾಗೂ ಸಕಲ ಸೃಷ್ಟಿಯೂ ಆತನ ಬಾಧ್ಯತೆಯಾಗಿರುವದರಿಂದ ಆತನು 'ಚೊಚ್ಚಲ ಮಗನು' ಎಂದು ಕರೆಯಲ್ಪಟ್ಟಿದ್ದಾನೆ."[34] ಇನ್ನೊಂದು ವ್ಯತ್ಯಾಸವೇನೆಂದರೆ ದೇವದೂತರು ಸೃಷ್ಟಿಸಲ್ಪಟ್ಟವರು ಆದರೆ ಚೊಚ್ಚಲ ಮಗನು "ಪಡೆಯಲ್ಪಟ್ಟವನಾಗಿದ್ದಾನೆ."[35] ಕೀರ್ತನೆ 2ರ ಮೆಸ್ಸೀಯತ್ವದ ಅರ್ಥವು ಅಪೊಸ್ತಲರ ಕೃತ್ಯಗಳು 4:25, 26ರಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ, ಅಲ್ಲಿ ಕೀರ್ತನೆಯ ಮೊದಲ ಎರಡು ವಚನಗಳು ಉಲ್ಲೇಖಿಸಲ್ಪಟ್ಟಿರುತ್ತವೆ ಮತ್ತು "ಕ್ರಿಸ್ತನು," ದೇವರಿಂದ ಅಭಿಷಿಕ್ತನಾದ ಯೇಸುವಿಗೆ ಅನ್ವಯಿಸಲ್ಪಟ್ಟಿರುತ್ತವೆ.

"ಚೊಚ್ಚಲ ಮಗ" ಎಂಬುದು "ಪವಿತ್ರ" ಅಥವಾ "ಕರ್ತನಿಗೆ ಮೀಸಲಿಟ್ಟದ್ದು" ಎಂಬ ಅರ್ಥವನ್ನು ಹೊಂದಿದೆ ಯಾಕೆಂದರೆ ಅದು "ಚೊಚ್ಚಲ ಮಗ"ರಾಗಿ ಹುಟ್ಟಿದ ದೇವಜನರನ್ನು ಸೂಚಿಸಲು ಬಳಸಲ್ಪಡುತ್ತಿತ್ತು (ವಿಮೋಚನಕಾಂಡ 13:2; 22:29; ಅರಣ್ಯಕಾಂಡ 3:12, 13). ದಾವೀದನು "ಮೊದಲನೆಯವನಾಗಿ ಹುಟ್ಟಿದವನು" ಆಗಿರದಿದ್ದಾಗ್ಯೂ "ಚೊಚ್ಚಲ ಮಗ"ನಾಗಿ ಮಾಡಲ್ಪಟ್ಟನು (ಕೀರ್ತನೆ 89:27). ಈ ಬಿರುದು ಹುಟ್ಟಿದ ಕ್ರಮಸಂಖ್ಯೆಗಿಂತಲೂ ದರ್ಜೆ ಮತ್ತು ಘನತೆಯದ್ದಾಗಿದೆ.[36] "ಚೊಚ್ಚಲ ಮಗ" ಎಂಬುದು ಪ್ರಾಧಾನ್ಯತೆಯನ್ನು ಇಲ್ಲವೆ ಸರ್ವೋಚ್ಚತೆಯನ್ನು ಸೂಚಿಸಬಲ್ಲದು; ಸ್ಪಷ್ಟವಾಗಿರುವಂತೆ, ಇಲ್ಲಿ ಅದು ಎರಡನೆಯದ್ದನ್ನು ಸೂಚಿಸುತ್ತದೆ.[37] ಈ ಪದಗುಚ್ಛವು ನರಾವತಾರಕ್ಕೆ ಹಿಂದಿರುಗುತ್ತದೆ ಮತ್ತು ಆತನು ಲೋಕದೊಳಕ್ಕೆ ಬರುತ್ತಿದ್ದ ಹಾಗೆ ದೇವದೂತರು ಆತನಿಗೆ ಸಲ್ಲಿಸಿದ ಆರಾಧನೆಯನ್ನು ಸೂಚಿಸುತ್ತದೆ (ಲೂಕ 2:13-15); ಆದರೆ ಆ ಆರಾಧನೆಯು ಉನ್ನತಲೋಕದಲ್ಲಿರುವ ದೇವರಿಗೆ ಸಲ್ಲಿಸಿದ ಸ್ತುತಿಯಾಗಿತ್ತು.

ಈ ವಚನದ ಮೊದಲನೆಯ ಭಾಗವು ಏನೇ ಅರ್ಥವನ್ನು ಸೂಚಿಸಿದರೂ ಸರಿಯೇ, **ದೇವದೂತರು** ಎಷ್ಟು ಕಡಿಮೆಯಾದವರಾಗಿದ್ದರೆಂದರೆ **ಆತನಿಗೆ ಅಡ್ಡ ಬೀಳಲಿ** ಎಂದು ಅವರಿಗೆ ಆಜ್ಞಾಪಿಸಲ್ಪಟ್ಟಿತು. ದೈವಿಕ ಜೀವಿಗಳು ಮಾತ್ರವೇ ಸೂಕ್ತವಾಗಿ ಆರಾಧನೆಯನ್ನು ಸ್ವೀಕರಿಸಬಲ್ಲರು; ತಮ್ಮನ್ನು ಆರಾಧಿಸಬಾರದೆಂದು ದೇವದೂತರು ಸಹ ಮನುಷ್ಯರನ್ನು ನಿಷೇಧಿಸುತ್ತಾರೆ (ನೋಡಿರಿ ಪ್ರಕಟನೆ 22:8, 9). ಕೀರ್ತನೆ 97:7ನೇ ವಚನವು ದೇವದೂತರಿಗೆ "ದೇವರುಗಳು" ಎಂಬ ಮಾತನ್ನು ಬಳಸುತ್ತದೆ, ಆದರೆ ಯಾವೊಬ್ಬ ದೂತನು ಸಹ "ಮಗನು" ಎಂದು ಹೇಳಿಸಿಕೊಂಡವನಾಗಿರುವದಿಲ್ಲ.

ಇಬ್ರಿಯರಿಗೆ ಪುಸ್ತಕದ ಲೇಖಕನು ಯೇಸು ಮತ್ತು ದೇವದೂತರ ನಡುವೆ ವಿರುದ್ಧ ಹೋಲಿಕೆ ಮಾಡುತ್ತಾನೆ. ಇಬ್ರಿಯ 1:4-6 ವಚನಗಳು ಆತನು ಏನಾದನು, ಆತನು ಯಾರಾಗಿದ್ದಾನೆ, ಮತ್ತು ಆತನು ತಂದೆಯೊಂದಿಗೆ ಹೊಂದಿರುವ ಸಂಬಂಧದ ಕಾರಣದಿಂದ ಯೇಸು ಅವರಿಗಿಂತ ಶ್ರೇಷ್ಠನು ಎಂಬುದನ್ನು ತೋರಿಸಿ ಕೊಟ್ಟಿರುತ್ತವೆ. ಮುಂದಿನ ವಾಕ್ಯಭಾಗ, 1:7-14 ವಚನಗಳು, ಈ ವಿರುದ್ಧ ಹೋಲಿಕೆಗೆ ಇನ್ನು ಕೆಲವು ಮಹತ್ವಪೂರ್ಣವಾದ ಭಾಗಗಳನ್ನು ಸೇರಿಸುತ್ತವೆ.

**ವಚನ 7.** ಕೀರ್ತನೆ 104:4ರ ಮಾತುಗಳನ್ನು ಬಳಸಿಕೊಳ್ಳುತ್ತಾ, **ದೇವದೂತರು** ಕೇವಲ **ಸೇವಕರು** ಆಗಿದ್ದರೆ, ಯೇಸು ದೇವರಿಂದ ಪಡೆಯಲ್ಪಟ್ಟ ಮಗನಾಗಿದ್ದಾನೆ ಎಂದು ಲೇಖಕನು ಹೇಳುತ್ತಾನೆ. ದೇವದೂತರು ಕೇವಲ ಸೃಷ್ಟಿಸಲ್ಪಟ್ಟ ಜೀವಿಗಳಾಗಿದ್ದಾರೆ ಮತ್ತು ಅವರು ದಾರಿ ತಪ್ಪುವದಕ್ಕೆ ಮತ್ತು ದಂಡನೆಗೆ ತೀರ್ಪು ಹೊಂದುವದಕ್ಕೆ ಶಕ್ತರು ಆಗಿದ್ದಾರೆ (2 ಪೇತ್ರ 2:4). ದೇವರು ದೇವದೂತರನ್ನು "ಸೇವಕರಾಗಿ" ಸೇವೆ ಮಾಡುವಂತೆ ಅಥವಾ **ಅಗ್ನಿಜ್ವಾಲೆಯನ್ನಾಗಿಯೂ** ಕಳುಹಿಸುವ ಮೂಲಕ ಅವರನ್ನು ವಿವಿಧ ದಾರಿಗಳಲ್ಲಿ ಬಳಸಿದ್ದಾನೆ (ಮತ್ತು ಬಳಸುತ್ತಾನೆ).

NASB ಮತ್ತು NIV ತರ್ಜುಮೆಗಳು ದೇವರು ಅವರನ್ನು **ಗಾಳಿಗಳನ್ನಾಗಿ** ಮಾಡುತ್ತಾನೆ ಎಂದು ಹೇಳಿದರೆ, KJV ಮತ್ತು NKJV ತರ್ಜುಮೆಗಳು "ಆತ್ಮಗಳನ್ನಾಗಿ" ಎಂಬ ಪದವನ್ನು ಬಳಸುತ್ತವೆ. Πνεῦμα (*pneuma*) ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 375 ಸಾರಿ ಬಳಸಲ್ಪಟ್ಟಿದೆ. ಕಾಣಿಸಿಕೊಂಡ ಬಹಳಷ್ಟು ಕಡೆಗಳಲ್ಲಿ, ಅದಕ್ಕೆ "ಆತ್ಮ" ಎಂದು ಅನುವಾದವನ್ನು ನೀಡಲಾಗಿರುತ್ತದೆ (ಪವಿತ್ರಾತ್ಮ, ದೇವರಾತ್ಮ, ಅಥವಾ ಮಾನವ ಆತ್ಮವನ್ನು ಸೂಚಿಸುತ್ತದೆ).

7ನೇ ವಚನದಲ್ಲಿ *pneuma* ಎಂಬ ಪದವನ್ನು "ಗಾಳಿಗಳು" ಎಂದು ಅನುವಾದಿಸಿರುವದು ಹಲವಾರು ಕಾರಣಗಳಿಗಾಗಿ ಸಮಸಂಜವೆಂದು ತೋರುತ್ತದೆ. ಮೊದಲನೆಯದಾಗಿ ಹೇಳುವದಾದರೆ, ದೇವರು ತನ್ನ ಚಿತ್ತವನ್ನು ಜಾರಿಗೆ ತರುವದಕ್ಕೋಸ್ಕರ ದೇವದೂತರನ್ನು ಹೇಗೆ ಬಳಸಿಕೊಳ್ಳುತ್ತಾನೆಂಬುದನ್ನು ಆಲೋಚಿಸಿರಿ. ಅವರು ಆತನಿಗೆ ಪರಾಕ್ರಮದ ದಾರಿಗಳಲ್ಲಿ ಸೇವೆ ಮಾಡುತ್ತಾರೆ, ಗಾಳಿಯಷ್ಟು ಬಲಯುತವಾಗಿ ಮತ್ತು ಮಿಂಚುಗಳ ಶ್ರೇಣಿಗಳಂತೆ ನಾಶನಕರವಾಗಿಯೂ ಹೊರಡುತ್ತಾರೆ. ಅಷ್ಟುಮಾತ್ರವಲ್ಲದೆ, "ಗಾಳಿಗಳು" ಎಂಬ ಪದವು ಸೂಚಿಸುವದೇನೆಂದರೆ ದೇವರು ತಾನು ಇಚ್ಛಿಸುವದಾದರೆ ಜನರ ಮೇಲೆ ನಾಶನವನ್ನು ಬರಮಾಡುವದಕ್ಕೆ ಪ್ರಕೃತಿಯ ಅಂಶಗಳನ್ನು ಬಳಸಿಕೊಳ್ಳುತ್ತಾನೆ ಎಂಬದೆ. *Pneuma* ಎಂಬ ಪದದಲ್ಲಿ ಸ್ವಭಾವತಃ ಇರುವಂತ ಸಾಧ್ಯತೆಗಳು ಲೇಖಕನು ದೇವದೂತರನ್ನು ಬಣ್ಣಿಸುವದರ ಬದಲಾಗಿ ಅವರ ಕೆಲಸವನ್ನು ಹೆಚ್ಚು ನಿಗೂಢಗೊಳಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೋ ಎಂಬದಾಗಿ ನಾವು ಚಕಿತಗೊಳ್ಳುವಂತೆ ಮಾಡುತ್ತದೆ.

ಈ ವಚನದಲ್ಲಿ ಪದವನ್ನು "ಆತ್ಮಗಳು" ಎಂದು ಅನುವಾದಿಸಿದ್ದರ ವಿಷಯದಲ್ಲಿ ನಾವು ಕೆಳಗಿನ ವಾದಗಳನ್ನ ಮಂಡಿಸಬಹುದು:

1. ಸನ್ನಿವೇಶವು ಅದನ್ನು ಬೆಂಬಲಿಸುತ್ತದೆ. ಯೇಸು ದೇವದೂತರಿಗಿಂತ ಶ್ರೇಷ್ಠನು ಎಂಬುದನ್ನು ತೋರಿಸುವದು ಲೇಖಕನ ಉದ್ದೇಶವಾಗಿತ್ತು, ಮತ್ತು ಈ ವಾಸ್ತವಾಂಶವು ಆ ಪದಕ್ಕೆ "ಆತ್ಮಗಳು" ಎಂಬ ಅನುವಾದ ಕೊಡತಕ್ಕದ್ದೆಂದು ಬಲವಾಗಿ ವಾದಿಸುತ್ತದೆ. ದೇವದೂತರು ದೇವರ ಚಿತ್ತವನ್ನು ಮಾಡುವದಕ್ಕೆ ಹೋಗುತ್ತಿದ್ದ ಸೇವೆ ಮಾಡುವ "ಆತ್ಮಗಳು" ಎಂಬುದಂತೂ ಸ್ಪಷ್ಟವಾದದ್ದು. 1:14ನೇ ವಚನವು ಸ್ಪಷ್ಟಗೊಳಿಸುವ ಪ್ರಕಾರ, ಅವರು ಕೇವಲ "ಗಾಳಿಗಳು" ಮಾತ್ರವೇ ಆಗಿರಲಿಲ್ಲ.

2. ಸಾಮಂಜಸ್ಯಕ್ಕೆ ಅದು ಅಗತ್ಯ. 1:7ರಲ್ಲಿರುವ ಪದವು ಏಕೆ 1:14ರಲ್ಲಿನ ಪದಕ್ಕಿಂತ ವ್ಯತ್ಯಾಸವಾಗಿಸಬೇಕು?

3. ಗತಕಾಲದಲ್ಲಿ ದೇವರು ಕಾರ್ಯಮಾಡುವ ವಿಧಾನವು ಆ ಅಭಿಪ್ರಾಯವನ್ನು ಕೊಡುತ್ತದೆ. ದೇವದೂತರ ಸೇವೆಯು ಹಳೆಯ ಒಡಂಬಡಿಕೆಯಲ್ಲಿ, ಮಾತ್ರವಲ್ಲದೆ ಹೊಸ ಒಡಂಬಡಿಕೆಯಲ್ಲಿ ಸಹ ಕಾಣಲು ಸಿಕ್ಕುತ್ತದೆ. ಹಳೆಯ ಒಡಂಬಡಿಕೆಯ ಕಾಲಗಳಲ್ಲಿ, ದೇವರು ಅವರ ಮೂಲಕ ಸೊದೋಮ್ ಮತ್ತು ಗೊಮೋರ ಪಟ್ಟಣಗಳನ್ನು ನಾಶಗೊಳಿಸುವದಕ್ಕೆ ಬಳಸಿದನು (ಆದಿಕಾಂಡ 19:1-26). ಐಗುಪ್ತದ ಚೊಚ್ಚಲು ಮಕ್ಕಳ ಮೇಲೆ ಮರಣವನ್ನು ತರುವದಕ್ಕಾಗಿ (ವಿಮೋಚನಕಾಂಡ 12:23), ದೇವರು ಖಂಡಿತವಾಗಿಯೂ ಒಬ್ಬ ದೇವದೂತನನ್ನು ಬಳಸಿದನು, ಮತ್ತು ಸ್ವತಃ ವೈಯಕ್ತಿಕವಾಗಿ ಕಾರ್ಯವನ್ನು ಮಾಡಲಿಲ್ಲ. ದೇವದೂತರು ಧರ್ಮಶಾಸ್ತ್ರವನ್ನು ಕೊಡುವದರಲ್ಲಿ ಸೇವೆ ಮಾಡಿದರು (ಅಪೊಸ್ತಲರ ಕೃತ್ಯಗಳು 7:53; ಇಬ್ರಿಯ 2:2). ದಾವೀದನು ಜನರ ಖಾನೇಸುಮಾರಿ ಮಾಡಿದಾಗ ಇಸ್ರಾಯೇಲ್ಯರನ್ನು ದಂಡಿಸುವಕಾರ್ಯದಲ್ಲಿ ಅವರು ಸಾಧನಗಳಾಗಿದ್ದರು (2 ಸಮುವೇಲ 24:15-17). ದೇವರು ಸನ್ಹೇರೀಬನನ್ನು ಸಿಂಹಾಸನದಿಂದ ಕಿತ್ತು ಹಾಕುವದರಲ್ಲಿ ದೇವದೂತರನ್ನು ಬಳಿಸಿದನು

(2 ಅರಸು 19:35). ಹೊಸ ಒಡಂಬಡಿಕೆಯಲ್ಲಿ, ಕ್ರಿಸ್ತನ ಜನನವನ್ನು ಸಾರುವದಕ್ಕೆ, ಪುನರುತ್ಥಾಮನವನ್ನು ಘೋಷಿಸುವದಕ್ಕೆ, ಮತ್ತು ಆದಿ ಸಭೆಯ ಜೀವನದಲ್ಲಿ ಬೇರೆ ಕಾರ್ಯಗಳನ್ನು ಸಾಧಿಸುವದಕ್ಕೆ ದೇವರೂತರನ್ನು ಉಪಯೋಗಿಸಿದನು.

ಎರಡೂ ಕಡೆಯ ಪ್ರಶ್ನೆಗಳನ್ನು ಆಲೋಚಿಸಿದ ಬಳಿಕ, ಪ್ರಾಮುಖ್ಯವುಳ್ಳ ಪುರಾವೆಯು *pneuma*ವನ್ನು "ಆತ್ಮಗಳು" ಎಂದು ಅನುವಾದಿಸುವದರ ಪರವಾಗಿ ನಮಗೆ ಸಿಕ್ಕುತ್ತದೆ. ಹೇಗೂ, ಆ ಪದವು "ಗಾಳಿಗಳು" ಎಂದು ಅನುವಾದಿಸಲ್ಪಟ್ಟಾಗ್ಯೂ, ಅಂಥ ಅನುವಾದವು ಲೇಖಕನು ಒತ್ತಿ ಹೇಳುವದರ ಮೂಲಭೂತ ಅರ್ಥವನ್ನು ಬದಲಾಯಿಸುವದಿಲ್ಲ. ಆತನು ಸ್ಪಷ್ಟವಾಗಿ ದೇವರು ಹೇಗೆ ತನ್ನ ದೂತರನ್ನು ಬಳಸುತ್ತಾನೆಂಬುದನ್ನು ಕಲಿಸುತ್ತಿದ್ದಾನೆ ಮತ್ತು ಆ ಬಳಕೆಯನ್ನು ಕ್ರಿಸ್ತನಿಗಿರುವ ಸ್ಥಾನದೊಂದಿಗೆ ಹೋಲಿಕೆ ಮಾಡುತ್ತಿದ್ದಾನೆ.

ಕೀರ್ತನೆ 104ರಿಂದ ಬಳಸಲ್ಪಟ್ಟಿರುವ ಪದವು ವಿಶಿಷ್ಟವಾಗಿ ದೇವರನ್ನು ಸೂಚಿಸುತ್ತವೆ. ಕೀರ್ತನೆಯು ದೇವರ ಶ್ರೇಷ್ಠತೆ ಮತ್ತು ವೈಭವವನ್ನು ಚರ್ಚಿಸುವದರಲ್ಲಿ ಅತ್ಯಂಥ ಸಾಂಕೇತಿಕವಾಗಿರುತ್ತದೆ ಮತ್ತು ಕಾವ್ಯತ್ಮಕವಾಗಿರುತ್ತದೆ. ದೇವರು ಗಾಳಿಗಳ ಮೇಲೆ ನಡೆಯುವವನು, ಮೇಘಗಳನ್ನು ತನ್ನ ರಥಗಳನ್ನಾಗಿ ಮಾಡುವವನು, ಮತ್ತು ಬೆಳಕನ್ನು ವಸ್ತ್ರದಂತೆ ಹೊದ್ದುಕೊಂಡಿರುವವನು ಎಂಬದಾಗಿ ವರ್ಣಿಸಲ್ಪಟ್ಟಿದ್ದಾನೆ. ಆತನ ಕುರಿತ ಈ ಬಣ್ಣನೆಗಳ ನಂತರ, ಕೀರ್ತನೆಗಾರನು "ಗಾಳಿಗಳನ್ನು ನಿನ್ನ ದೂತರನ್ನಾಗಿಯೂ ಅಗ್ನಿಜ್ವಾಲೆಯನ್ನು ಸೇವಕರನ್ನಾಗಿಯೂ ಮಾಡಿಕೊಳ್ಳುತ್ತೀ" ಎಂದು ಬರೆಯುತ್ತಾನೆ. ಈ ಹಳೆಯ ಒಡಂಬಡಿಕೆಯ ವಚನದಲ್ಲಿ רוּחַ (*ruach*) ಎಂಬ ಪದವು "ಗಾಳಿಗಳು" ಎಂದು ಅನುವಾದಿಸಲ್ಪಡತಕ್ಕದ್ದು, ವಿವಿಧ ಆವೃತ್ತಿಗಳಲ್ಲಿ ಹಾಗೆಯೇ ಮಾಡಲ್ಪಟ್ಟಿದೆ. ಕೀರ್ತನೆಯು ಲೋಕದ ಪ್ರಕೃತಿಯ ಅಂಶಗಳೊಂದಿಗೆ ದೇವರ ಶಕ್ತಿಯ ಚಿತ್ರಣವನ್ನು ರೂಪಿಸುತ್ತದೆ. "ಅಗ್ನಿಯಜ್ವಾಲೆ" ಎಂಬುದು ದೇವರ ಶಕ್ತಿ ಮತ್ತು ಪರಾಕ್ರಮಕ್ಕೆ ಸಾಂಕೇತಿಕ ಪದವಾಗಿದೆ. ಈ ಸಂಕೇತವು ದೇವರು ತನ್ನ ವೈರಿಗಳ ಮೇಲೆ ನಾಶನ ಮತ್ತು ನ್ಯಾಯತೀರ್ಪನ್ನು ಕಳುಹಿಸುವ ರೀತಿಯನ್ನು ಚಿತ್ರಿಸುತ್ತದೆ. ಅದು ತನ್ನ ಮೂಲಭೂತ ಅರ್ಥದಲ್ಲಿ, ದೇವರ "ಅಗ್ನಿಶಕ್ತಿ"ಯನ್ನು ತಿಳಿಯಪಡಿಸುತ್ತದೆ.

ಲೇಖಕನು ಈ ಸಾಲನ್ನು ಕೀರ್ತನೆಯ LXX ಅನುವಾದದಿಂದ ಆರಿಸಿಕೊಂಡಿರುತ್ತಾನೆ ಮತ್ತು 4ನೇ ವಚನದ ಪದರಚನೆಯನ್ನು ತನ್ನ ಸ್ವಂತ ಉದ್ದೇಶಕ್ಕೆ ಬಳಸುತ್ತಾನೆ. ಆತನು ಕೀರ್ತನೆಗಳ ಮಾತುಗಳನ್ನು ಬಳಸಿದನು, ಆದರೆ ಅವುಗಳಿಗೆ ಒಂದು ವಿಶೇಷ ಸನ್ನಿವೇಶವನ್ನು ಒದಗಿಸಿದನು. ಒಬ್ಬ ಪ್ರೇರಿತ ಬರಹಗಾರನಾಗಿ, ಆತನು ಅದನ್ನು ಮಾಡಬಲ್ಲವನಾಗಿದ್ದನು. ಪೌಲನು ಹಬಕ್ಕೂಕ 2:4ರಿಂದ ಉಲ್ಲೇಖಿಸುತ್ತಾ ರೋಮಾ 1:17ರಲ್ಲಿ ಹೀಗೆಯೇ ಮಾಡಿದನು.

LXXನಲ್ಲಿರುವ ಹಳೆಯ ಒಡಂಬಡಿಕೆಯ ಪ್ರೇರಿತ ವಾಕ್ಯಭಾಗಕ್ಕೆ ಸರಿಯಾದ ಇಂಗಿತವನ್ನು ಒದಗಿಸುವಂತೆ ದೇವರ ಆತ್ಮನು ಅವನನ್ನು ಶಕ್ತಗೊಳಿಸಿದನು ಎಂದು R. C. H. Lenski ನಂಬುತ್ತಾನೆ. ಆತನು ಹೇಳಿದ್ದೇನೆಂದರೆ ಇಬ್ರಿಯರಿಗೆ ಬರದ ಪುಸ್ತಕವು "ಹಳೆಯ ಒಡಂಬಡಿಕೆ ಪದಗಳಲ್ಲಿ ತೂರಿ ಹೋಗುವಿಕೆ ಮತ್ತು ಒಳಗೊಂಡಿರುವಿಕೆಯಾಗಿದೆ. . . . ಹೊಸ ಒಡಂಬಡಿಕೆಯ ವಾಚಕರಿಗಾಗಿ ತಾನು ಬಯಸಿದ ರೀತಿಯಲ್ಲಿ ದಾಖಲಿಸಲ್ಪಡುವ ರೀತಿಯಲ್ಲಿ ನಿಜವಾದ ವ್ಯಾಖ್ಯಾನಗಳನ್ನು ನೀಡುವ ಹಾಗೆ ಪವಿತ್ರಾತ್ಮನು ಲೇಖಕನಿಗೆ ಮಾರ್ಗದರ್ಶನ ನೀಡಿದನು."[38] ಹೇಗೂ, ಈ ವಿಷಯದಲ್ಲಿ ಕೀರ್ತನೆಯು ಏನು ಹೇಳುತ್ತದೆಂಬ ವಾಸ್ತವಾಂಶಗಳೊಂದಿಗೆ ಆತನ ಅಭಿಪ್ರಾಯವು ಹೊಂದಿಕೆಯಾಗುವಂತೆ ಕಾಣಿಸುವದಿಲ್ಲ.

ಲೇಖಕನು ಮಾಡಿದ ಕಾರ್ಯದ ಕುರಿತಾದ ಉತ್ತಮ ದೃಷ್ಟಿಕೋನವೆಂದು

ತೋರುವದೇನೆಂದರೆ ಕೀರ್ತನೆ 104:4ರ ಮಾತುಗಳನ್ನು ಲೇಖಕನು ಯೇಸು ಮತ್ತು ದೇವದೂತರ ನಡುವೆ ಹೋಲಿಕೆಯನ್ನು ಮಾಡುವದಕ್ಕೆ ಅಳವಡಿಸಿಕೊಳ್ಳುವದನ್ನು ಪವಿತ್ರಾತ್ಮನು ಮೇಲ್ವಿಚಾರಣೆ ಮಾಡಿದನು ಎಂಬದೆ. ಆತನು ಹಾಗೆ ಮಾಡುವ ವೇಳೆ, ದೇವರ ಬಣ್ಣನೆ ಮಾಡುವದಕ್ಕೆ ಅದರ ಗ್ರೀಕ್ ಅನುವಾದದಿಂದ ಉಲ್ಲೇಖನವನ್ನು ಆರಿಸಿಕೊಳ್ಳುವಂತೆ ಸಹ ಲೇಖಕನನ್ನು ನಿರ್ದೇಶಿಸಿದನು. ಲೇಖಕನು ತನ್ನ ಪತ್ರಿಕೆಯಲ್ಲಿ ಆ ಸಾಲನ್ನು ಏಕೀಕರಿಸಿಕೊಂಡಾಗ, ಆ ಸಾಳು ಪ್ರೇರಿತ ಶಾಸ್ತ್ರವಾಯಿತು.

**1:8-12**

**8ಮಗನ ವಿಷಯದಲ್ಲಾದರೋ –**
**ದೇವರೇ, ನಿನ್ನ ಸಿಂಹಾಸನವು ಯುಗ ಯುಗಾಂತರಗಳಲ್ಲಿಯೂ ಇರುವದು;**
**ನ್ಯಾಯದಂಡವೇ ನಿನ್ನ ರಾಜದಂಡವಾಗಿದೆ;**
**9ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ;**
**ಆದದರಿಂದ ದೇವರು, ನಿನ್ನ ದೇವರೇ, ನಿನ್ನನ್ನುನಿನ್ನ ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದತೈಲದಿಂದ ಅಭಿಷೇಕಿಸಿದ್ದಾನೆ**
**ಎಂತಲೂ**
**10ಕರ್ತನೇ, ಆದಿಯಲ್ಲಿ ನೀನು ಭೂಮಿಗೆ ಅಸ್ತಿವಾರವನ್ನು ಹಾಕಿದಿ,**
**ಗಗನಮಂಡಲವು ನಿನ್ನ ಕೈಕೆಲಸವಾಗಿದೆ;**
**11ಅವು ನಾಶವಾಗುವವು, ಆದರೆ ನೀನು ಶಾಶ್ವತ ವಾಗಿರುತ್ತೀ;**
**ಅವೆಲ್ಲವೂ ವಸ್ತ್ರದಂತೆ ಹಳೇವಾಗುವವು,**
**12ಅವುಗಳನ್ನು ಮೇಲಂಗಿಯಂತೆಯೂ ವಸ್ತ್ರ ದಂತೆಯೂ ಮಡಿಸುತ್ತೀ,**
**ಮತ್ತು ಅವು ಮಾರ್ಪಡುವವು;**
**ನೀನಾದರೋ ಏಕರೀತಿಯಾಗಿದ್ದೀ.**
**ನಿನ್ನ ವರುಷಗಳು ಮುಗಿದುಹೋಗುವದಿಲ್ಲ ಎಂತಲೂ ಹೇಳುತ್ತಾನೆ.**

**ವಚನ 8.** ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, **ಮಗನ ವಿಷಯದಲ್ಲಾದರೋ – ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದು.** 8 ಮತ್ತು 9 ವಚನಗಳಲ್ಲಿ, ಲೇಖಕನು ಕೀರ್ತನೆ 45ರ ಪದಗಳನ್ನು ಬಳಸಿಕೊಳ್ಳುತ್ತಾನೆ, ಅದು ಪ್ರಥಮ ಶತಮಾನದಲ್ಲಿ ಯೆಹೂದಿ ಪಂಡಿತರೊಳಗೆ ಒಂದು ಮೆಸ್ಸೀಯನಿಗೆ ಸಂಬಂಧಿಸಿದ ಅರ್ಥವುಳ್ಳ ಕೀರ್ತನೆಯೆಂದು ವ್ಯಾಪಕವಾಗಿ ಗುರುತಿಸಲ್ಪಟ್ಟಿದ್ದಾಗಿತ್ತು.[39] Kistemaker ಹೇಳಿದ್ದೇನೆಂದರೆ, "ಪ್ರಥಮ ಮತ್ತು ದ್ವಿತಿಯ ಶತಮಾನದ ಕ್ರೈಸ್ತರು ಕೀರ್ತನೆಯ ಮಾತುಗಳನ್ನು ಯೇಸು ಕ್ರಿಸ್ತನು ನೆರವೇರಿಸಿದ್ದಾನೆಂದು ಪರಿಗಣಿಸಿದ್ದರೆಂಬದು ಇಬ್ರಿಯ 1ನೇ ಅಧ್ಯಾಯದ ಸನ್ನಿವೇಶ ಮತ್ತು ಅನ್ವಯಿಕೆಯಿಂದ ಹಾಗೂ ಕೀರ್ತನೆ 45:6, 7 ವಚನಗಳನ್ನು ಹಲವಾರು ಸಾರಿ ಉಲ್ಲೇಖನ ಮಾಡಿದಂತಹ Justin Martyr ಮತ್ತು Irenaeus ರಂತಹ ಲೇಖಕರ ಮೂಲಕ ಸ್ಪಷ್ಟವಾಗಿ ತಿಳಿದು ಬರುತ್ತದೆ."[40] ಅನಾಮಿಕ ಕೀರ್ತನೆಗಾರನು ಒಂದು ರಾಜವಂಶದ ವಿವಾಹ ಕೊಂಡಾಟದ ಬಗ್ಗೆ ಬರೆಯುತ್ತಾ ಮದಲಿಂಗ ಮತ್ತು ಮದಲಗಿತ್ತಿಯನ್ನು ಸಂಬೋಧಿಸುತ್ತಾನೆ. ರಾಜನನ್ನು (ಬಹುಶಃ ದಾವೀದನ ವಂಶದ ಒಬ್ಬ ರಾಜಕುಮಾರ ಅಥವಾ ಅರಸನು ಆಗಿರಬಹುದು) ದೇವರಿಂದ ಆದುಕೊಂಡವನು ಎಂದು ಸಂಬೋಧಿಸಲಾಗಿದೆ; ಆದರೆ ಆದರ್ಶೀಕರಿಸಿದ

ಅರ್ಥದಲ್ಲಿ ಭಾಷೆಯು, ದಾವೀದನ ಸಂತಾನವಾದ ಮೆಸ್ಸೀಯನನ್ನು ಸೂಚಿಸತಕ್ಕದ್ದು!

ಹೇಳಿಕೆಯು ಯೇಸುವನ್ನು ಬಣ್ಣಿಸುತ್ತಿದೆ, ಆತನು ಪ್ರತಿಯಾಗಿ "ದೇವರು" ಎಂದು ಕರೆಯಲ್ಪಟ್ಟಿದ್ದಾನೆ (ವ. 8). James Thompson ಹೀಗೆ ಹೇಳುತ್ತಾನೆ, "ಇಬ್ರಿಯ ಮೂಲ ವಾಕ್ಯವು ಅರಸನನ್ನು ದೇವರೆಂದು ಸಂಬೋಧಿಸುವ ಇಂಗಿತವನ್ನು ಹೊಂದಿತ್ತೋ ಅಥವಾ ಇಲ್ಲವೋ ಎಂಬುದನ್ನು ಒಬ್ಬನು ಖಚಿತವಾಗಿ ಹೇಳುವದಕ್ಕಾಗುವದಿಲ್ಲ."[41] Anchor Bible seriesನ ಇಬ್ಬರು ಲೇಖಕರಾದ George Wesley Buchanan 1972ರಲ್ಲಿ ಮತ್ತು Craig R. Koester 2001ರಲ್ಲಿ, ಈ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು "ದೇವರ ಸಿಂಹಾಸನದ ನಿತ್ಯತ್ವವನ್ನು ಸೂಚಿಸುತ್ತದೆ, ಅದರ ಮೇಲೆ ಮಗನು ಕುಳಿತುಕೊಳ್ಳುವನು" ಎಂಬುದನ್ನು ಸೂಚಿಸುತ್ತದೆ, ಮತ್ತು ಯೇಸುವು ದೇವರು ಎಂದಲ್ಲ ಎಂಬದಾಗಿ Buchanan ನಂಬಿದನು.[42] Koesterನು ಹೇಳಿದ್ದೇನೆಂದರೆ, "ವಾಕ್ಯಭಾಗವು ಮೂಲತಃ ದೇವರನ್ನು ಸಂಬೋಧಿಸಿ ಹೇಳಲ್ಪಟ್ಟದ್ದು, ಆದರೆ ಈಗ ದೇವರು ಮಾತಾಡುವವನಾಗಿದ್ದು ಮಗನನ್ನು 'ದೇವರು' ಎಂದು ಕರೆಯುತ್ತಾನೆ"; "1:8-9ರಲ್ಲಿ ಉಲ್ಲೇಖಿಸಲಾಗಿರುವ ಕೀರ್ತನೆಯು ದೇವರ ಅಭಿಷಿಕ್ತನು 'ದೇವರು' ಎಂದು ಕರೆಯಲ್ಪಡಬಲ್ಲನು ಎಂಬುದನ್ನು ಸೂಚಿಸುತ್ತದೆ. ಯೇಸುವು ಅಭಿಷಿಕ್ತನು ಆಗಿದ್ದಲ್ಲಿ, ಅಥವಾ ಕ್ರಿಸ್ತನು ಆಗಿರುವದಾದರೆ, ಈ ವಾಕ್ಯಭಾಗವು ಆತನನ್ನು 'ದೇವರು' ಎಂದು ಕರೆಯುವದಕ್ಕೆ ಅಧಿಕಾರ ನೀಡುತ್ತದೆ."[43] ಇದು "ಕ್ರಿಸ್ತನ ದೇವತ್ವವನ್ನು ವ್ಯಕ್ತಪಡಿಸುವದಕ್ಕೆ" ಬಳಸಲ್ಪಟ್ಟದ್ದಾಗಿದೆ ಎಂದು Kistemaker ವಿಶ್ವಾಸಿಸುತ್ತಾನೆ.[44] ಯೇಸುವು ದೇವರು ಎಂಬ ಅರ್ಥ ಬರುವಂತೆ ಇದಕ್ಕೆ ಅವಕಾಶ ಕೊಡುವದು LXX ನ್ನು ಸಮರ್ಪಕವಾಗಿ ಅನುಸರಿಸಿದಂತಾಗುವದು ಎಂಬದಾಗಿ F. F. Bruce ಹೇಳುತ್ತಾನೆ.[45] ನನ್ನ ವಿವೇಚನೆಯ ಪ್ರಕಾರ, ಈ ವಾಕ್ಯಭಾಗದ ಸನ್ನಿವೇಶವು ಸ್ಪಷ್ಟವಾಗಿರುತ್ತದೆ: ಯೇಸುವನ್ನು ದೇವರೆಂದು ಕರೆಯಲಾಗಿರುತ್ತದೆ.

ಯೇಸುವು ದೇವರೆಂಬ ಈ ಚಿತ್ರಣವು ಯೆಶಾಯ 9:6ರಲ್ಲಿ ಸಹ ಕೊಡಲ್ಪಟ್ಟಿರುತ್ತದೆ, ಅಲ್ಲಿ ನಾವು "ಪರಾಕ್ರಮಿಯಾದ ದೇವರು" ಎಂದು ಕರೆಯಲ್ಪಡಲಿದ್ದ ಒಂದು ಮಗುವಿನ ಚಿತ್ರಣವನ್ನು ಕಾಣುತ್ತೇವೆ. ಯೆರೆಮೀಯನು "ಸದ್ಧರ್ಮಿಯಾದ ಮೊಳಕೆಯು" ದಾವೀದನಿಗೋಸ್ಕರ ಚಿಗುರಿಸಲ್ಪಡುವದು ಮತ್ತು ಆತನು "ಯೆಹೋವನೇ ನಮ್ಮ ಸದ್ಧರ್ಮ" ಎಂದು ಕರೆಯಲ್ಪಡುವ ರಾಜನಾಗಿ ಆಳುವನು ಎಂಬದಾಗಿ ಮುಂತಿಳಿಸಿದನು (ಯೆರೆಮೀಯ 23:5, 6).[46] ದೇವರ ಮಗನಾಗಿರುವ ಯೇಸುವು, "ದೇವರು" ಸಹ ಆಗಿರುತ್ತಾನೆ – ಆತನು ದೇವತ್ವವುಳ್ಳವನು, ದೈವಿಕನು, ಮತ್ತು ಆತನು ತಂದೆಯ ತಿರುಳನ್ನೇ ಹೊಂದಿದ್ದಾನೆ ಎಂಬುದು ಅತ್ಯಂಥ ಸ್ಪಷ್ಟಗೊಳಿಸಲ್ಪಟ್ಟಿರುತ್ತದೆ. ಮೂವರು ವ್ಯಕ್ತಿಗಳಲ್ಲಿ, ಅಥವಾ ವ್ಯಕ್ತಿತ್ವಗಳಲ್ಲಿ ಒಂದೇ ತಿರುಳು ಹೊಂದಿರುವ ಒಬ್ಬನೇ ದೇವರಿದ್ದಾನೆ.

New World Translation ತರ್ಜುಮೆಯು ಈ ವಚನದಲ್ಲಿ "ದೇವರು ನಿನ್ನ ಸಿಂಹಾಸನ" ಎಂಬ ಸಂಬೋಧನೆಯನ್ನು ಬಳಸುತ್ತದೆ, ಆದರೆ ಈ ಅನುವಾದಕ್ಕೆ ಪ್ರತಿವಾದ ಮಾಡುವದಕ್ಕಾಗುವದಿಲ್ಲ. ಸರಿಯಾದ ಅನುವಾದವೆಂಥರೆ "ಓ, ದೇವರೇ, ನಿನ್ನ ಸಿಂಹಾಸನವು ಯುಗಯುಗಗಳಲ್ಲಿಯೂ ಇರುವದು." ಬಹುಪಾಲು ಪಂಡಿತರು – NASB, KJV, ASV, RSV, ಮತ್ತು NEBಗಳನ್ನು ಅನುವಾದ ಮಾಡಿರುವವರು – ಅದು "ಓ, ದೇವರೇ, ನಿನ್ನ ಸಿಂಹಾಸನವು ಯುಗಯುಗಗಳಲ್ಲಿಯೂ ಇರುವದು" ಎಂಬದರಲ್ಲಿರುವಂತೆ ಸಂಬೋಧನಾ ವಿಭಕ್ತಿಯದಲ್ಲಿರತಕ್ಕದ್ದು. ಅಷ್ಟುಮಾತ್ರವಲ್ಲದೆ, ಈ ಅನುವಾದವು 2 ಸಮುವೇಲ 7:16ರಲ್ಲಿ ನಾತಾನನು ದಾವೀದನಿಗೆ ಹೇಳಿದ ಮಾತುಗಳೊಂದಿಗೆ ಸಾಮರಸ್ಯದಲ್ಲಿರುತ್ತದೆ. ಈ

ಪರಿಭಾಷೆಯನ್ನು ಅರಸನಿಗೆ ಅನ್ವಯಗೊಳಿಸುವದು ವಿಶಿಷ್ಟವಾಗಿರಲಿಲ್ಲ, ವಿಶೇಷವಾಗಿ ದಾವೀದನ ಸಂತಾನದ ವಿಷಯದಲ್ಲಿ ವಿಶಿಷ್ಟವಾಗಿರಲಿಲ್ಲ, ಯಾಕೆಂದರೆ ಅರಸನು ಜನರಿಗೆ ದೇವರ ಪ್ರತಿನಿಧಿಯಾಗಿದ್ದನು.

ಮೊದಲನೆಯ ಕೊರಿಂಥ 15:24ನೇ ವಚನವು ಮೆಸ್ಸೀಯನ ಆಳ್ವಿಕೆಯು ಅಂತಿಮ ಪುನರುತ್ಥಾನದ ವೇಳೆಯಲ್ಲಿ ಅಂತ್ಯಗೊಳ್ಳುವದು ಎಂಬದಾಗಿ ಕಲಿಸುತ್ತದೆ. ಖಂಡಿತವಾಗಿಯೂ, ರಕ್ಷಿಸಲ್ಪಟ್ಟವರು ತಂದೆಗೆ ಒಪ್ಪಿಸಲ್ಪಡುವಾಗ ಮಧ್ಯಸ್ಥನಾಗಿ ಕ್ರಿಸ್ತನ ಆಳ್ವಿಕೆಯು ಅಂತ್ಯಗೊಳ್ಳುವದು, ಆದರೆ ಆತನು ಅರಸನಾಗಿ ದೇವರ ಸಂಗಡ ಸದಾಕಾಲಕ್ಕೂ ಆಳುವದನ್ನು ಮುಂದುವರೆಸುವನು (ಲೂಕ 1:33; 2 ಪೇತ್ರ 1:11; ದಾನಿಯೇಲ 7:14). ಆಗ ಆತನು ಮಧ್ಯಸ್ಥನ ಕೆಲಸವನ್ನು ವಹಿಸಿಕೊಳ್ಳುವದಕ್ಕೆ ಮುಂಚೆ ದೇವರ ಸಂಗಡ ಹೊಂದಿದ್ದ ಅದೇ ಧೊರೆತನವನ್ನು ಪಡೆದುಕೊಳ್ಳುವನು.

**ನ್ಯಾಯದಂಡ** ಎಂಬುದು ಅರಸನ ಕೋಲನ್ನು ಸೂಚಿಸುತ್ತದೆ, ಅದು ಆತನ ಅಧಿಕಾರವನ್ನು ತೋರಿಸುವದಾಗಿರುತ್ತದೆ. ಕೋಲಿನಿಂದ ಆಜ್ಞಾ ಸನ್ನೆ ಮಾಡುವದು ಒಂದು ಆಜ್ಞೆಯಷ್ಟೇ ಪ್ರಾಮುಖ್ಯತೆಯನ್ನು ಹೊಂದಿರುತ್ತಿತ್ತು (ಎಸ್ತೇರಳು 4:11). ಈ ಪದಗುಚ್ಛದ ಒತ್ತು ಮೆಸ್ಸೀಯನ ಕ್ರಿಯೆಗಳು ನ್ಯಾಯವಾದವುಗಳೆಂಬದರ ಮೇಲಿರುತ್ತದೆ.

**ವಚನ 9. ನೀನು ಧರ್ಮವನ್ನು ಪ್ರೀತಿಸಿದಿ** ಎಂದು ಲೇಖಕನು ಹೇಳುತ್ತಾನೆ. ಕ್ರಿಸ್ತನಿಗಿಂತಲೂ ಹೆಚ್ಚು ನ್ಯಾಯವಾಗಿ ಯಾವನೂ ಆಳಲಾರನು ಅಥವಾ ನೀತಿಯನ್ನು ಪ್ರೀತಿಸಲಾರನು. ಬೇರೆ ಯಾವ ಸಾಮ್ರಾಜ್ಯಗಳು ಆ ರೀತಿ ಆಳ್ವಿಕೆ ಮಾಡಲ್ಪಡುತ್ತವೆ? ಸಾಮಾನ್ಯವಾಗಿ ಅರಸರಲ್ಲಿಯೇ ಅತ್ಯುತ್ತಮನಾಗಿರುವ ಅರಸನಿಗೆ ದೀರ್ಘಕಾಲದ ತನಕ ಸಂಪೂರ್ಣ ಅಧಿಕಾರವನ್ನು ಕೊಟ್ಟರೆ ಆತನು ನಿರಂಕುಶ ಪ್ರಭುವಾಗುವನು. ಕ್ರಿಸ್ತನ ಆಳ್ವಿಕೆಯು ಯಾವಾಗಲೂ ನೀತಿ ಮತ್ತು ನ್ಯಾಯದಿಂದ ಕೂಡಿರುತ್ತದೆ. "ಆತನು ಧರ್ಮವನ್ನು (ನೀತಿಯನ್ನು) ಪ್ರೀತಿಸಿದನು" ಮತ್ತು ಎಲ್ಲಾ ಕಾರ್ಯಗಳಲ್ಲಿಯೂ ಆ ತತ್ವವನ್ನು ಅನುಸರಿಸಿದನು (ನೋಡಿ 1 ಪೇತ್ರ 2:21-23).

**ಆದದರಿಂದ ದೇವರು . . . ನಿನ್ನನ್ನು . . . ಅಭಿಷೇಕಿಸಿದ್ದಾನೆ.** ಹಬ್ಬದ ಸಂದರ್ಭಗಳಲ್ಲಿ ಅಥವಾ ಪಟ್ಟಾಭಿಷೇಕದ ವೇಳೆಯಲ್ಲಿ ಒಬ್ಬ ಅರಸನನ್ನು ಅಭಿಷೇಕಿಸುವದು ಪ್ರಾಚೀನ ಜಗತ್ತಿನಲ್ಲಿ ಮಹಾ ಸಂತೋಷವನ್ನುಂಟು ಮಾಡುತ್ತಿತ್ತು. ಅಭಿಷೇಕಿಸುವದರಲ್ಲಿ ಎಣ್ಣೆಯನ್ನು ಬಳಸುವದು ಒಂದು ಮಹತ್ವಪೂರ್ಣವಾದ ಘಟನೆಯಲ್ಲಿ ಅಥವಾ ನೇಮಕಗೊಳಿಸುವದರಲ್ಲಿ ಸಾಮಾನ್ಯ ಸಂತೋಷಿಸುವಿಕೆಯನ್ನು ತೋರಿಸುವದಾಗಿತ್ತು. ಅರಸರು, ಯಾಜಕರು, ಮತ್ತು ಪ್ರವಾದಿಗಳು ಅವರ ಹುದ್ದೆಗೆ ಮೀಸಲಿಡಲ್ಪಡುವದರ ಒಂದು ಸಂಕೇತವಾಗಿ ಎಣ್ಣೆಯಿಂದ ಅಭಿಷೇಕಿಸಲ್ಪಡುತ್ತಿದ್ದರು. ಉದಾಹರಣೆಗೆ, ಆರೋನನ ವಿಷಯದಲ್ಲಿ (ಯಾಜಕಕಾಂಡ 8:12), ಆರೋನನ ಪುತ್ರರು (ಅರಣ್ಯಕಾಂಡ 3:3), ಮತ್ತು ಸೌಲ ವಿಷಯದಲ್ಲಿ (1 ಸಮುವೇಲ 10:1) ಇದನ್ನು ನೋಡಬಹುದು.

ಯೇಸುವಿನ ಅಭಿಷೇಕವು ಆತನು ಪರಲೋಕದಲ್ಲಿ ತಂದೆಯ ಬಳಿಗೆ ಹಿಂದಿರುಗಿದ ಸಂದರ್ಭದಲ್ಲಾಗಿತ್ತು, ಆ ವೇಳೆಯಲ್ಲಿ ಆತನ ಮೇಲೆ ರಾಶಿರಾಶಿಯಾದ ಗೌರವವನ್ನು ಸುರಿಸಲಾಯಿತು ಮತ್ತು ಆತನನ್ನು ಸಭೆಗೆ ಶಿರಸ್ಸಾಗಿ, ಪರಲೋಕ ರಾಜ್ಯದ ಅರಸನನ್ನಾಗಿ ಮಾಡಲಾಯಿತು. ಯೇಸುವಿನ ಬಿರುದು ಆಗಿದ್ದ "ಕ್ರಿಸ್ತನು" ಎಂಬ ಹೆಸರಿನ ಅರ್ಥವು "ಅಭಿಷೀಕ್ತನು" ಮತ್ತು ಅದು ಇಬ್ರಿಯ ಭಾಷೆಯ "ಮೆಸ್ಸೀಯನು" ಎಂಬುದಕ್ಕೆ ಸಮಾನವಾದ ಗ್ರೀಕ್ ಪದವಾಗಿರುತ್ತದೆ (ನೋಡಿರಿ ಕೀರ್ತನೆ 2:2). ಯೇಸು ಪರಲೋಕದಲ್ಲಿ ದೇವರ ಸಂಗಡದ ತನ್ನ ಮಹಿಮೆಗೆ ಹಿಂದಿರುಗಿದಾಗ ಗೌರವ ಪಡಿಸಲ್ಪಟ್ಟದ್ದಕ್ಕಿಂತಲೂ ಅಧಿಕವಾಗಿ

ಯಾವನೊಬ್ಬನೂ ಗೌರವಿಸಲ್ಪಡಲಿಲ್ಲ ಅಥವಾ ಎಂದಿಗೂ ಗೌರವಿಸಲ್ಪಡುವದೂ ಇಲ್ಲ.

**ನಿನ್ನ ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ** ಎಂಬುದು NKJV ಯಲ್ಲಿ "ನಿನ್ನ ಜೊತೆಗಿರುವವರಿಗಿಂತ ಅಧಿಕವಾಗಿ" ಎಂದು ಅನುವಾದಿಸಲ್ಪಟ್ಟಿರುತ್ತದೆ. ಈ ಪದಗುಚ್ಛದ ಅರ್ಥವು ಕ್ರಿಸ್ತನು ದೇವದೂತರಿಗಿಂತ ಉನ್ನತನೆಂದೋ? ದೇವದೂತರು ನಿಜವಾಗಿಯೂ ಕ್ರಿಸ್ತನಿಗಿಂತ ಕಡಿಮೆಯಾದವರು, ಆದರೆ ಅವರನ್ನು ಆತನ "ಹಿಂಬಾಲಕರು" (KJV) ಎಂದು ಕರೆಯುವದಕ್ಕೆ ಸಾಧ್ಯವೋ? 2:10ರಲ್ಲಿ "ಬಹು ಮಂದಿ ಪುತ್ರರು" ವಿಮೋಚಿಸಲ್ಪಟ್ಟವರು ಆಗಿದ್ದು ಅವರನ್ನು ಚೊಚ್ಚಲ ಮಗನು ತನ್ನ "ಸಹೋದರರು" ಎಂದು ಕರೆಯುವದಕ್ಕೆ ನಾಚಿಕೆ ಪಡದವನಾಗಿದ್ದಾನೆ (2:11). 3:14ರಲ್ಲಿ ವಿಮೋಚಿಸಲ್ಪಟ್ಟವರು ಮೆಸ್ಸೀಯನ μέτοχοι (*metochoi*, "ಪಾಲುಗಾರರು") ಎಂದು ಕರೆಯಲ್ಪಟ್ಟಿದ್ದಾರೆ, ಅದೇ ಗ್ರೀಕ್ ಪದವು ಇಲ್ಲಿ "ಜೊತೆಗಾರರು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಹೇಗೂ, ಈ ಸನ್ನಿವೇಶದಲ್ಲಿ, ಯೇಸು ನಿತ್ಯನಾದ ಕುಮಾರನು ಮತ್ತು ಅವರು ಸೃಷ್ಟಿಸಲ್ಪಟ್ಟ ಜೀವಿಗಳು ಆಗಿದ್ದರೂ, ದೇವದೂತರು ಜೊತೆಗಾರರಾಗಿರತಕ್ಕದ್ದು.

**ವಚನ 10-12.** ಕೀರ್ತನೆ 102:25-27 ವಾಕ್ಯಭಾಗವು ಈ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ. ಕೀರ್ತನೆಯನ್ನು ಸಾಮಾನ್ಯವಾಗಿ ಯೆಹೋವನಿಗೆ ಸಂಬೋಧಿಸಿ ಬರೆದದ್ದು ಎಂದು ತಿಳಿದುಕೊಳ್ಳಲಾಗುತ್ತದೆ, ಕ್ರಿಸ್ತನನ್ನು ಸೂಚಿಸಿ ಹೇಳಿದ ಯಾವ ಮಾತನ್ನು ಒಳಗೊಂಡಿರುವಂತೆ ತೋರುವದಿಲ್ಲ. ಹೇಗೂ, ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಉಲ್ಲೇಖನವು ಹಳೆಯ ಒಡಂಬಡಿಕೆ ಘಟನೆಗಳು ಮತ್ತು ಪ್ರತಿಷ್ಠಾಪನೆಗಳು ಅನೇಕ ಸಾರಿ ತಮ್ಮನ್ನು ದಾಟಿ ಅನೇಕ ಕಾರ್ಯಗಳ ಕಡೆಗೆ ಬೆರಳು ತೋರಿಸುವವುಗಳಾಗಿದ್ದ ವೆಂಬುದನ್ನು ಸ್ಪಷ್ಟವಾಗಿ ಜ್ಞಾಪಿಸುತ್ತವೆ. ಕೀರ್ತನೆಯು ನಜರೇತಿನ ಯೇಸುವಿನಲ್ಲಿ ಅಂತಿಮ ನೆರವೇರಿಕೆಯನ್ನು ಹೊಂದಿಲ್ಲವೆಂದು ಹೇಳಬೇಕಾದರೆ ಒಬ್ಬನು ಇಡೀ ಇಬ್ರಿಯರಿಗೆ ಪತ್ರಿಕೆಯನ್ನು ತಿರಸ್ಕರಿಸಬೇಕು ಮತ್ತು ಅದರ ಅಧಿಕಾರವನ್ನು ನಿರಾಕರಿಸಬೇಕು ಎಂದಾಗುತ್ತದೆ. ಹೊಸ ಒಡಂಬಡಿಕೆಯಲ್ಲಿ ದೃಷ್ಟಾಂತಗಳು, ಛಾಯೆಗಳು, ಪ್ರವಾದನಾತ್ಮಕ ನೆರವೇರಿಕೆಗಳು, ಮತ್ತು ವಾಕ್ಸರಣಿಯ ಮೂಲಕವಾಗಿ ಹಳೆಯ ಒಡಂಬಡಿಕೆಯ ಬಳಕೆಯು ಎರಡೂ ಒಡಂಬಡಿಕೆಗಳನ್ನು ಮುರಿಯಲ್ಪಡದ ರೇಖೆಯಲ್ಲಿ ವಿಲೀನಗೊಳಿಸುತ್ತದೆ. ಕೀರ್ತನೆ 102ಯು ತನ್ನ ಜನರ ಮೇಲೆ ಇಟ್ಟಿರುವ ರಕ್ಷಣೆಗಾಗಿ ದೇವರನ್ನು ಕೊಂಡಾಡುತ್ತದೆ, ಲೇಖಕನು ಅದನ್ನು ಕ್ರಿಸ್ತನಿಗೆ ಅನ್ವಯಗೊಳಿಸಿದ್ದು ಅದನ್ನು ಒಂದು ಮೆಸ್ಸೀಯನಿಗೆ ಸಂಬಂಧಿತ ಕೀರ್ತನೆಯಾಗಿ ಗುರುತಿಸತಕ್ಕದ್ದೆಂಬದನ್ನು ತೋರಿಸುತ್ತದೆ.

ಹಳೆಯ ಒಡಂಬಡಿಕೆಯಲ್ಲಿ ಯೆಹೋವನಿಗೆ ಮಾತ್ರವೇ ಅನ್ವಯಿಸಲ್ಪಟ್ಟ ಪದಗಳು ಹಾಗೂ ಭಾವನೆಗಳು ಹೊಸ ಒಡಂಬಡಿಕೆಯಲ್ಲಿ ಯಾವದೇ ಸಂಕೋಚ ಅಥವಾ ಸಂಶಯವಿಲ್ಲದೆಯೇ ಸಮಾನತೆಯಲ್ಲಿ ಯೇಸುವಿಗೆ ಅನ್ವಯಿಸಲ್ಪಡುತ್ತವೆ. ಇಬ್ರಿಯ 1:2, 3 ವಚನಗಳು ಸೃಷ್ಟಿಯ ಕಾರ್ಯದಲ್ಲಿ ಯೇಸು ಭಾಗಿಯಾಗಿದ್ದನ್ನು ಈಗಾಗಲೇ ತೋರಿಸಿ ಕೊಟ್ಟಿರುತ್ತವೆ. 10ರಿಂದ 12 ವಚನಗಳಲ್ಲಿ, ಕೀರ್ತನೆ 102ನ್ನು ಕ್ರಿಸ್ತನಿಗೆ ಅನ್ವಯಗೊಳಿಸುವದು ಆ ಯೋಚನೆಯನ್ನು ಮುಂದುವರೆಸುವದಾಗಿದೆ.

ಮಿತಿಗಳೊಳಗೆ, ತಂದೆಯ ಬಗ್ಗೆ ಹೇಳಲ್ಪಡುವದನ್ನು ಮಗನ ಕುರಿತು ಸಹ ಹೇಳಬಹುದಾಗಿದೆ. ಹೇಗೂ, ತಂದೆಯು ತನ್ನದೇ ಆಗಿರುವ ಮಹಿಮೆಯನ್ನು ಹೊಂದಿದ್ದಾನೆ, ಅದೇ ರೀತಿ ಮಗನು ಸಹ ಹೊಂದಿದ್ದಾನೆ (ಯೋಹಾನ 17:4, 5). ದೇವರು ಲೋಕವನ್ನು ರಕ್ಷಿಸುವದಕ್ಕೆ ತನ್ನನ್ನು ಕಳುಹಿಸಿ ಕೊಡಲಿಲ್ಲ (1 ಯೋಹಾನ 4:14). ದೇವರು ಪವಿತ್ರಾತ್ಮನನ್ನು

ತನಗೆ ಕಳುಹಿಸಲಿಲ್ಲ, ಆದರೆ ಲೋಕಕ್ಕೆ ಪಾಪದ ಅರುಹು ಹುಟ್ಟಿಸುವದಕ್ಕಾಗಿ ಕಳುಹಿಸಿದನು (ಯೋಹಾನ 16:7, 8). ಈ ಕೀರ್ತನೆಯನ್ನು ಕ್ರಿಸ್ತನಿಗೆ ಅನ್ವಯಗೊಳಿಸುವದರಲ್ಲಿ ಪ್ರಥಮ ಶತಮಾನದ ಕ್ರೈಸ್ತರಿಗೆ ಯಾವದೆ ಕಷ್ಟವು ಆಗಿರಲಿಕ್ಕಿಲ್ಲ.

ಒಂದು ಅರ್ಥದಲ್ಲಿ, ದೇವರು, ಕ್ರಿಸ್ತನು, ಮತ್ತು ಪವಿತ್ರಾತ್ಮ ಒಂದೇ ಆಗಿದ್ದಾರೆ; ಆದಾಗ್ಯೂ ಅವರಿಗೆ ಬೇರೆ ಬೇರೆಯಾದ ಚಟುವಟಿಕೆಗಳು ಮತ್ತು ಉದ್ದೇಶಗಳು ಇರುತ್ತವೆ (ಯೋಹಾನ 10:30; 14:9-17). ಆದದರಿಂದ, ಹಳೆಯ ಒಡಂಬಡಿಕೆಯ ಕೆಲವು ಸನ್ನಿವೇಶಗಳಲ್ಲಿ "ಎಲೋಹಿಮ್" ಎಂಬ ಬಹುವಚನದ ಹೆಸರಿನಲ್ಲಿ ತಂದೆ ಮತ್ತು ಮಗ ಇಬ್ಬರೂ ಸೇರಿರುವ ಸಾಧ್ಯತೆಯಿರುತ್ತದೆ. ದೇವದೂತರು ಸೃಷ್ಟಿಯ ಕಾರ್ಯದಲ್ಲಿ ಕೇವಲ ವೀಕ್ಷಕರಾಗಿದ್ದರು; ಮಗನು ಅದರಲ್ಲಿ ದೇವರ ಪ್ರತಿನಿಧಿಯಾಗಿದ್ದನು (ಇಬ್ರಿಯ 1:10). ಮುಂಚಿನ ಉಲ್ಲೇಖನವು ಆತನನ್ನು "ದೇವರು" ಎಂದು ಕರೆದಿತ್ತು ಮತ್ತು ಇದು "ಕರ್ತನು" ಎಂದು ಹೊಂದಿರುತ್ತದೆ.

ವಾಕ್ಯಭಾಗವು ಹೇಳುತ್ತದೆ, **ಅವುಗಳನ್ನು ಮೇಲಂಗಿಯಂತೆಯೂ ವಸ್ತ್ರದಂತೆಯೂ ಮಡಿಸುತ್ತೀ, ಮತ್ತು ಅವು ಮಾರ್ಪಡಿಸುವವು** (ವ. 12). ಕ್ರಿಸ್ತನು ಉಡುಪನ್ನು ಅಲ್ಲಾಡಿಸುವಂತೆ ಭೂಮಿಯನ್ನು ಅಲ್ಲಾಡಿಸುವನು. ಈ ಭೂಮಿಯು ತೆಗೆದು ಬಿಟ್ಟು ಮಡಿಸಿ ಇಡುವ ತಲೆಗೆ ಕಟ್ಟಿಕೊಳ್ಳುವ ವಸ್ತ್ರವಿದ್ದಂತೆ. "ವಸ್ತ್ರ" ಎಂಬುದಕ್ಕಿರುವ ಪದವು ಮತ್ತಾಯ 5:40ರಲ್ಲಿ ಸಹ ಬಳಸಲ್ಪಟ್ಟಿದೆ. ನಾವು ಒಂದು ಜುಬ್ಬ ಅಥವಾ ಅಂಗಿಯನ್ನು ಮಡಿಸಿ ಇಡುವದು ಹೇಗೋ ಹಾಗೆಯೇ ಆತನಿಗೆ ವಿಶ್ವವನ್ನು ಮಡಿಸಿ ಇಡುವದು ಅಷ್ಟೇನೂ ಕಷ್ಟಕರವಾಗಿರುವದಿಲ್ಲ! ದೇವರು ಈ ಲೋಕವನ್ನು ಯಾವ ಗಳಿಗೆಯಲ್ಲಾದರೂ ಅಂತ್ಯಗೊಳಿಸಬಲ್ಲನು. ಹಾಗಿದ್ದರೂ, ಯೇಸು ನೆಲೆಯಾಗಿರುವನು. ಆತನು ಸದಾಕಾಲವೂ ಇರುವನು, ಮತ್ತು ತನ್ನೊಂದಿಗೆ ನಿಲ್ಲುವವರನ್ನು ಆತನು ಕೈ ಬಿಡುವದಿಲ್ಲ (ಇಬ್ರಿಯ 13:5, 6). ಇಬ್ರಿಯ 12:26ನೇ ವಚನವು ಇನ್ನೊಂದು ಸಾರಿ ಲೋಕವನ್ನು (ವಿಶ್ವವನ್ನು) ಕಂಪಿಸುವದು ಸಂಭವಿಸುವದು ಎಂಬುದನ್ನು ತೋರಿಸುತ್ತದೆ; ಆದರೆ ನಾವು ಭಾಗವಾಗಿರುವ ಯೇಸುವಿನ ರಾಜ್ಯವು ಆ ವಿಧದಲ್ಲಿ ನಡುಗಿಸಲ್ಪಡುವದಕ್ಕೆ ಅಥವಾ ನಾಶಗೊಳಿಸಲ್ಪಡುವದಕ್ಕೆ ಸಾಧ್ಯವಿಲ್ಲ. ಈ ಭಾವನೆಯು ನಮಗೆ ದಾನಿಯೇಲ 2 ನೇ ಅಧ್ಯಾಯದಲ್ಲಿ ಅರ್ಥನಿರೂಪನೆ ಮಾಡಲ್ಪಟ್ಟಿರುವ ಕನಸನ್ನು ಜ್ಞಾಪಿಸುತ್ತದೆ, ಅದು ಪ್ರವಾದನೆಯಲ್ಲಿ ಕರ್ತನಿಂದ ಸ್ಥಾಪಿಸಲ್ಪಟ್ಟ ರಾಜ್ಯವು ಸದಾಕಾಲವೂ ಉಳಿಯುವದು ಎಂಬುದನ್ನು ತೋರಿಸುತ್ತದೆ (ವಚನಗಳು 44, 45).

"ಅವುಗಳು ಮಾರ್ಪಡುವವು" ಎಂಬುದು ಭೂಮಿ ಮತ್ತು ಆಕಾಶಗಳನ್ನು ಸೂಚಿಸುತ್ತದೆ (ಮತ್ತಾಯ 24:35; 2 ಪೇತ್ರ 3:10-13). ಅದಕ್ಕೆ ತದ್ವಿರುದ್ಧವಾಗಿ, ನಿರಂತರವೂ **ಹಾಗೆಯೇ** ಇರುವವನು ಕ್ರಿಸ್ತನೇ ಆಗಿದ್ದಾನೆ (ಇಬ್ರಿಯ 13:8).

ಈ ವಾಕ್ಯಭಾಗ ಮತ್ತು 2 ಪೇತ್ರ 3:10-13 ಭೂಮಿಯ ನಾಶನವನ್ನು ಸೂಚಿಸುತ್ತವೆ. ಪಸ್ಕ (ವಿಮೋಚನಕಾಂಡ 12:11-14) ಮತ್ತು ಸಬ್ಬತ್ ಎರಡೂ "ಶಾಶ್ವತವಾಗಿ" ಇರತಕ್ಕವುಗಳು (ಯಾಜಕಕಾಂಡ 24:8). ಹೇಗೂ, "ಶಾಶ್ವತ" (עוֹלָם, *'olam*) ಎಂಬ ಪದವು ನಿರ್ದಿಷ್ಟವಾಗಿ ನೇಮಿಸಲ್ಪಟ್ಟಿರುವ ಕಾಲಾವಧಿ ತನಕ ಅಸ್ತಿತ್ವದಲ್ಲಿರುವ ಒಂದನ್ನು ಸೂಚಿಸುವದಾಗಿದೆ, ಹೀಗೆ "ಶಾಶ್ವತವಾಗಿ," ಅಥವಾ ಕಾಲಾವಧಿಯ ಇಡೀ ಸಮಯದ ವರೆಗೆ ಅಸ್ತಿತ್ವದಲ್ಲಿರುವದಾಗಿದೆ.

ಪ್ರಸಂಗಿ 1:4 "ಭೂಮಿಯಾದರೋ ಶಾಶ್ವತವಾಗಿ ನಿಲ್ಲುವದು" ಎಂದು ಹೇಳುತ್ತದೆ. ಹೇಗೂ, ಸೊಲೊಮೋನನು ಹೇಳುತ್ತಿರುವದೇನೆಂದರೆ ಭೂಮಿಗೆ *ಬಹುಕಾಲ ಉಳಿಯುವ* ಸ್ವಭಾವವಿರುತ್ತದೆ ಎಂಬದೆ; ಅದಕ್ಕೆ ನಿತ್ಯವಾದ ಸ್ವಭಾವವಿರುತ್ತದೆಂದು ಆತನು ಹೇಳುತ್ತಿಲ್ಲ. ಪ್ರಸಂಗಿ ಪುಸ್ತಕವನ್ನು ಅದರ ಒಟ್ಟಾರೆ ಸನ್ನಿವೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಓದತಕ್ಕದ್ದು.

ಅದು ಅನೇಕ ಸಾರಿ ಭೌತಿಕವಾದಿಯ ಕಣ್ಣಿಗೆ ಸಂಗತಿಗಳು ಹೇಗೆ ಕಾಣಿಸಿಕೊಳ್ಳುತ್ತವೋ ಆ ರೀತಿಯ ಘೋಷಣೆಗಳನ್ನೊಳ ಗೊಂಡಿರುತ್ತದೆ, ಅಂಥವರಿಗೆ ಕೇವಲ ಭೌತಿಕವಾದದ್ದೇ ಅತಿ ಮುಖ್ಯವಾದರೆ, ಜೀವನದ ಆತ್ಮೀಕ ಅಂಶಗಳು ಯಾವ ಪ್ರಯೋಜವಿಲ್ಲದವುಗಳಾಗಿರುತ್ತವೆ. ಜೀವನದಲ್ಲಿ ಎಲ್ಲವೂ ವ್ಯರ್ಥ ಅಥವಾ “ಗಾಳಿಯನ್ನು ಹಿಂದಟ್ಟಿದ್ದ ಹಾಗೆ” ಇರುತ್ತದೆಂದು ನಿಮಗೆ ಅನ್ನಿಸುತ್ತದೋ? (ಉದಾಹರಣೆಗೆ ಪ್ರಸಂಗಿ 1:14 ನೋಡಿರಿ.) ಪ್ರಸಂಗಿ ಪುಸ್ತಕದ ಲೇಖಕನು ಅದನ್ನು ಹೆಚ್ಚು ಸೂಕ್ಷ್ಮವಾಗಿ ಪರಿಗಣನೆಗೆ ತೆಗೆದುಕೊಳ್ಳುವ ತನಕ ಆತನ ಕಣ್ಣಿಗೆ ಅದು ಹಾಗೆಯೇ ತೋರಿತ್ತು, ಆ ಬಳಿಕ ಆತನು ಆತ್ಮೀಕ ಮತ್ತು ನಿತ್ಯವಾದದದ್ದನ್ನು ಪ್ರಶ್ನೆಗೆ ಸೇರ್ಪಡೆಗೊಳಿಸಿದನು ಮತ್ತು ತನ್ನ ಅಂತಿಮ ನಿರ್ಧಾರಕ್ಕೆ ಬಂದನು. (ನೋಡಿರಿ ಪ್ರಸಂಗಿ 12:13, 14.)

### 1:13, 14

**13ಆದರೆ ದೇವದೂತರಲ್ಲಿ ಯಾವನ ವಿಷಯದಲ್ಲಿಯಾದರೂ –**
**ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ**
**ನನ್ನ ಬಲಗಡೆಯಲ್ಲಿ ಕೂತುಕೊಂಡಿರು**
**ಎಂಬದಾಗಿ ಎಂದಾದರೂ ಹೇಳಿದ್ದಾನೋ? 14ಇವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಲ್ಲವೋ?**

**ವಚನ 13.** ಲೇಖಕನು ಕೀರ್ತನೆ 110:1ರಿಂದ ಎರಡು ಚಿತ್ರಗಳನ್ನು ಬಿಡಿಸುತ್ತಾನೆ:

1. ಆತನು ಯೇಸುವನ್ನು [ತಂದೆಯ] **ಬಲಗಡೆಯಲ್ಲಿ ಕೂತಿಕೊಂಡಿರು** ಎಂದು ಹೇಳಲ್ಪಟ್ಟವನೆಂದು ಚಿತ್ರಿಸುತ್ತಾನೆ. “ಬಲಗಡೆಯಲ್ಲಿ ಕೂತುಕೊಳ್ಳುವದು” ಗೌರವವನ್ನು ಸೂಚಿಸುತ್ತದೆ. ಈ ಮಾತುಗಳು ಒಂದು ಪೌರಸ್ತ್ಯ ಒಳಾಂಗಣದಲ್ಲಿ ಅರಸನು ತನ್ನ ಸೇವಕರಿಂದ ಸುತ್ತುವರೆಯಲ್ಪಟ್ಟವನಾಗಿ ಆಸೀನನಾಗಿರುವದನ್ನು ಕಲ್ಪಿಸಿಕೊಳ್ಳುವವುಗಳಾ ಗಿವೆ. ಅಂತಸ್ತು ಮನ್ನಣೆ ಮಾಡಲ್ಪಟ್ಟಿರುವ ಮೂಡಣ ದೇಶಗಳಲ್ಲಿ, ಒಂದು ಸಾಮಾನ್ಯವಾದ ಭೋಜನ ಕೂಟದಲ್ಲಿ ಆತಿಥ್ಯ ಮಾಡುವವನು ಹಾಗೂ ಆತನ ಮುಖ್ಯ ಅತಿಥಿಯು ಸುಲಭವಾಗಿ ಸಂಭಾಷಣೆಯನ್ನು ಮಾಡುವದಕ್ಕೆ ಸಾಧ್ಯವಾಗುವಂತಹ ಭಂಗಿಯಲ್ಲಿ ಅತಿ ಗೌರವಾನ್ವಿತ ಅತಿಥಿಯು “ಒರಗಿಕೊಳ್ಳುವದು” (ಅದರಲ್ಲಿ “ಕೂತುಕೊಳ್ಳುವದು” ಸಹ ಸೇರಿರಬಹುದು) ಒಂದು ಪದ್ಧತಿಯಾಗಿತ್ತು.

ದೇವರ ಬಲಗಡೆಯಲ್ಲಿ ಕೂತುಕೊಳ್ಳುವಂತೆ ದೇವದೂತರಿಗೆ ಎಂದಿಗೂ ಹೇಳಲ್ಪಡಲಿಲ್ಲ. ಯೇಸುವಿಗೆ ಮಾತ್ರವೇ ಹೇಳಲ್ಪಟ್ಟಿತು. ಯೇಸು ಮತ್ತಾಯ 22:41-46ರಲ್ಲಿ ತನ್ನನ್ನು ಸೂಚಿಸಿ ಕೀರ್ತನೆ 110:1ನ್ನು ಬಳಸಿದನು (ಅಲ್ಲದೆ ಮಾರ್ಕ 12:36; ಲೂಕ 20: 43ನ್ನು ಸಹ ನೋಡಿರಿ). ಇದು ಹೊಸ ಒಡಂಬಡಿಕೆಯಲ್ಲಿ ಬಹಳಷ್ಟು ಸಾರಿ ಉಲ್ಲೇಖಿಸಲ್ಪಟ್ಟಿರುವ ಕೀರ್ತನೆಗಳ ಒಂದು ಭಾಗವಾಗಿದೆ. ತಾನು ಕೀರ್ತನೆ 110ರ ಪ್ರೇರಣೆ ಮತ್ತು ದಾವೀದನು ಬರೆದನೆಂಬುದು ಎರಡನ್ನೂ ಅಂಗೀಕರಿಸಿಕೊಳ್ಳುತ್ತಾನೆಂಬುದನ್ನು ಯೇಸು ತೋರಿಸಿದನು (ಮತ್ತಾಯ 22:34-46ರಲ್ಲಿ).

ಅಷ್ಟುಮಾತ್ರವಲ್ಲದೆ, ಉಲ್ಲೇಖನದ ಬಳಕೆಯ ಮೂಲಕ, ಇಬ್ಬರು “ಕರ್ತರು” ಇದ್ದಾರೆಂಬುದನ್ನು ತೋರಿಸಿದನು, ಯಾಕೆಂದರೆ ಕೀರ್ತನೆಯು “ಕರ್ತನು [ಯೆಹೋವನು] ನನ್ನ ಕರ್ತನಿಗೆ . . . ನುಡಿದನು” ಎಂದು ಹೇಳುತ್ತದೆ (ಕೀರ್ತನೆ 110:1). ಈ “ಎರಡನೆಯ ಕರ್ತನು” “ದಾವೀದನ ಕುಮಾರ”ನನ್ನು (ಮೆಸ್ಸೀಯ) ಸೂಚಿಸಿ ಹೇಳಿದ್ದೆಂಬುದು ಯೆಹೂದಿ ನಾಯಕರಿಗೆ

ಗೊತ್ತಿತ್ತು. ಅನಂತರದಲ್ಲಿ ರಬ್ಬಿಗಳು ಈ ಸತ್ಯವನ್ನು ತಿರಸ್ಕರಿಸಿದ್ದು ಈ ಕೀರ್ತನೆಯು ನಜರೇತಿನ ಕ್ರಿಸ್ತನಲ್ಲಿ ನೆರವೇರಿತೆಂದು ಅಪೊಸ್ತಲರ ಮಾಡುತ್ತಿದ್ದ ಬೋಧನೆಗೆ ಕೇವಲ ಪ್ರತಿಕ್ರಿಯೆಯಾಗಿತ್ತಷ್ಟೆ. ಪೇತ್ರನು ಪಂಚಾಶತ್ತಮ ದಿನದಂದು ಯೇಸುವಿನ ದೇವತ್ವವನ್ನು ಸಾಭಿತುಪಡಿಸುವವನಾಗಿ ಇಬ್ರಿಯರಿಗೆ ಪುಸ್ತಕದ ಲೇಖಕನು ನೀಡಿರುವ ರೀತಿಯಲ್ಲಿಯೇ ವಾದವನ್ನು ಬಳಸುತ್ತಾನೆ (ಅಪೊಸ್ತಲರ ಕೃತ್ಯಗಳು 2:34, 35). ಕೀರ್ತನ 110ರಲ್ಲಿರುವ ಇಬ್ಬರು ಕರ್ತರ ಚರ್ಚೆಯು ಮೊದಲ ಶತಮಾನದಲ್ಲಿ ಯೇಸುವಿನ ದೇವತ್ವವನ್ನು ನಿರಾಕರಿಸಿದವರ ವಿಷಯದಲ್ಲಿ ಹೇಗೋ ಹಾಗೆಯೇ ಇಂದು ಆತನ ದೇವತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸುವವರಿಗೆ ಸಹ ಒಂದು ವಿಘ್ನ ಆಗಿರುತ್ತದೆ.

ಪುನಃ, ಮೌನದಿಂದ ಒಂದು ವಾದವು ಬಳಸಲ್ಪಟ್ಟಿದೆ. ದೇವರ ಬಲಗಡೆಯಲ್ಲಿ ಕೂತುಕೊಳ್ಳುವಂತೆ ದೇವದೂತರಿಗೆ ಎಲ್ಲಿಯೂ ಹೇಳಲ್ಪಟ್ಟಿಲ್ಲವಾದ್ದರಿಂದ, ಅವರಿಗೆ ಹಾಗೆ ಮಾಡುವಂತೆ ಎಂದಾದರೂ ಹೇಳಲ್ಪಟ್ಟಿತ್ತೆಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಕ್ರಿಸ್ತನು ದೇವದೂತರಿಗಿಂತ ದೊಡ್ಡವನು ಎಂದು ಹೇಳಲಾಗಿದೆ. ದೇವರ ಬಲಗಡೆಯಲ್ಲಿ ಕೂತುಕೊಳ್ಳುವದೆಂದರೆ ಕ್ರಿಸ್ತನು ಅತ್ಯುನ್ನತ ನಾಯಕತ್ವ ಹಾಗೂ ಅಧಿಕಾರಕ್ಕೆ ಏರಿಸಲ್ಪಟ್ಟನು ಎಂದರ್ಥವಾಗಿದೆ. ಈ ಚಿತ್ರಣವು ಯೇಸು ಮತ್ತು ಆತನ ಸಂದೇಶವಾದಿಗಳ ನಡುವಿನ ಒಂದು ಸಾಮಾನ್ಯವಾಗಿರುವ ಅಭಿಪ್ರಾಯವನ್ನು ಸೂಚಿಸಲು ಬಳಸಿರುವದು ಸ್ಪಷ್ಟವಾಗಿರುತ್ತದೆ. ಕೀರ್ತನೆಯು ಮೆಸ್ಸೀಯನಿಗೆ ಅನ್ವಯಿಸಲ್ಪಟ್ಟಿರುತ್ತದೆಂದು ಆತನು ಹಾಗೂ ಯೆಹೂದ್ಯರು ನಂಬಿದರು. ಆತನು ಆ ಕೀರ್ತನೆಯನ್ನು ಸ್ವತಃ ತನಗೆ ಅನ್ವಯಿಸಿಕೊಂಡಿದ್ದು ಅವರು ಆತನ ಮೇಲೆ ಆರೋಪಗಳನ್ನು ಹೊರಿಸುವದಕ್ಕೆ ಕಾರಣವಾಯಿತು, ಯಾಕೆಂದರೆ ಆತನು ಹೇಳಿಕೊಳ್ಳುವದು ಸುಳ್ಳೆಂದು ಅವರ ನಂಬಿಕೆಯಾಗಿತ್ತು.[47]

2. ಕೀರ್ತನೆ 110:1 ಎರಡನೆಯ ಚಿತ್ರಣವು ಏನೆಂದರೆ **ವಿರೋಧಿಗಳು** ಆತನಿಗೆ **ಪಾದಪೀಠ** ಎಂಬದೆ (ನೋಡಿರಿ ಇಬ್ರಿಯ 10:13). ಈ ಚಿತ್ರಣವು ವಿಜಯಿಶಾಲಿ ಅರಸನು ತನ್ನ ಪಾದವನ್ನು ಸೋಲಿಸಲ್ಪಟ್ಟ ವೈರಿಯ ಕುತ್ತಿಗೆ (ಅಥವಾ ತಲೆಯ) ಮೇಲೆ ಇಡುವದನ್ನು ಪ್ರತಿಬಿಂಬಿಸುತ್ತದೆ (ಯೆಹೋಶುವ 10:24).

**ವಚನ 14.** ಲೇಖಕನು ಹೀಗೆ ಕೇಳುತ್ತಾನೆ, **ಇವರೆಲ್ಲರು . . . ಊಳಿಗದ ಅತ್ಮಗಳಲ್ಲವೋ?** "ಇವರೆಲ್ಲರು" ಎಂಬುದು ಯಾವ ದೇವದೂತನಿಗೂ ತನ್ನ ಕೆಲಸದಿಂದ ವಿಶ್ರಾಂತಿಯಿರುವದಿಲ್ಲ ಎಂಬುದನ್ನು ತೋರಿಸುತ್ತದೆ. ಅವರು "ಕುಳಿತುಕೊಂಡು" ನೋಡುವ ಅವಕಾಶವನ್ನು ಹೊಂದಿರುವದಿಲ್ಲ! ಅವರು ನಿರ್ದಿಷ್ಟವಾಗಿ ಕ್ರಿಸ್ತನು ಭೂಮಿಯಲ್ಲಿರುವಾಗ ಆತನಿಗೆ ಸಹಾಯವನ್ನು ಮಾಡುದವರಲ್ಲಿ ತೊಡಗಿಸಿಕೊಂಡಿದ್ದರು. ಅವರು ಮರಿಯಳಿಗೆ ಅವಳು ಮೆಸ್ಸೀಯನಿಗೆ ತಾಯಿಯಾಗಲಿದ್ದಾಳೆಂಬುದನ್ನು ಸಾರಿದರು (ಲೂಕ 1:26-38). ಯೇಸುವಿನ ಜನನಕ್ಕಾಗಿ ಅವರು ದೇವರನ್ನು ಸ್ತುತಿಸಿದರು (ಲೂಕ 2:13). ಆತನ ಶೋಧನೆಯು ಮುಕ್ತಾಯಗೊಂಡಾಗ ಆತನಿಗೆ ಅವರು ಉಪಚರಿಸಿದರು, ಆತನು ಬಹುಶಃ ತನಗೆ ಸಹಾಯ ಮಾಡಿಕೊಳ್ಳದಷ್ಟು ಬಲಹೀನವಾಗಿದ್ದಿರಬಹುದು (ಮತ್ತಾಯ 4:11). ಗೆತ್ಸೆಮನೆ ತೋಟದಲ್ಲಿ ಒಬ್ಬ ದೇವದೂತನು ಅವನಿಗೆ ಬಲಗೊಳಿಸಿದನು (ಲೂಕ 22:43). ದೇವದೂತರು ಆತನ ಪುನರುತ್ಥಾನವನ್ನು ಘೋಷಿಸಿದರು (ಯೋಹಾನ 20:12) ಮತ್ತು ಆತನು ಪುನಃ ಬರುವನೆಂಬ ಭರವಸವನ್ನು ಕೊಟ್ಟರು (ಅಪೊಸ್ತಲರ ಕೃತ್ಯಗಳು 1:10, 11). ಅವರು ಆತನ ಸೇವಕರಿಗೆ ಸಹಾಯ ಮಾಡುತ್ತಿದ್ದರು, ಮತ್ತು ಪೇತ್ರನು ಸೆರೆಮನೆಯಿಂದ ತಪ್ಪಿಸಿಕೊಳ್ಳುವದಕ್ಕೆ ಸಹಾಯವನ್ನು ಸಹ ಮಾಡಿದರು (ಅಪೊಸ್ತಲರ ಕೃತ್ಯಗಳು 5:19). ಒಬ್ಬ ದೂತನು ಫಿಲಿಪ್ಪನಿಗೆ ಯಾವಾಗ ಮತ್ತು ಎಲ್ಲಿ ಹೋಗಬೇಕೆಂದು ಹೇಳುವ

ಮೂಲಕ ಆತನಿಗೆ ಸಹಾಯಕವಾಗಿದ್ದನು (ಅಪೊಸ್ತಲರ ಕೃತ್ಯಗಳು 8:26).

"ಊಳಿಗದ" (λειτουργικός, *leitourgikos*) ಎಂಬದಕ್ಕಿರುವ ಪದದ ಅರ್ಥವು "ದಾಸರಂತೆ ಸೇವೆ ಮಾಡುವದು" ಎಂದಲ್ಲ, ಆದರೆ "ಒಂದು ವಿಶೇಷ ಹುದ್ದೆ ಅಥವಾ ಕೆಲಸದಲ್ಲಿ ದೇವರ ಸೇವೆ ಮಾಡುವದು" ಎಂದಾಗಿರುತ್ತದೆ. ಈ ವಿಧವಾದ ಕೆಲಸವನ್ನೇ ಯಾಜಕನು ಯಜ್ಞವೇದಿಯ ಬಳಿಯಲ್ಲಿ ನಿಂತಿರುವಾಗ ಮಾಡುವವನಾಗಿದ್ದನು. ಇಬ್ರಿಯರಿಗೆ ಪುಸ್ತಕದ ಲೇಖಕನು ದೇವದೂತರ ಪ್ರಯಾಸಗಳನ್ನು ಸೂಚಿಸಲು ಒಂದು ಎರಡನೆಯ ಪದವನ್ನು ಸಹ ಬಳಸುತ್ತಾನೆ: διακονία (*diakonia*), ಅದಕ್ಕೆ "ಸೇವೆ" ಎಂಬ ಅನುವಾದ ಮಾಡಲಾಗಿರುತ್ತದೆ.

Thomas Hewitt ಅಭಿಪ್ರಾಯ ಪಟ್ಟದ್ದೇನೆಂದರೆ, "ಊಳಿಗದ" ಎಂಬುದು "ದೇವರಿಗೆ ಸೇವೆ ಮಾಡುವದು" ಎಂಬುದನ್ನು ವ್ಯಕ್ತಪಡಿಸಬಹುದು ಮತ್ತು "ಸೇವೆ" ಎಂಬುದು "ಮನುಷ್ಯರಿಗೆ ಮಾಡಿದ ಸೇವೆಯನ್ನು ಸೂಚಿಸಬಹುದು." ಹೇಗೂ, ಆತನು ಒಪ್ಪಿಕೊಂಡದ್ದೇನೆಂದರೆ, ಇಲ್ಲಿ "*diakonia*ವು *ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರಿಗೋಸ್ಕರ* ದೇವರ ಸೇವೆ ಮಾಡುವದು ಎಂಬರ್ಥವನ್ನು ಸೂಚಿಸುತ್ತದೆಂಬುದು ಸಂದೇಶಕರವಾದದ್ದು . . ."[48] LXX ನಲ್ಲಿ "ಸೇವಕ" (*leitourgika*) ಎಂಬುದಕ್ಕಿರುವ ಪದವು ದೇವದರ್ಶನ ಗುಡಾರ ಅಥವಾ ದೇವಾಲಯದಲ್ಲಿ ಸೇವೆ ಮಾಡುವವರಿಗೆ ಬಳಸಲ್ಪಟ್ಟಿರುತ್ತದೆ; ಹೀಗೆ ಅದು "ದೈವಿಕ ಸೇವೆ" ಆಗಿತ್ತು. ಇದಕ್ಕೆ ಮೂಲಪದ *latreia* ಎಂಬುದು "ಆರಾಧನೆ"ಯನ್ನು ಸೂಚಿಸಬೇಕಾದ ಅಗತ್ಯವಿರುವದಿಲ್ಲ. "ದೈವಿಕ ಸೇವೆ"ಯು ದೇವರು ಆಜ್ಞಾಪಿಸುವ ಯಾವದೇ ಕ್ರಿಯೆಯನ್ನು ಒಳಗೊಂಡಿರಬಹುದು, ಅದು "ಆರಾಧನೆ" ಆಗಿರಬಹುದು ಅಥವಾ ಆಗಿರದೆಯೂ ಇರಬಹುದು.

ಎರಡನೆಯ ಶತಮಾನದ ಯೆಹೂದಿ ಬರಹಗಳಲ್ಲಿ ದೇವದೂತರು "ಆತ್ಮಗಳು" ಎಂದು ಕರೆಯಲ್ಪಟ್ಟಿದ್ದಾರೆ.[49] ದೇವರಿಗಾಗಿ ಸಂದೇಶಗಳನ್ನು ಕೊಂಡೊಯ್ಯುವವರಾಗಿ, ದೇವದೂತರು ದಾನಿಯೇಲನಿಗೆ ಸತ್ಯಗಳನ್ನು ತಿಳಿಸಿದರು (ದಾನಿಯೇಲ 9:21-23) ಮತ್ತು ಪತ್ಮೋಸ ದ್ವೀಪದಲ್ಲಿ ಯೋಹಾನನಿಗೆ ತಿಳಿಸಿದರು (ಪ್ರಕಟನೆ 1:1; 5:2; 7:2; 10:9, 10; 11:1; 14:8, 9, 15, 18; 16:5-8; 17:7; 18:1-3; 19:17, 18; 22:6, 9-11). ಅವರು ಯೋಹಾನನಿಗೆ ಹಲವಾರು ಸಾಂಕೇತಿಕ ದರ್ಶನಗಳನ್ನು ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿದರು. ಹಳೆಯ ಒಡಂಬಡಿಕೆಯಲ್ಲಿ ಅವರಿಗೆ ಸೊದೋಮ್ ಪಟ್ಟಣದಲ್ಲಿ ಅವಶ್ಯವಿದ್ದ ಹತ್ತು ಮಂದಿ ನೀತಿವಂತರು ಸಿಕ್ಕದ್ದರೆ ಅದನ್ನು ಕಾಪಾಡಿರುತ್ತಿದ್ದರು (ಆದಿಕಾಂಡ 18:32-19:15).

ದೇವದೂತರು ಮಗನಿಗೆ ಸಮಾನರಲ್ಲ ಮತ್ತು ಮಹೋನ್ನತನಾದವನ ಬಲಗಡೆಯಲ್ಲಿ ಕೂತುಕೊಳ್ಳಲು ಸಾಧ್ಯವಿಲ್ಲದವರಾದಾಗ್ಯೂ, ಅವರು ಒಂದು ನಿಯೋಗದ ಮೇಲೆ, **ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ** – ದೇವಜನರು – **ಸೇವೆಗೋಸ್ಕರ ಸೇವೆಗೋಸ್ಕರ ಕಳುಹಿಸಲ್ಪಡುವ**ವರು ಆಗಿದ್ದಾರೆ. "ಕಳುಹಿಸಲ್ಪಡುವವರು" ἀποστέλλω (*apostellō*) ಎಂಬುದು "ಅಪೊಸ್ತಲ" (ἀπόστολος, *apostolos*) ಎಂಬುದರ ಕ್ರಿಯಾಪದ ರೂಪವಾಗಿದೆ. ಅಪೊಸ್ತಲರು ರಕ್ಷಣೆಯ ವಾರ್ತೆಯನ್ನು ಒದಗಿಸುವ ಒಂದು ಧ್ಯೇಯದ ಮೇಲೆ ಕಳುಹಿಸಲ್ಪಟ್ಟ ರೀತಿಯಲ್ಲಿಯೇ, ಇವರ ಧ್ಯೇಯವು ರಕ್ಷಣೆ ಹೊಂದಿದವರ ಸೇವೆ ಮಾಡುವದು ಆಗಿರುತ್ತದೆ. ಅವರು ಕೇವಲ ದೇವರ ಸೇವಕರು ಮಾತ್ರವೇ ಆಗಿದ್ದಾರೆಯೇ, ಹೊರತು ದೇವರ ಪುತ್ರರಲ್ಲ.

ದೇವದೂತರು ದೇವಜನರಿಗೋಸ್ಕರ ಏನು ಮಾಡುವರು? ಅವರು ನಮಗೋಸ್ಕರ ಮಾಡಬಹುದಾದ ಮಹಾನ್ ಕಾರ್ಯಗಳನ್ನ ನೆನೆದು ನಾವು ಭಯಭಕ್ತಿಯಿಂದ ಚಕಿತಗೊಳ್ಳುತ್ತೇವೆ, ಆದಾಗ್ಯೂ ನಮಗೆ ಸಹಾಯ ಬರುವಾಗ ಅದರ ಮೂಲವು ಯಾವದೆಂಬದು ನಮಗೆ ತಿಳಿಯದೆ ಇರುತ್ತದೆ. ನಾವು ಸಭೆಯೊಳಗೆ ಬರುವಾಗ, ನಾವು ಅಸಂಖ್ಯಾತ

ನೀತಿವಂತರ ಆತ್ಮಗಳ ಮತ್ತು ಕೋಟ್ಯಾನುಕೋಟಿ ದೇವದೂತರ ಭಾಗವು ಸಹ ಆಗುತ್ತೇವೆ (ಇಬ್ರಿಯ 12:22, 23). ಅವರು ಎಷ್ಟೊಂದು ಅಸಂಖ್ಯಾತರು ಮತ್ತು ಸೇವೆಗೆ ಸಿದ್ಧರಾದವರು ಆಗಿರುತ್ತಾರೆಂದರೆ ಯೇಸುವು ತಾನು ಬಂಧಿಸಲ್ಪಡುವಷ್ಟರೊಳಗೆ "ಹನ್ನೆರಡು ಗಣಗಳ"ನ್ನು ಕರೆದಿರಬಹುದಿತ್ತು (ಮತ್ತಾಯ 26:53). ಒಂದು "ಗಣ"ವು ಪೂರ್ಣ ಪ್ರಮಾಣದಲ್ಲಿರುವ 6,000 ಸೈನಿಕರನ್ನೊಳಗೊಂಡ ಒಂದು ರೋಮನ್ ಗಣಕ್ಕೆ ಸಮಾನವಾಗಿರುವದಾದರೆ, ಈ ಒಟ್ಟು ಸಂಖ್ಯೆಯು 72,000 ದೇವದೂತರಾಗಿರ ಬಹುದಾಗಿತ್ತು; ಆದರೆ ನಮಗೆ ಇನ್ನು ಎಷ್ಟೋ ಮಂದಿ ದೇವದೂತರು ಸೇವೆಗೆ ಲಭ್ಯವಿರುತ್ತಾರೆ!

ಆದುದರಿಂದ, ಅವರು ಇಂದು ಕ್ರೈಸ್ತರಿಗೆ ಸಹಾಯ ಮಾಡುತ್ತಾರೆಂಬುದನ್ನು ತಿಳಿಯುವದು ಆಶ್ಚರ್ಯ ಹುಟ್ಟಿಸುವದಿಲ್ಲ. ಅವರು ನಮ್ಮ ರಕ್ಷಣೆಯಲ್ಲಿ ಆಳವಾದ ಆಸಕ್ತಿ ಹೊಂದಿದ್ದಾರೆ ಮತ್ತು ಅದು ಸಂಭವಿಸುವಾಗ ಸಂತೋಷಗೊಳ್ಳುವರು ಎಂಬುದನ್ನು ನಾವು ಬಲ್ಲೆವು (ಲೂಕ 15:7, 10). ನಾವು ಯಾವಾಗ ರಕ್ಷಿಸಲ್ಪಡುತ್ತೇವೆ ಮತ್ತು ಯಾವಾಗ ನಾವು ನಾಶನದ ಸ್ಥಿತಿಯಲ್ಲಿರುತ್ತೇವೆ ಎಂಬುದನ್ನು ತಿಳಿದಿರತಕ್ಕದ್ದಾಗಿದೆ. ಗಬ್ರಿಯೇಲನ ಸಂಗಡ, ಅವರು ನಿಶ್ಚಯವಾಗಿಯೂ ದೇವರ ಸನ್ನಿಧಿಯಲ್ಲಿ ನಿಂತಿರುವವರಾಗಿದ್ದಾರೆ (ಲೂಕ 1:19). ಯೇಸು ತನ್ನ ಸಭೆಯಲ್ಲಿರುವಂತಹ "ಚಿಕ್ಕವರಿಗಾಗಿ" ಕಳಕಳಿಯನ್ನು ಹೊಂದಿರುತ್ತಾರೆಂಬದನ್ನು ತಿಳಿಯಪಡಿಸಿದನು (ಮತ್ತಾಯ 18:10). ಅಲ್ಲದೆ ರಕ್ಷಣೆಯು ಕೊಡಲ್ಪಡುವ ಮುಂಚೆ ಅವರಿಗೆ ನಮ್ಮ ರಕ್ಷಣೆಯಲ್ಲಿ ಆಸಕ್ತಿಯನ್ನು ಹೊಂದಿರುವರೆಂದು ತೋರುತ್ತದೆ (1 ಪೇತ್ರ 1:10-12).

ಇಬ್ರಿಯ 12:22ನೇ ವಚನವು ಕ್ರೈಸ್ತರು "ಕೋಟ್ಯಾನುಕೋಟಿ ದೇವದೂತರ" ಅನ್ಯೋನ್ಯತೆಗೆ ಬಂದಿದ್ದಾರೆಂದು ಹೇಳುತ್ತದಾದರೂ, ಅವರು ನಮಗೋಸ್ಕರ ಏನು ಮಾಡುವರೆಂಬುದು ನಿಖರವಾಗಿ ಹೇಳಲ್ಪಟ್ಟಿಲ್ಲ. 1:14ರಲ್ಲಿ ಪ್ರಸ್ತಾಪಿಸಲಾಗಿರುವ ರಕ್ಷಣೆಯು ಭವಿಷ್ಯದಲ್ಲಿ ಇರುವದಾಗಿದ್ದರೆ, ಅದನ್ನು ಎದುರುನೋಡುವ ಆಶೀರ್ವಾದ ಈಗ ನಮಗೆ ಇರುತ್ತದೆ. ರಕ್ಷಣೆಯು "ಮೊದಲು ನಾವು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ . . . ಹತ್ತಿರವಾಯಿತು" ಎಂದು ನಮಗೆ ಹೇಳಲಾಗಿರುತ್ತದೆ (ರೋಮಾ 13:11). "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ" ರಕ್ಷಣೆಯೊಂದು ಇರುತ್ತದೆ (1 ಪೇತ್ರ 1:5).

ದೇವದೂತರು ಕ್ರೈಸ್ತರಿಗೆ ಯಾವದು ಸರಿಯೋ ಅದನ್ನು ಮಾಡುವದಕ್ಕೆ ಶಕ್ತಿಯನ್ನು ಕೊಡುತ್ತಾರೆಂದು ಹೇಳಿಕೊಳ್ಳುವದು ಮನುಷ್ಯನದ್ದಾಗಿದೆ ಹೊರತು ಶಾಸ್ತ್ರಗಳು ಹಾಗೆ ಹೇಳುವದಿಲ್ಲ. ದೇವದೂತರು ನಿಜಕ್ಕೂ ಅಂತಹ ಶಕ್ತಿಯನ್ನು ಕೊಡುವದಾಗಿದ್ದರೆ, ಅದನ್ನು ಬಳಸಿಕೊಳ್ಳುವದಕ್ಕೆ ಅವರು ಸ್ವಲ್ಪವೇ ಸ್ವಲ್ಪ ಜನರಿಗೆ ಮಾತ್ರವೇ ಅನುಮತಿಸುವರು! ಅಪೊಸ್ತಲರಿಗೆ ಅಸ್ವಾಭಾವಿಕವಾದ ಪ್ರಕಟನೆ ಮತ್ತು ಪ್ರೇರಣೆಗಳು ಒದಗಿಸಲ್ಪಟ್ಟವು (ಯೋಹಾನ 16:12, 13; 14:26; ನೋಡಿರಿ ಮತ್ತಾಯ 10:19, 20), ಆದರೆ ಅವರಿಗೆ ಸಹ ಜೀವನದಲ್ಲಿ ಎಲ್ಲಾ ಪಾಪಗಳನ್ನು ಜಯಿಸುವ ಶಕ್ತಿಯು ಕೊಡಲ್ಪಟ್ಟಿರಲಿಲ್ಲ. ನಮ್ಮಂತೆಯೇ, ಅವರು ಸಹ ಅದನ್ನು ಸಾಧಿಸಿಕೊಳ್ಳುವದಕ್ಕಾಗಿ ಆತ್ಮೀಕವಾಗಿ ಬೆಳೆಯುವದು ಅಗತ್ಯವಾಗಿತ್ತು (1 ಪೇತ್ರ 2:1, 2; 2 ಪೇತ್ರ 1:5-11; 3:18). ದೇವರು, ತನ್ನ ದೈವಾನುಗ್ರಹದಲ್ಲಿ, ನಾವು ಪಾಪದ ಮೇಲೆ ಜಯವನ್ನು ಸಂಪಾದಿಸಿಕೊಳ್ಳುವಂತೆ ನಮ್ಮ ನಂಬಿಕೆಯನ್ನು ಅನ್ವಯಪಡಿಸಿಕೊಳ್ಳುವ ಹಾಗೆ ಸಹಾಯ ಮಾಡುವಂತಹ ಪರಿಸ್ಥಿತಿಗಳನ್ನು ಸೃಷ್ಟಿಸುವನು. ಹೇಗೂ, ದೇವದೂತರ ಕುರಿತು ಸಿನಿಮಾಗಳಲ್ಲಿ ಚಿತ್ರಿಸಲ್ಪಡುವಂತೆ, ಇಂದು ಆತನು ಒಬ್ಬನನ್ನು ಹೆದ್ದಾರಿಯ ಮೇಲಿಂದ ಎತ್ತಿಕೊಂಡು ಹೋಗಿ ಸುರಕ್ಷಿತ ಸ್ಥಳದಲ್ಲಿ ಇಳಿಸುವದಿಲ್ಲ.

ದೇವದೂತರ ಅತ್ಯಂತ ದೊಡ್ಡ ಸೇವೆಯು ರಕ್ಷಣೆಯನ್ನು

ಹೊಂದಿಕೊಳ್ಳುವವರಿಗೋಸ್ಕರಿಗಾಗಿ ಮಾಡಲ್ಪಡುತ್ತದೆ. ಅವರು ಕ್ರೈಸ್ತೇತರರನ್ನು ಕಾಪಾಡುವರು ಅಥವಾ ಸೇವೆ ಮಾಡುವರೆಂಬ ಬಗ್ಗೆ ಶಾಸ್ತ್ರದಲ್ಲಿ ಯಾವದೇ ವಾಗ್ದಾನವು ಸಿಕ್ಕುವದಿಲ್ಲ.

## ಅನ್ವಯಿಸುವಿಕೆ

### ದೇವರು ತನ್ನ ಮಗನ ಮುಖಾಂತರ ಮಾತಾಡುತ್ತಾನೆ (1:1-3)

ದೇವರು ಮನುಷ್ಯನಿಗೆ ನೀಡಿರುವ ಪ್ರಕಟಣೆಯು ಆತನ ಮಗನು, ನಮ್ಮ ಕರ್ತನು ಆಗಿರುವ ಯೇಸುವಿನ ಮೂಲಕವೇ ಆಗಿದೆ. ದೇವರ ಮತ್ತು ಕ್ರಿಸ್ತನ ಪೂರ್ಣ ಸ್ವಭಾವದ ಬಗ್ಗೆ ಲಿಖಿತ ವಾಕ್ಯದಲ್ಲಿ ಮಾತ್ರವೇ ಕೊಡಲಾಗಿರುತ್ತದೆ. ಈ ಸತ್ಯದ ಅರ್ಥವೇನು?

*ದೇವರು ತನ್ನ ವಾಕ್ಯವನ್ನು ಸ್ಪಷ್ಟ ಮತ್ತು ಅರ್ಥಮಾಡಿಕೊಳ್ಳತಕ್ಕದ್ದಾಗಿ ಮಾಡಬೇಕಾಗಿತ್ತು, ಇಲ್ಲವಾದರೆ ಅದು ನಿಷ್ಪ್ರಯೋಜಕ ಮತ್ತು ಅನ್ಯಾಯಕರ ಆಗಿರುತ್ತಿತ್ತು.* ದೇವರಿಂದ ಒಂದು ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಾಗುವಂತಹ ಸಂದೇಶವಿಲ್ಲದೆ ಮನುಷ್ಯನಿಗೆ ರಕ್ಷಣೆ ಮಾರ್ಗವು ಇರುತ್ತಿರಲಿಲ್ಲ. ಆತನು ನಮ್ಮ ರಕ್ಷಣೆಗೆ ಅವಶ್ಯಕವಾದ ಬೋಧನೆಗಳನ್ನು ಸರಳವಾಗಿ ಮಾಡಿದ್ದಾನೆ.

*ನಾವು ಆತನ ವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳಬೇಕು.* ಅದನ್ನು ಅರ್ಥಮಾಡಿಕೊಳ್ಳಬೇಕೆಂದು ನಮಗೆ ಆಜ್ಞಾಪಿಸಲಾಗಿರುತ್ತದೆ (ಎಫೆಸ 5:17). ನಾವು ತಂದೆಯ ಚಿತ್ತವನ್ನು ಮಾಡಲು ಬಯಸುವದಾದರೆ, ಆತನ ಬೋಧನೆಗಳನ್ನು ನಾವು ತಿಳಿಯಬಲ್ಲೆವು (ಯೋಹಾನ 7:17).

ನಾವು ಬೇರೆಯವರಿಗೆ ಕಲಿಸುವದಕ್ಕೆ ಸಾಧ್ಯವಾಗುವಂತೆ ಆತನ ವಾಕ್ಯದ ತಿಳುವಳಿಕೆಯಲ್ಲಿ ನಾವು ಬೆಳೆಯುವ ಅಗತ್ಯವಿರುತ್ತದೆ. ನಾವು ದೇವರ ವಾಕ್ಯದ ಜ್ಞಾನದ ಮೂಲಕವಾಗಿ ಅಭಿವೃದ್ಧಿಗೊಳ್ಳುವಂತೆ ನಮಗೆ ಬೇಡಿಕೊಳ್ಳಲಾಗಿರುತ್ತದೆ (1 ಪೇತ್ರ 2:2; 2 ಪೇತ್ರ 3:18). ವಾಕ್ಯವನ್ನು ಸಮರ್ಪಕವಾಗಿ ಬಳಸುವದು ನಮಗೆ ಬೋಧಕರಾಗಿ ಬೆಳೆಯುವಂತೆ ಸಹಾಯ ಮಾಡುತ್ತದೆ (ಇಬ್ರಿಯ 5:12-14). "ಗಟ್ಟಿಯಾದ ಆಹಾರ"ವನ್ನು ಅಧ್ಯಯನ ಮಾಡುವದು ಪರಿಪಕ್ವಗೊಳ್ಳುವಂತೆ ನಮ್ಮನ್ನು ಶಕ್ತರನ್ನಾಗಿರುತ್ತದೆ, ಮತ್ತು ದೇವರ ಸತ್ಯದ ಕುರಿತ ಪ್ರವರ್ಧಮಾನವುಳ್ಳ ಬೋಧನೆಗಳನ್ನು ಪ್ರೀತಿಸುವದು ನಿಶ್ಚಯವಾಗಿಯೂ ಒಂದು ಪರಿಪಕ್ವದ ಸಂಕೇತವಾಗಿರುತ್ತದೆ.

### ಒಬ್ಬ ವೈಯಕ್ತಿಕ ದೇವರಲ್ಲಿ ನಂಬಿಕೆ (1:1, 2)

ದೇವರು ಬೈಬಲಿನಲ್ಲಿ ಕ್ರಿಸ್ತನ ಮೂಲಕವಾಗಿ ನಮ್ಮ ಸಂಗಡ ಮಾತಾಡಿದ್ದಾನೆಂದು ನಂಬುವದು ಜೀವನದ ಅನುಭವಗಳಿಂದ ಸ್ಪಷ್ಟವಾಗಿರುತ್ತದೆ.

*ಅನೇಕ ಜನರಿಗೆ ಬೈಬಲ್ ಗೊತ್ತಿಲ್ಲದ ಕಾರಣ ಅವರು ತಮ್ಮ ನೈತಿಕ ತೀರ್ಮಾನಗಳಲ್ಲಿ ಗೊಂದಲ ಹೊಂದಿರುತ್ತಾರೆ.* ಒಬ್ಬ ವೈಯಕ್ತಿಕ ದೇವರಲ್ಲಿ ನಂಬಿಕೆಯಿಡುವದು ಸಾರಭೂತವಾಗಿರುತ್ತದೆ; ಆ ನಂಬಿಕೆಯಿಲ್ಲದೆ, ನಾವು ಸಮಾಜದ ಬಹಳಷ್ಟು ಚೌಕಟ್ಟನ್ನು ಹಾಳು ಮಾಡುವವರಾಗುತ್ತೇವೆ. William F. Buckleyನು *National Review* ಲೇಖನವೊಂದರಲ್ಲಿ, ಹೇಳಿದ್ದೇನೆಂದರೆ ಒಬ್ಬ ಅವೈಯಕ್ತಿಕ ದೇವರ ಯೋಚನೆಯು ಧರ್ಮವನ್ನು ಮೂರು Rಗಳಿಂದ ವಂಚಿತಗೊಳ್ಳುವಂತೆ ಮಾಡುತ್ತದೆ: "revelation [ಪ್ರಕಟನೆ]," "regeneration [ಪುನರ್ಜನ್ಮ]," ಮತ್ತು "responsibility (ಜವಾಬ್ದಾರಿಕೆ)."[50]

*ನಮಗೆ ನಾವು ಲೆಕ್ಕ ಕೊಡಬೇಕಾದ ಒಬ್ಬ ವೈಯಕ್ತಿಕ ದೇವರು ಇಲ್ಲವಾದಲ್ಲಿ, ಪ್ರತಿಯೊಬ್ಬನು ತನಗೆ ತಾನೇ ದೇವರಾಗುತ್ತಾನೆ ಮತ್ತು ಎಲ್ಲಾ ವಿಷಯಗಳಲ್ಲಿ ಅಂತಿಮ ಅಧಿಕಾರವಾಗುತ್ತಾನೆ.* ಈ ಮನೋವೃತ್ತಿಯು ಬೆಳೆದು ಪ್ರಾಬಲ್ಯವನ್ನು ಸಾಧಿಸಿದಂತೆ, ಅಪರಾಧವು ಖಂಡಿತವಾಗಿಯೂ ಅತಿರೇಕಕ್ಕೆ ಹೋಗುತ್ತದೆ. ಜನಸಮೂಹಗಳಿಗೆ ಅವ್ಯವಸ್ಥೆ ಮತ್ತು ಅರಾಜಕತೆಗಳೆ ಸಹಜವಾದ ಜೀವನ ದಾರಿಯಾಗುವದು. ಒಂದು ದೇಶವು ಅಂತಿಮವಾದ ದೇವರ ತಿರಸ್ಕಾರಕ್ಕೆ ಮುಟ್ಟಿದಾಗ, ಒಂದು ಮನೆಯೂ ಒಂದು ಭದ್ರವಾದ ಕೋಟೆಯಂತಾಗುತ್ತದೆ ಮತ್ತು ಪ್ರತಿಯೊಬ್ಬನೂ ತನ್ನನ್ನು ರಕ್ಷಿಸಿಕೊಳ್ಳಲು ಕೈಯಲ್ಲಿ ಆಯುಧವನ್ನು ಹಿಡಿದುಕೊಂಡು ಓಡಾಡುತ್ತಾನೆ.

1989ರಲ್ಲಿ ದಕ್ಷಿಣ ಅಮೆರಿಕದ Guyanaಕ್ಕೆ ಸುವಾರ್ತೆ ಸಾರುವ ಕೆಲಸದ ನಿಮಿತ್ತ ಪ್ರಯಾಣ ಮಾಡಿರುವ ವೇಳೆ, ತಮ್ಮನ್ನು ರಕ್ಷಿಸಿಕೊಳ್ಳಲು ಅಶಕ್ತರಾದ ಬಡವರು ಹಾಗೂ ವೃದ್ಧರ ಮನೆಗಳಿಂದ ಕೋಳಿಗಳನ್ನು ಕದಿಯಲಾಗುತ್ತಿತ್ತೆಂಬ ದೂರುಗಳನ್ನು ಕೇಳಿಸಿಕೊಂಡೆನು. ಪ್ರತಿಯೊಂದು ಮನೆಗೂ ಉತ್ತಲು ಬೇಲಿಯಿರುತ್ತಿತ್ತು, ಮತ್ತು ಶ್ರೀಮಂತರು ತಮ್ಮ ಮನೆಗಳ ಸುತ್ತಲು ಲೋಹದ ಸರಳುಗಳುಳ್ಳ ಬೇಲಿಗಳನ್ನು ಎತ್ತರವಾಗಿ ಹಾಕಿಸಿಕೊಂಡಿದ್ದರು. 2003ರ ಹೊತ್ತಿಗೆ, ಪರಿಸ್ಥಿಗತಿಗಳು ಬಹಳವಾಗಿ ಹದಗೆಟ್ಟಿದ್ದ ಕಾರಣ ಮಿಶನರಿಗಳಿಗೆ ಅಲ್ಲಿಗೆ ತಿರುಗಿ ಹೋಗುವದಕ್ಕೆ ಭಯವಾಗುತ್ತಿತ್ತು. ಅಲ್ಲಿರುವ ಅನೇಕರ ಜೀವಿತಗಳಿಂದ ದೇವರು ಹೊರಗಿಡಲ್ಪಟ್ಟಿದ್ದನು.

## ಯಾವದು ವ್ಯತ್ಯಾಸವನ್ನು ಉಂಟು ಮಾಡುತ್ತದೆ?

ಹಳೆಯ ಒಡಂಬಡಿಕೆಯಲ್ಲಿ ಪ್ರವಾದಿಗಳು ಅಷ್ಟೊಂದು ಜೀವಧಾರಕವಾಗಿದ್ದರೂ, ಅವರು ಹೊಸ ಒಡಂಬಡಿಕೆಯನ್ನು ಕೊಡುವದಕ್ಕೆ ಮಗನಿಗೆ ಹೋಲಿಕೆಯಾಗಲಿಲ್ಲ. ಇಬ್ರಿಯರಿಗೆ ಪುಸ್ತಕವು ಹಳೆಯ ಮತ್ತು ಹೊಸ ಒಡಂಬಡಿಕೆಗಳ ನಡುವೆ ವಿರುದ್ಧ ಹೋಲಿಕೆಯನ್ನು ಮಾಡುತ್ತದೆ, ಕಡೇ ಸಂದೇಶಕನಿಗಿಂತ ಯಾವನೂ ಭಿನ್ನನಾದವನು ಇರುವದಿಲ್ಲ. ಹಳೆಯ ಒಡಂಬಡಿಕೆಯ ಸಂದೇಶಕರು ಮಹಿಮಕರವಾದ ಸತ್ಯಗಳನ್ನು ತಂದರು, ಆದರೆ ಈಗ ನಮಗೆ ಅತ್ಯಂಥ ಉತ್ತಮವಾದದ್ದೊಂದು ಇರುತ್ತದೆ.

*ಹಳೆಯದು ಅಪೂರ್ಣವಾದದ್ದಾಗಿತ್ತು – ಅದು "ಭಾಗಭಾಗವಾಗಿಯೂ ವಿಧವಿಧ ವಾಗಿಯೂ" ಇತ್ತು; ಹೊಸದು ಸಂಪೂರ್ಣ ಮತ್ತು ಅಂತಿಮವಾದದ್ದು.* ಅದು "ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ" ಆಗಿದೆ (ಯೂದನು 3). ಇದರರ್ಥವು ದೇವರು ಈ ಸತ್ಯವನ್ನು ತನ್ನ ದೇವಜನರಿಗೆ ಸದಾಕಾಲಕ್ಕೂ ಒಂದೇ ಸಾರಿ ಕೊಟ್ಟನು ಎಂಬದೆ.

*ಮಗನು ತಂದೆಯು ಮಾತಾಡಿದಂಥ ಕೇವಲ ಒಂದು ಮಾಧ್ಯಮ ಮಾತ್ರವೇ ಆಗಿರಲಿಲ್ಲ.* ಆತನು ಸಮಸ್ತವೂ ಸೃಷ್ಟಿಸಲ್ಪಟ್ಟ ದಾರಿಯಾಗಿದ್ದಾನೆ, ಮಾತ್ರವಲ್ಲದೆ ಸಮಸ್ತಕ್ಕೆ ಬಾಧ್ಯಸ್ಥನೂ ಆಗಿದ್ದಾನೆ (ವ. 2; ಯೋಹಾನ 1:1-3). ವಿಸ್ಮಯಗಳಲ್ಲಿಯೇ ವಿಸ್ಮಯ! ನಾವು ಸಹ ಆತನೊಂದಿಗೆ "ಜೊತೆಯ ಬಾಧ್ಯಸ್ಥರು" (ಸಮಾನ ಬಾಧ್ಯಸ್ಥರು) ಆದೆವು (ರೋಮಾ 8:17). ಮಗನ ಕುರಿತಾದ ಈ ಮಹಿಮಾಕರವಾದ ಹೇಳಿಕೆಗಳನ್ನು ಅಚಿಂತಿತವಾಗಿ ದಾಟಿಕೊಂಡು ಹೋಗಲು ಸಾಧ್ಯ?

*ಪರಲೋಕದಲ್ಲಿ ಎಲ್ಲವೂ ಸ್ಪಷ್ಟಗೊಳಿಸಲ್ಪಡುವದು.* "ಆತನ ತತ್ವದ ಮೂರ್ತಿಯು" (ವ. 3) ಎಂಬ ಮಾತು ಸ್ಪಷ್ಟಗೊಳ್ಳುವದು, ನಾವು ನಿಶ್ಚಯವಾಗಿಯೂ ಅದರಲ್ಲಿ ಹೆಚ್ಚು ಸಂತೋಷಗೊಳ್ಳುವೆವು. ಸಿದ್ಧಗೊಳಿಸಲ್ಪಟ್ಟಿರುವ ಆ ಸ್ಥಳಕ್ಕೋಸ್ಕರ ಸಿದ್ಧಗೊಳ್ಳಬೇಕೆಂದರೆ, ನಾವು ಈಗ ಸಹ ಭವ್ಯತೆಯ ಮೇಲೆ ಧ್ಯಾನವನ್ನು ಮಾಡಬೇಕು. ನಮ್ಮ ಕ್ರಿಸ್ತನ ಕುರಿತ ಈ

ವಚನಗಳನ್ನು ಓದುವದೆಂದರೆ, "ಕ್ರಿಸ್ತನೇ, ನಾವೆಲ್ಲಾ ನಿನ್ನನ್ನು ಘನಪಡಿಸುತ್ತೇವೆ" ಮತ್ತು "ಲೋಕಕ್ಕಾಗಿ ಕ್ರಿಸ್ತನೇ ಎಂದು ನಾವು ಹಾಡುವೆವು" ಎಂಬದಾಗಿ ಹಾಡುವದಕ್ಕೆ ಬಯಸಿದಂತಾಗಿರುತ್ತದೆ.

## ಮಗನ ಸಂದೇಶವನ್ನು ಸ್ವೀಕರಿಸಿಕೊಳ್ಳುವದು

ಸುವಾರ್ತೆಯ ಸಂದೇಶದಲ್ಲಿ, ನಮಗೆ ಸರ್ವಕಾಲಕ್ಕೂ ಅತ್ಯಂಥ ಶ್ರೇಷ್ಠವಾದ ಸತ್ಯವು ಇರುತ್ತದೆ. ನಾವು ಏಕೆ ಇಲ್ಲಿದ್ದೇವೆ, ನಾವು ಎಲ್ಲಿಂದ ಬಂದಿದ್ದೇವೆ, ಮತ್ತು ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳುವದಕ್ಕೆ ಬೇರೆ ಯಾವದನ್ನು ಹೋಲಿಕೆ ಮಾಡುವದಕ್ಕಾಗುವದಿಲ್ಲ. ಬೈಬಲ್ ಮಾತ್ರವೇ ಉತ್ತರಗಳನ್ನು ಒದಗಿಸುತ್ತದೆ.

*ಕ್ರಿಸ್ತನ ಸಂದೇಶವನ್ನು ಸಾರುವದೆಂದರೆ ಕ್ರಿಸ್ತನನ್ನು ಸಾರಿದಂತಾಗಿದೆ.* ನಾವು ಕ್ರಿಸ್ತನ ಸಿದ್ಧಾಂತವನ್ನು ಹಿಡಿದುಕೊಳ್ಳದೆ ಕ್ರಿಸ್ತನನ್ನು ಹಿಡಿದುಕೊಂಡಿದ್ದೇವೆಂದು ಹೇಳಿಕೊಳ್ಳುವದಕ್ಕಾಗುವದಿಲ್ಲ. ಹಾಗೆಂದು ನಂಬುವದಾದರೆ ಅದು ಮೂರ್ಖತನವಾಗುತ್ತದೆ ಮತ್ತು ಅಸಾಮಂಜಸ್ಯವಾಗುತ್ತದೆ. ವಿಶೇಷವಾಗಿ, ನಮಗೆ ಇಬ್ರಿಯರಿಗೆ ಪುಸ್ತಕದಿಂದ ತಿಳಿದಿರುವದೇನೆಂದರೆ, ಮಗನ ಇನ್ನಷ್ಟು ಶ್ರೇಷ್ಠವಾದ ಪ್ರಕಟನಗೋಸ್ಕರ ಸಿದ್ಧಪಡಿಸುವದಕ್ಕಾಗಿ ಹಳೆಯ ಒಡಂಬಡಿಕೆಯ ಸಂದೇಶವು ಕೊಡಲ್ಪಟ್ಟಿತು ಎಂಬದೆ. ಅದೆಲ್ಲವೂ ಕ್ರಿಸ್ತನ ಕಡೆಗೆ ಬೆರಳು ತೋರಿಸುವದಾಗಿತ್ತು. ಮೃತ ಸಮುದ್ರ ಸುರುಳಿಗಳನ್ನು ಬರೆದವರು ತಾವು ಅಂತ್ಯಕಾಲದ ತುದಿಯಲ್ಲಿದ್ದೇವೆಂದು ಭಾವಿಸಿಕೊಂಡಿದ್ದರು. ಅವರ ಭಾವನೆಯು ತಪ್ಪಾಗಿತ್ತು, ಕನಿಷ್ಠ ಭಾಗಶಃ ತಪ್ಪಾಗಿತ್ತು, ಯಾಕೆಂದರೆ ಅವರಿಗೆ ಶಾಸ್ತ್ರಗಳ ಕ್ರಿಸ್ತನ ಪರಿಚಯವಿರಲಿಲ್ಲ. ಅವರ "ನೀತಿಯ ಉಪದೇಶಕನು" ಮೆಸ್ಸೀಯನಾಗಿರಲಿಲ್ಲ.[51]

*ಈಗ ದೇವರು ನಮ್ಮೊಂದಿಗೆ ಕೇವಲ ಮಗನ ಮೂಲಕ ಮಾತ್ರವೇ ಮಾತಾಡುತ್ತಾನೆ.* ಈ ಸತ್ಯವು ರೂಪಾಂತರದ ಕಥೆಯ ಮೂಲಕ ಒತ್ತಿ ಹೇಳಲ್ಪಟ್ಟಿದೆ (ಮತ್ತಾಯ 17:1-8; ಮಾರ್ಕ 9:2-7; ಲೂಕ 9:28-36). ಆ ಸಂದರ್ಭದಲ್ಲಿ, ದೇವರ ಸ್ವರವು ಹೀಗೆ ಘೋಷಿಸಿತು, "ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ" (ಮತ್ತಾಯ 17:5). ಇಂದು ನಮ್ಮ ಮೇಲಿನ ಅಧಿಕಾರವಾಗಿ ದೇವರ ವಾಕ್ಯವನ್ನು ಮಾತ್ರವೇ ಆಲಿಸತಕ್ಕದ್ದು.

*ಖಂಡಿತವಾಗಿಯೂ, ಅಪೊಸ್ತಲರ ಸಂದೇಶವನ್ನು ಅಂಗೀಕರಿಸಿಕೊಳ್ಳುವವರು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರು ಆಗಿರುತ್ತಾರೆ* (ಮತ್ತಾಯ 10:40). ಸಂದೇಶದೊಂದಿಗೆ ಕಳುಹಿಸಲ್ಪಟ್ಟವರಿಲ್ಲದೆ ಹೋಗಿದ್ದಲ್ಲಿ ನಮಗೆ ಯೇಸುವಿನ ಕುರಿತು ಹೆಚ್ಚುಕಡಿಮೆ ಏನೂ ಗೊತ್ತಾಗುತ್ತಿರಲಿಲ್ಲ. ರೂಪಾಂತರದ ಸಂದರ್ಭದಲ್ಲಿ ಘೋಷಣೆಯು ಮಾಡಲ್ಪಟ್ಟ ತಕ್ಷಣದಲ್ಲಿಯೇ, "ಯೇಸುವನ್ನು ಮಾತ್ರವೇ ಕಂಡರು" ಎಂದು ಶಾಸ್ತ್ರವು ಹೇಳುತ್ತದೆ (ಲೂಕ 9:36). ಆತನು ಮೋಶೆ ಮತ್ತು ಎಲೀಯರನ್ನು – ಧರ್ಮಶಾಸ್ತ್ರ ಮತ್ತು ಪ್ರವಾದಿಗಳು – ಸ್ಥಾನವನ್ನು ತೆಗೆದುಕೊಂಡಿರುತ್ತಾನೆ ಮತ್ತು ಅವರನ್ನು ಮೀರಿಸಿರು ತ್ತಾನೆಂಬದರ ಮೇಲೆ ನಮ್ಮ ಸಾರುವಿಕೆಯು ಮುಖ್ಯ ಗಮನವನ್ನು ಹೊಂದಿರತಕ್ಕದ್ದು. ಆತನೊಬ್ಬನೇ ಸಕಲ ಕಾರ್ಯಗಳಲ್ಲಿ ನಮಗೆ ಅಧಿಕಾರವಾಗಿ ನಿಲ್ಲುತ್ತಾನೆ. ನಮಗೆ ಯೇಸುವಿನ ಕುರಿತು ತಿಳಿದುಕೊಂಡಿರುವದೆಲ್ಲವೂ ಆತನಿಂದ ಶಕ್ತಿಯಿಂದ ತುಂಬಿಸಲ್ಪಟ್ಟ ಲೇಖಕ ಮೂಲಕ ಬಂದದ್ದಾಗಿದೆ. ಹೀಗೆ ದೇವರ ಮಗನನ್ನು ಕಳುಹಿಸಿ ಕೊಡುವದು ನಾವು ಬೈಬಲ್ ಇತಿಹಾಸವನ್ನು ತಿಳಿದುಕೊಳ್ಳುವದರಲ್ಲಿ ಬಹಳ ಮುಖ್ಯವಾಗಿತ್ತು.

*ಯೇಸುವಿನ ಪ್ರಕಟನೆಯು ವಿಶಿಷ್ಟವಾದದ್ದು.* ಇಂದು ಲೋಕದಲ್ಲಿ ಯೇಸುವಿನ ದೇವತ್ವದ ಕುರಿತು ವ್ಯಾಪಕವಾಗಿರುವಂತಹ ಸಂದೇಹಗಳ ಕುರಿತಾಗಿ Raymond Brown ಮಾತಾಡುತ್ತಾನೆ. ಆತನು ಪರಿಣಾಮಕರವಾಗಿ ಪ್ರತ್ಯುತ್ತರ ನೀಡುತ್ತಾ ಹೀಗೆ ಹೇಳುತ್ತಾನೆ, "ಆದರೆ ಇಬ್ರಿಯರಿಗೆ ಪುಸ್ತಕವು ನಮ್ಮನ್ನು ಯಾವಾತನ ಪಾಪರಹಿತ ಸ್ವಭಾವವು ಒಂದು *ವಿಶಿಷ್ಟ ಪ್ರಕಟನೆ* ಆಗಿರುತ್ತದೋ ಆ ಕ್ರಿಸ್ತನಿಗೆ ಪರಿಚಯಿಸುತ್ತದೆ, ಆತನ *ಯಜ್ಞವು* ಮಾತ್ರವೇ ನಮ್ಮ ರಕ್ಷಣೆಗೆ ಪರಿಣಾಮವುಂಟು ಮಾಡುವಂತದ್ದು, ಮತ್ತು ಆತನಿಗೆ ಪರಲೋಕದಲ್ಲಿಯೂ ಭೂಮಿಯಲ್ಲಿಯೂ ಇರುವಂಥ *ಅಧಿಕಾರವು* ಎದುರಾಳಿ ಇಲ್ಲದಂತದ್ದ."[52] ಇದೊಂದು ಸರಳವಾದ ಆದರೆ ಶ್ರೇಷ್ಠವಾದ ಪ್ರತಿವಾದವಾಗಿರುತ್ತದೆ.

### ದೇವರು, "ಯಾರಿಗೂ ಕಾಣದಂಥವನು" (1:3; 1 ತಿಮೊಥೆ 6:16)

ಅಂತರಿಕ್ಷದಲ್ಲಿರುವ ಕಪ್ಪುಕುಳಿಯು (black hole) ಬೆಳಕನ್ನು ಸಹ ತನ್ನೊಳಗಿಂದ ತಪ್ಪಿಸಿಕೊಂಡು ಹೊರಹೋಗುವದಕ್ಕೆ ಬಿಡದಷ್ಟು ಗುರುತ್ವಾಕರ್ಷಣವುಳ್ಳ ಘನೀಕರಿಸಿದ ಸಮೂಹವಾಗಿದ್ದು ಅದು ಅಗೋಚರನಾದ ದೇವರಿಗೆ ಒಂದು ಶಾರೀರಿಕ ಸಾದೃಶ್ಯವಾಗಬಹುದೋ? ನಾವು ಅಂತರಿಕ್ಷದಲ್ಲಿ ಒಂದು ಕಪ್ಪ ಕುಳಿಯನ್ನು ಕಾಣಲಾರೆವು, ಮತ್ತು ಅದು ಅಂತರಿಕ್ಷದಲ್ಲಿ ಹತ್ತಿರದಲ್ಲಿರುವ ಇತರ ವಸ್ತುಗಳನ್ನು ತನ್ನ ಗುರುತ್ವಾಕರ್ಷಣ ಎಳೆದುಕೊಳ್ಳುವದರ ನಿಮಿತ್ತವಾಗಿ ಅದು ಇರುತ್ತದೆಂಬುದನ್ನಷ್ಟೆ ನಾವು ಬಲ್ಲೆವು. ಒಪ್ಪಿಕೊಂಡಿರುವಂತೆ, "ಯಾರಿಗೂ ಕಾಣದಂಥವನು" ಎಂಬುದು ತದ್ವಿರುದ್ಧವಾಗಿರುತ್ತದೆ ಯಾಕೆಂದರೆ ಒಂದು ಕಪ್ಪ ಕುಳಿಯು ತನ್ನ ಹತ್ತಿರ ಬರುವ ಎಲ್ಲವನ್ನು ತಪ್ಪಿಸಿಳ್ಳುವದಕ್ಕೆ ಸಾಧ್ಯತೆಯಿಲ್ಲದಂತೆ ತನ್ನ ಸಮೂಹವಾಗುವಂತೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತದೆ. ಹೇಗೂ, ಒಂದರಿಂದ ಯಾವದೂ ತಪ್ಪಿಸಿಕೊಳ್ಳಲಾಗದಂಥದ್ದನ್ನು ದೇವರು ಸೃಷ್ಟಿಸಿರುವದಾದರೆ, ತನ್ನ ಬಳಿಗೆ ಯಾವದೂ ಬರಲಾಗದಂಥ ಶಕ್ತಿಯನ್ನು ಸೃಷ್ಟಿಸಬಲ್ಲನು – ಅಥವಾ ಸ್ವತಃ ಆ ಶಕ್ತಿಯಾಗಿರಬಲ್ಲನು. ಕನಿಷ್ಠ, ಇದು ದೇವರ ಶಕ್ತಿಯು ಎಷ್ಟು ವ್ಯಾಪಕವಾದದ್ದೆಂಬುದಕ್ಕೆ ಒಂದು ಸಾದೃಧ್ಯವಾಗಿರುತ್ತದೆ. ಆತನು ನಮ್ಮ ಮಿತಿಯುಳ್ಳ ಬುದ್ಧಿಗಳಿಗೆ ಕಾಣಲಾಗದಂಥ, ಅಥವಾ ಸಮೀಪಿಸಕೂಡದಂಥ ಸಂಗತಿಗಳು ಇರುತ್ತವೆಂದು ತೋರಿಸಿ ಕೊಡುವಂಥ ವಿಶಿಷ್ಟ ಕಾರ್ಯಗಳನ್ನು ವಿಶ್ವದಲ್ಲಿ ಉಂಟು ಮಾಡಿರುತ್ತಾನೆ. ಹೇಗೂ, ದೇವರ ಸ್ವಭಾವವನ್ನು ಬಣ್ಣಿಸುವದಕ್ಕೆ ಸಾಕಾಗುವಂಥ ಸಾದೃಶ್ಯವು ಭೌತಿಕ ಜಗತ್ತಿನಲ್ಲಿ ಯಾವದೂ ಇರುವದಿಲ್ಲ.

### "ತತ್ವದ ಮೂರ್ತಿ" (1:3)

1988ರಲ್ಲಿ, Alabama Statehouseಗೆ ನೀಡಿದ ಒಂದು ಭೇಟಿಯಲ್ಲಿ, ನನ್ನ ಕೈಯಲ್ಲಿ Alabama ರಾಜ್ಯದ ಅಧಿಕೃತ ಮುದ್ರೆಯನ್ನು ಹಿಡಿದುಕೊಂಡೆನು. ಆ ಮುದ್ರೆಯಲ್ಲಿ ಕೆತ್ತಲಾಗಿದ್ದ ಅಕ್ಷರಗಳು ರಾಜ್ಯದ ಅಧಿಕಾರವನ್ನು ಪ್ರತಿನಿಧಿಸುತ್ತವೆ. ನಾನು ಅದನ್ನು ಕೈಯಲ್ಲಿ ಹಿಡಿದುಕೊಂಡಿದ್ದೆನಾದರೂ, ಮತ್ತು ಅದರ ಮುದ್ರೆಯನ್ನು ಒಂದು ಕಾಗದದ ತುಂಡಿನ ಮೇಲೆ ಒತ್ತುವಂತೆ ಅನುಮತಿಸಲ್ಪಡಬಹುದಾಗಿತ್ತಾದರೂ, ಅದನ್ನು ಬಳಸುವ ಯಾವದೇ ಅಧಿಕಾರವು ನನಗೆ ಇರಲಿಲ್ಲ. ನನ್ನ ಕೈಯಲ್ಲಿ ಮುದ್ರೆಯಿತ್ತು, ಆದರೆ ನನಗೆ ಅಧಿಕಾರವಿರಲಿಲ್ಲ. ತತ್ಪರಿಣಾಮವಾಗಿ, ಅದು ನನಗೆ ನಿಷ್ಪ್ರಯೋಜಕನಾಗಿತ್ತು. ಅದಕ್ಕೆ ತದ್ವಿರುದ್ಧವಾಗಿ, ಯೇಸು – ದೇವರ ಪೂರ್ಣ ಅಧಿಕಾರವುಳ್ಳವನಾಗಿ ಮತ್ತು "ಆತನ ವ್ಯಕ್ತಿತ್ವದ ಪ್ರತಿರೂಪ" (ತತ್ವದ ಮೂರ್ತಿ) ಆಗಿರುವವನಾಗಿ – ದೇವರೊಂದಿಗೆ ತನ್ನ ದೈವಿಕ ಅಧಿಕಾರದಿಂದ ಮಾತಾಡಬಲ್ಲವನಾಗಿದ್ದನು.

ಆತನು ಪ್ರತಿರೂಪವಾಗಿದ್ದನು, ಮತ್ತು ಆತನಿಗೆ ಅಧಿಕಾರವಿತ್ತು.

## ಆತನ ಆಧಾರವಾಗಿರುವ ವಾಕ್ಯ (1:3)

ನಾವು ನಮ್ಮ ಸರ್ವಶಕ್ತನಾದ ದೇವರ ಬಗ್ಗೆ ಮತ್ತು ಆತನ ಅಭಿಷೇಕ್ತನ ಬಗ್ಗೆ ಸಾಕಾಷ್ಟು ಬೋಧನೆ ಮತ್ತು ಉಪದೇಶವನ್ನು ಮಾಡುತ್ತೇವೋ? ಯೆಶಾಯ 40:22, 26-28 ವಚನಗಳು ದೇವರ ವಿಶಿಷ್ಟ ಗುಣಸ್ವಭಾವಗಳನ್ನು ತಿಳಿಸುವವುಗಳಾಗಿದ್ದು ಅವುಗಳು ಇಬ್ರಿಯರಿಗೆ ಪುಸ್ತಕವು ಯೇಸುವಿಗೆ ಸಹ ಅನ್ವಯವಾಗುತ್ತವೆಂದು ಹೇಳುತ್ತದೆ. ಆತನ ಶಕ್ತಿಯು ಭೂಮಿಯ ಮೇಲಿರುವ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ. ಆತನು ನಮ್ಮನ್ನು ಅವುಗಳಿಂದ ಬಿಡಿಸುವೆನೆಂದು ವಾಗ್ದಾನ ಮಾಡುವದಿಲ್ಲವಾದರೂ, ಅವುಗಳನ್ನು ನಮಗೆ ಹಿತಕರವಾಗುವಂತೆ ಮಾಡುವೆನೆಂದು ತಿಳಿಸುತ್ತಾನೆ (ರೋಮಾ 8:28).

ಕ್ರಿಸ್ತನ ನಿಮಿತ್ತವಾಗಿ ಸಮಸ್ತವೂ "ಒಂದಾಗಿ ನಿಂತಿರುತ್ತವೆ." ಆತನು ಮಾತಾಡುತ್ತಾನೆ, ಮತ್ತು ಈ ಲೋಕವು ಛಿದ್ರಛಿದ್ರವಾಗಿ ಸ್ಫೋಟಗೊಳ್ಳುವದರಿಂದ ದೂರವಿರುತ್ತದೆ. ಅದೇ ರೀತಿಯಲ್ಲಿ, ದೇವರು "ಈಜಾಡುವಂಥ ಮೀನುಗಳು ಉಂಟಾಗಲಿ!" ಎಂದು ಹೇಳಿದನು ಮತ್ತು ಅವುಗಳು ಕಾಣಿಸಿಕೊಂಡವು. ಈ ಭಾವನೆಯು ದೇವರಿಂದ ಸೃಷ್ಟಿಸಲ್ಪಡುವಿಕೆಯನ್ನು ಬಿಟ್ಟು ಬೇರೆ ಯಾವದಕ್ಕೂ ಅವಕಾಶವನ್ನೇ ಕೊಡುವದಿಲ್ಲ. ಬೆನ್ನೆಲುಬುಯಿಲ್ಲದ ಜೀವಿಯೊಂದು ಬೆನ್ನೆಲುಬುಳ್ಳ ಜೀವಿಯಾಗಿ ಪರಿವರ್ತನೆಗೊಳ್ಳುತ್ತದೆಂಬ ವಿಧವಾದ ವಿಕಾಶವಾದವು ಪಳೇಯುಳಿಕೆ ದಾಖಲೆಯಲ್ಲಿ ಸಿಕ್ಕಿರುವೇ ಇಲ್ಲವಷ್ಟೆ. ವಿಕಾಶವಾದವು ಸತ್ಯವೆಂದು ಸ್ಥಾಪಿಸಲ್ಪಡುವದಕ್ಕೆ ಅಂಥ ಸಂಗತಿಗಳ ಪುರಾವೆಯ ಅಗತ್ಯವಿರುತ್ತದೆ, ಆದರೆ ಅದು ಸತ್ಯವೋ ಎಂದು ಪರಿಶೀಲನೆ ಮಾಡುವದಕ್ಕೆ ಪಳೆಯುಳಿಕೆ ದಾಖಲೆಯಲ್ಲಿ ಅತಿ ಅಧಿಕವಾದ "ಅಂತರಗಳು" ಇರುತ್ತವೆ. ಅಂತಹ ವಿಕಾಶವಾದ ಸೂತ್ರವು ಬೈಬಲಿನಿಂದ ತಿರಸ್ಕರಿಸಲ್ಪಟ್ಟಿರುತ್ತದೆ. ದೇವರು, ತನ್ನ ಕಾರ್ಯಮಾಡುವ ಪ್ರತಿನಿಧಿಯಾಗಿ ಯೇಸುವನ್ನು ಹೊಂದಿರುವವನಾಗಿ, ಎಲ್ಲವನ್ನು ನಿಯಂತ್ರಿಸುತ್ತಾನೆ.

## "ಪಾಪಗಳ ವಿಶುದ್ಧಿ" (1:3)

ಪ್ರತಿಯೊಂದು ಆತ್ಮವು ಪಾಪದಿಂದ, ಅದರ ತಪ್ಪಿತಸ್ಥಭಾವನೆ ಮತ್ತು ನಿತ್ಯವಾದ ದುಷ್ಪರಿಣಾಮಗಳ ಸಮೇತವಾಗಿ ಶುದ್ಧೀಕರಿಸಲ್ಪಡುವಂತೆ ಯೇಸು ಮಾರ್ಗವನ್ನು ಏರ್ಪಡಿಸಿದನು. ಆತನು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳಲು ಮತ್ತು ಇದನ್ನು ಕಾರ್ಯರೂಪಕ್ಕೆ ತರಲು ತನ್ನ ರಕ್ತವನ್ನು ಅರ್ಪಿಸಿದನು (ಮತ್ತಾಯ 26:28). ಈ ಸಾಂಸ್ಕೃತಿಕವಾಗಿ ಗಣ್ಯರೆನಿಸಿಕೊಂಡವರು ಈ ಯೋಚನೆಯನ್ನು ಅನಾಗರಿಕ ಮತ್ತು ಬರ್ಬರವಾದದ್ದೆಂದು ಪರಿಗಣಿಸುತ್ತಾರೆ. ಒಬ್ಬನು ಮಾನವರನ್ನು ರಕ್ಷಿಸುವದಕ್ಕಾಗಿ ಮರಣಿಸಬಲ್ಲನು ಸಹ ಎಂಬದು ಒಂದು ಹೇಯವಾದ ಯೋಚನೆಯಾಗಿದೆಯೆಂದು ಕಾಣುತ್ತಾರೆ. ಹೇಗೂ, ನಂಬುವವರಾದ ನಮಗೆ, ಅದೊಂದು ಸುಂದರವಾದ ಪದ್ಯ ಅಥವಾ ಒಂದು ಸಂಗೀತದಂತೆ ಇರುತ್ತದೆ. ಅದು ಎಲ್ಲಾ ಕಥೆಗಳಿಗಿಂತಲೂ ಅಮೋಘವಾದದ್ದು. ನಮಗೋಸ್ಕರ ಒಬ್ಬನು ದೊಡ್ಡ ತ್ಯಾಗವನ್ನು ಮಾಡಿದ್ದಾನೆ ಅಥವಾ ನಾವು ಜೀವಿಸುವಂತಾಗಲು ತಾನು ಮರಣಿಸಿದನೆಂಬುದನ್ನು ತಿಳಿಯುವದಕ್ಕಿಂತಲೂ ಕೆಲವೇ ಸಂಗತಿಗಳು ನಾವು ಒಬ್ಬನನ್ನು ಪ್ರೀತಿಸುವಂತೆ ಮಾಡಬಲ್ಲವು. ಈ ಸಂದೇಶಕ್ಕೆ ಬೇರೆ ಯಾವದೂ ಸಹ ಹೊಂದಿರುವದಕ್ಕಾಗದಂತಹ ಶಕ್ತಿಯು ಇರುತ್ತದೆ. ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು

ಸಂಪಾದಿಸಿಕೊಳ್ಳಲು ಬೇರೆ ಯಾವದೇ ಮಾರ್ಗವು ಇರುವದಕ್ಕೆ ಸಾಧ್ಯವಿರಲಿಲ್ಲ, ಇರುವದಾಗಿದ್ದಲ್ಲಿ ದೇವರು ಅದನ್ನು ಬಳಸಿರುತ್ತಿದ್ದನು. ಯೋಗ್ಯವಾದ ಯಾವದಕ್ಕೇ ಆಗಲಿ ಒಂದು ಬೆಲೆಯು ಇರುತ್ತದೆಂಬುದು ನಮ್ಮ ಪ್ರೀತಿಯುಳ್ಳ ತಂದೆಗೆ ಗೊತ್ತಿದೆಯೆಂಬುದನ್ನು ಕ್ರೈಸ್ತರು ಗುರುತಿಸುತ್ತಾರೆ. ನ್ಯಾಯಕ್ಕೋಸ್ಕರ ಪಾಪಕ್ಕೆ ತಕ್ಕ ದಂಡನೆಯನ್ನು ಮಾಡುವದು ಅಗತ್ಯವೆಂದು ಮತ್ತು ಅಪರಿಪೂರ್ಣವಾದದ್ದು ತನ್ನಷ್ಟಕ್ಕೆ ತಾನೇ ಪರಿಪೂರ್ಣತೆಯನ್ನು ತಲುಪಲಾರದು ಎಂದು ಆತನಿಗೆ ತಿಳಿದದೆ. ಆದುದರಿಂದ, ಆತನು ಒಂದು ಭರ್ಜರಿಯಾದ ಮೌಲ್ಯ, ಮಹಾನ್ ಪ್ರಾಯಶ್ಚಿತ್ತ ಬೆಲೆಯನ್ನು – ಯೇಸುವಿನ ರಕ್ತವನ್ನು ಒದಗಿಸಿದನು!

## ಯೇಸುವೋ ಅಥವಾ ಒಬ್ಬ ದೇವದೂತನೋ? (1:4)

ಪರಲೋಕವು ದೇವದೂತರ ನಿವಾಸವಾಗಿರುತ್ತದೆ, ಮತ್ತು ಅವರು ಯೇಸುವಿನ ಸಂಗಡ ಪ್ರಭಾವದೊಂದಿಗೆ ಬರುವರು (ಮತ್ತಾಯ 25:31). "ಪರಾಕ್ರಮಶಾಲಿಗಳು" (ಕೀರ್ತನೆ 103:20), ಅವರು ತಂದೆಯು ಹೇಳಿದಂತೆ ಮಾಡುವವರು; ಅವರು ದೇವರ ಸಂದೇಶವಾಹಕರಾಗಿದ್ದರು (ಕೀರ್ತನೆ 104:4; NASB ಮತ್ತು KJV ಹೋಲಿಸಿ ನೋಡಿರಿ); ಅವರು ಪರಿಶುದ್ಧರು (ಮತ್ತಾಯ 25:31), ಮತ್ತು ಅವರು ದೇವರ ಸಿಂಹಾಸನದ ಸುತ್ತಲು ಇರುತ್ತಾರೆ (ಪ್ರಕಟನೆ 5:11). ದೇವರು ಲೋಕವನ್ನು ನಿಯಂತ್ರಿಸುವದು ಅವರ ಮೂಲಕವೇ ಅಲ್ಲವೇ? ನಾವು ಆತನನ್ನು ಪ್ರೀತಿಸುವದಾದರೆ ಎಲ್ಲಾ ಕಾರ್ಯಗಳನ್ನು ನಮ್ಮ ಹಿತಕ್ಕಾಗಿ ಅನುಕೂಲವಾಗುವಂತೆ ಅವರ ಮೂಲಕವೇ ಆತನು ವ್ಯವಸ್ಥೆ ಮಾಡುತ್ತಾನಲ್ಲವೇ? (ನೋಡಿ ರೋಮಾ 8:28.)

ಇಬ್ರಿಯರಿಗೆ ಪುಸ್ತಕವು ಬರೆಯಲ್ಪಟ್ಟಾಗ, ಕೆಲವರು ಯೇಸುವನ್ನು ಒಬ್ಬ "ದೇವದೂತನು" ಎಂದು ಕರೆಯುತ್ತಿದ್ದಿರಬಹುದು, "ಆತನನ್ನು ಮನುಷ್ಯರ ವ್ಯವಹಾರಗಳ ಮೇಲೆ ಪ್ರಭಾವ ಬೀರುವ ಆತ್ಮೀಕ ಜೀವಿಗಳಿಗಿಂತಲೂ ಹೆಚ್ಚಿನವನಲ್ಲವೆಂಬತೆ" ಮಾಡುತ್ತಿದ್ದಿರಬಹುದು.[53] ಆತನು ದೇವದೂತರಿಗಿಂತಲೂ ಎಷ್ಟೋ ಹೆಚ್ಚು ಉನ್ನತ್ತಕ್ಕೇರಿಸಲ್ಪಟ್ಟವನು.

## ಪ್ರಶ್ನೆಗಳ ಒಂದು ಸರಣಿಯು ಆರಂಭಗೊಳ್ಳುತ್ತದೆ (1:5)

3ನೇ ವಚನವು ಕೀರ್ತನೆ 110:1ರಲ್ಲಿನ ಮಗನು ದೇವರ ಬಲಗಡೆಯಲ್ಲಿ ಕೂತುಕೊಂಡು ಆಳ್ವಿಕೆಯನ್ನು ಮಾಡುವನೆಂಬ ಯೋಚನೆಯನ್ನು ಪ್ರಾಸಂಗೀಕವಾಗಿ ಪ್ರಸ್ತಾಪಿಸುತ್ತದೆ. 5ನೇ ವಚನವು ಹಳೆಯ ಒಡಂಬಡಿಕೆಯ ಏಳು ಉಲ್ಲೇಖಗಳ ಸರಣಿಯೊಂದನ್ನು ಆರಂಭಿಸುವದಾಗಿದ್ದು, ಅವುಗಳಲ್ಲಿ ಬಹುಪಾಲು ಕೀರ್ತನೆಗಳ ಪುಸ್ತಕದಿಂದ ತೆಗೆದುಕೊಂಡವುಗಳಾಗಿವೆ (ಕೀರ್ತನೆ 2:7; 104:4; 45:6, 7; 102:25-27; 110:1). ಇದಕ್ಕೆ ಹೊರತಾದವುಗಳೆಂದರೆ ಎರಡನೆಯ ಮತ್ತು ಮೂರನೆಯ ಉಲ್ಲೇಖನಗಳಾಗಿವೆ (ಅವುಗಳು 2 ಸಮುವೇಲ 7:14 ಮತ್ತು ಧರ್ಮೋಪದೇಶಕಾಂಡ 32:43ರಿಂದ ತೆಗೆದುಕೊಂಡವುಗಳು; LXX). ಮೊದಲ ಹೇಳಿಕೆ, ಕೀರ್ತನೆ 2:7ರಿಂದ ಉಲ್ಲೇಖಿಸಲ್ಪಟ್ಟದ್ದಾಗಿದ್ದು, ಹೊಸ ಒಡಂಬಡಿಕೆಯ ಬರಹಗಾರರಿಗೆ ಮತ್ತು ಆದಿ ಸಭೆಗೆ ಅತ್ಯಂಥ ಹೆಚ್ಚು ಪ್ರಾಮುಖ್ಯವಾಗಿತ್ತು; ಅದು ಸತತವಾಗಿ ಬಳಸಲ್ಪಟ್ಟಿತ್ತು. ಕೀರ್ತನೆ 2 ಮುಂಚೆಯೇ ಒಂದು ಮೆಸ್ಸೀಯನಿಗೆ ಸಂಬಂಧಿಸಿದ ಕೀರ್ತನೆಯೆಂದು ಗುರುತಿಸಲ್ಪಟ್ಟಿತ್ತು ಯಾಕೆಂದರೆ ಅದರಲ್ಲಿ ದೇವರ "ಅಭಿಷೀಕ್ತ"ನ (ಇಬ್ರಿಯ ಭಾಷೆಯಲ್ಲಿ *ಮೆಸ್ಸೀಯನು*; ಗ್ರೀಕ್ ಭಾಷೆಯಲ್ಲಿ *Christos*) ಬಗ್ಗೆ ಹೇಳಲಾಗಿರುತ್ತದೆ. ಇಲ್ಲವಾದಲ್ಲಿ, ಈ ಪತ್ರಿಕೆಯೊಳಗೆ ಅದರಿಂದ ವಾದವನ್ನು ಮಾಡುವದು ಅದರ ಮೊದಲ ವಾಚಕರಿಗೆ ಅಲ್ಪ ಮೌಲ್ಯವನ್ನು ಹೊಂದಿರುತ್ತಿತ್ತು. ಅದು ಹಲವಾರು ವಿಧಗಳಲ್ಲಿ ಯೇಸುವಿಗೆ

ಅನ್ವಯಿಸಲ್ಪಟ್ಟಿರುತ್ತದೆ. ಅಪೊಸ್ತಲರ ಕೃತ್ಯಗಳು 4:25, 26ರಲ್ಲಿನ ಪ್ರಾರ್ಥನೆಯಲ್ಲಿ ಅಪೊಸ್ತಲರು ಕೀರ್ತನೆ 2:1, 2ರಿಂದ ಉಲ್ಲೇಖ ಮಾಡುತ್ತಾರೆ. ಕೀರ್ತನೆ 2:7ನೇ ವಚನವು ಇಬ್ರಿಯ 1:5ರಲ್ಲಿ ಮತ್ತು ಪುನಃ 5:5ರಲ್ಲಿ ಉಲ್ಲೇಖನ ಮಾಡಲ್ಪಟ್ಟಿರುತ್ತದೆ. ಕೀರ್ತನೆ 2:8ನೇ ವಚನವು, "ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು. ಭೂಮಿಯ ಕಟ್ಟಕಡೆಯ ವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು" ಎಂದು ಹೇಳುವದಾಗಿದ್ದು ಕ್ರಿಸ್ತನು "ಎಲ್ಲಕ್ಕೂ ಬಾಧ್ಯನು" ಎಂಬ ಸತ್ಯವನ್ನು ಸೂಚಿಸುತ್ತದೆ (ಇಬ್ರಿಯ 1:2). ಕೀರ್ತನೆ 2:7ರಲ್ಲಿನ ಮಾತುಗಳು ಇಬ್ರಿಯ 1:5ರಲ್ಲಿ ದೇವದೂತರಿಗಿಂತ ಯೇಸು ಶ್ರೇಷ್ಠನೆಂಬುದನ್ನು ಒತ್ತಿ ಹೇಳುವದಕ್ಕೆ ಬಳಸಲ್ಪಟ್ಟಿರುತ್ತವೆ. ಆ ಮಾತುಗಳು ಅಪೊಸ್ತಲರ ಕೃತ್ಯಗಳು 13:33, 34ರಲ್ಲಿ ಸಹ ಉಲ್ಲೇಖಿಸಲ್ಪಟ್ಟಿರುತ್ತವೆ, ಅಲ್ಲಿ ಪೌಲನು ಅವುಗಳನ್ನು ಯೇಸುವಿನ ಪುನರುತ್ಥಾನಕ್ಕೆ ಅನ್ವಯಗೊಳಿಸುತ್ತಾನೆ. ಕೀರ್ತನೆಯನ್ನು ಬಳಸಿದ್ದು ಅಪೊಸ್ತಲರಿಗೆ ಕ್ರಿಸ್ತನ ಪುತ್ರತ್ವದ ಬಗ್ಗೆ ಇದ್ದ ಮನವರಿಕೆಯನ್ನು ತೋರಿಸುತ್ತದೆ ಮತ್ತು ಯೆಹೂದ್ಯರಿಗೆ ಯೇಸುವು ಮೆಸ್ಸೀಯನಾಗಿದ್ದನೆಂಬುದನ್ನು ತೋರಿಸಿ ಕೊಡುವದಕ್ಕೆ ಈ ಕೀರ್ತನೆಯು ಪ್ರಾಮುಖ್ಯವಾಗಿತ್ತೆಂಬುದನ್ನು ಸೂಚಿಸುತ್ತದೆ. ನಂಬಿಕೆಯ ಪರವಾಗಿ ಸಂರಕ್ಷಕರಾಗಿರುವವರು ಈಗಲೂ ಯೆಹೂದ್ಯ ಮಿತ್ರರೊಂದಿಗೆ ಸಂಭಾಷಿಸುವಾಗ, ಆ ಮಿತ್ರರು ತಮ್ಮ ಸ್ವಂತ ಪವಿತ್ರ ಶಾಸ್ತ್ರಗಳಲ್ಲಿ ನಂಬಿಕೆಯನ್ನು ಹೊಂದಿದ್ದರೆ, ಈ ವಚನವನ್ನು ಪರಿಣಾಮಕಾರಿಯಾಗಿ ಬಳಸಬಹುದು.

### ಶಾಸ್ತ್ರಗಳ ಮೌನ (1:5)

ದೇವರು ಒಬ್ಬ ದೇವದೂತನಿಗೆ "ನೀನು ನನ್ನ ಮಗನು" ಎಂದು ಎಂದಿಗೂ ಹೇಳಲಿಲ್ಲವಾದ್ದರಿಂದ, ಸೃಷ್ಟಿಸಲ್ಪಟ್ಟ ದೇವದೂತನೊಬ್ಬನಿಗೆ ಎಂದಾದರೂ ಆ ಮಾತಿನಿಂದ ಕರೆಯಲ್ಪಡುವನೆಂಬದು ಸಂಪೂರ್ಣವಾಗಿ ಕ್ರಮ ತಪ್ಪಿದ್ದಾಗಿದೆ. ಮೌನವು ಸಮ್ಮತಿಸುವಂಥದ್ದಲ್ಲ ಆದರೆ ನಿರ್ಬಂಧಿತವಾದದ್ದು! ಈ ಅಂಶವನ್ನು ಅರಿತುಕೊಳ್ಳಲು ವಿಫಲರಾಗುವದು ಬೈಬಲಿನ ಮೌನವೆಂದರೆ ಅದರ ಉಪದೇಶಕ್ಕೆ ಸೇರ್ಪಡೆಗೊಳಿಸುವ ಸಾಹಸಕ್ಕೆ ಕೈಹಾಕಿದಂತಾಗುವದು, ಅದು ಶಾಸ್ತ್ರಗಳನ್ನು ಮತ್ತು ಅವುಗಳ ಅಧಿಕಾರವನ್ನು ಗೌರವಿಸುವದರ ಪ್ರತಿಯೊಂದು ಉನ್ನತವಾದ ಮತ್ತು ಪವಿತ್ರವಾದ ತತ್ವವನ್ನು ಉಲ್ಲಂಘಿಸಿದಂತಾಗುತ್ತದೆ. ನಾವು ಅಂತಹ ತರ್ಕವನ್ನು ಅನುಸರಿಸುವದಾದರೆ ಮತ್ತು ಶಾಸ್ತ್ರಗಳ ಮೌನದ ಮಹತ್ವಪೂರ್ಣತೆಯನ್ನು ಅಸಡ್ಡೆ ಮಾಡುವದಾದರೆ, ಬೈಬಲ್ ಉಪದೇಶಕ್ಕೆ ಎಲ್ಲಾ ವಿಧವಾದ "ಹೊಸತನ ತರುವಿಕೆಗಳು" ಅನುಜ್ಞಾರ್ಹವೆಂದು ಕಾಣುವಂತಾಗುತ್ತದೆ. ಸಭೆಯೊಳಗೆ ಅನಧಿಕೃತವಾದ ಬದಲಾವಣೆಗಳನ್ನು ತರುವದಕ್ಕೆ ಬಯಸುವವರು ಮೌನವು ಅನುಜ್ಞಾರ್ಹ ಎಂದು ವಾದಿಸತಕ್ಕದ್ದು, ಆದರೆ ಇಬ್ರಿಯರಿಗೆ ಪುಸ್ತಕವು ಅವರು ಅನುಸರಿಸುವ ದಾರಿಯನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತದೆ.

### "ನೀನು ನನ್ನ ಮಗನು" (1:5)

ಯೇಸು, ಏಕಕಾಲದಲ್ಲಿ ದೇವರ ಮಗನು ಮತ್ತು ದಾವೀದನ ಕುಮಾರನು ಎರಡೂ ಆಗಿದ್ದನು. ನಾವು ಅತ್ಯಂಥ ಉನ್ನತವಾಗಿ ಮಹಿಮೆಪಡಿಸಲಾರೆವು. ಆತನ ವ್ಯಕ್ತಿತನ ಅಥವಾ ಗುಣಸ್ವಭಾವವನ್ನು ತುಚ್ಛೀಕರಿಸುವಂತದ್ದು ಒಬ್ಬನನ್ನು ಆತನಿಗೆ ಅಯೋಗ್ಯಗೊಳಿಸುತ್ತದೆ. 1:5ರಲ್ಲಿ ಇರುವ ಎರಡು ಉಲ್ಲೇಖನಗಳು 2 ಸಮುವೇಲ 7:14 ಮತ್ತು 1 ಪೂರ್ವಕಾಲವೃತ್ತಾಂತ 17:13ರಿಂದ ತೆಗೆದುಕೊಳ್ಳಲ್ಪಟ್ಟವುಗಳು. ಮೊದಲನೆಯ ಅನ್ವಯಿಕೆಯು ಸೊಲೊಮೋನನಿಗೆ

ಆಗಿತ್ತು, ಆದರೆ ಅದಕ್ಕಿಂತ ದೊಡ್ಡ ಮತ್ತು ಅಂತಿಮವಾದ ನೆರವೇರಿಕೆಯು ಕ್ರಿಸ್ತನಲ್ಲಿ ಆಗಿತ್ತು. 2 ಸಮುವೇಲ 7:14ರ ಎರಡನೆಯ ಭಾಗವು ("ಅವನು ತಪ್ಪುಮಾಡಿದರೆ") ಕ್ರಿಸ್ತನಿಗೆ ಅನ್ವಯಗೊಳಿಸುವದಕ್ಕೆ ಸಾಧ್ಯವಿರಲಿಲ್ಲ, ಯಾಕೆಂದರೆ ಆತನು ಯಾವ ಪಾಪವನ್ನೂ ಮಾಡಲಿಲ್ಲ (1 ಪೇತ್ರ 2:21, 22). ಕೆಲವು ಪ್ರವಾದನೆಗಳು ದ್ವಂದ್ವಾರ್ಥಗಳನ್ನು ಹೊಂದಿರುತ್ತವೆಂಬುದನ್ನು ನಾವು ನಮ್ಮ ಶ್ರೋತೃಗಳಿಗೆ ಅರ್ಥವಾಗುವಂತೆ ಮಾಡಬೇಕು.

### ದೇವರು ಈಗಲೂ ಮಾತಾಡುತ್ತಾನೆ (1:7)

1:7ರಲ್ಲಿರುವ "ಆತನು ಹೇಳುತ್ತಾನೆ" ಎಂಬುದು ನಮಗೆ ಅತ್ಯಂತ ದೊಡ್ಡ ಪ್ರೋತ್ಸಾಹವನ್ನು ಕೊಡುತ್ತದೆ. ದೇವರು ಶಾಸ್ತ್ರಗಳ ಮೂಲಕ ಮಾತಾಡುತ್ತಾನೆಂದು ನಾವು ಬಲ್ಲೆವು, ಮತ್ತು ಆತನು ಈ ದಿನವೂ ನಮ್ಮೊಂದಿಗೆ ಅದೇ ಮಾಧ್ಯಮದ ಮೂಲಕ — ಶಾಸ್ತ್ರಗಳು-ಮಾತಾಡುತ್ತಾನೆಂಬ ನಿರ್ಧಾರವನ್ನು ಮಾಡಬಹುದಾಗಿದೆ.

### "ದೇವರೇ, ನಿನ್ನ ಸಿಂಹಾಸನವು" (1:8)

ಕ್ರಿಸ್ತನ ದೇವತ್ವಕ್ಕೆ ಶಾಸ್ತ್ರಗಳಲ್ಲಿರುವ ಅತ್ಯಂಥ ಸ್ಪಷ್ಟವಾದ ಪುರಾವೆಗಳಲ್ಲೊಂದು 1:8ರಲ್ಲಿ ಸಿಕ್ಕುತ್ತದೆ. ಸ್ವತಃ ದೇವರು ಈ ಸಾಕ್ಷಿಯನ್ನು ಕೀರ್ತನೆ 45:6, 7ರಲ್ಲಿ ಕೊಡುತ್ತಾನೆ. ಯೇಸುವು ತಂದೆಯಿಂದ "ದೇವರೇ" ಎಂದು ಕರೆಯಲ್ಪಟ್ಟಿರುತ್ತಾನೆ. ಆತನು ಯಾರಾಗಿದ್ದಾನೆಂಬುದಕ್ಕಾಗಿ ನಾವು ಆತನಿಗೆ ಮಾನವನ್ನು ಮತ್ತು ಸ್ತೋತ್ರವನ್ನು ಸಲ್ಲಿಸಬೇಕು. ಸ್ವತಃ ಯೇಸುವು ತನ್ನನ್ನು ಎಲ್ಲಿಯೂ ದೇವರೆಂದು ಹೇಳಿಕೊಳ್ಳಲೇ ಇಲ್ಲವೆಂದು ಹೇಳಲಾಗುತ್ತದೆ. ಬಹುಶಃ ಆತನು ಆ ಮಾತುಗಳಲ್ಲಿ ಘೋಷಣೆಯನ್ನು ಮಾಡದಿರಬಹುದು, ಆದರೆ ಅದು ಹೊಸ ಒಡಂಬಡಿಕೆಯಲ್ಲಿ ಪುನಃ ಪುನಃ ಸೂಚ್ಯಾರ್ಥವಾಗಿ ಹೇಳಲ್ಪಟ್ಟಿರುತ್ತದೆ. ಉದಾಹರಣೆಗೆ, "ನನ್ನ ಕರ್ತನೇ, ನನ್ನ ದೇವರೇ!" ಎಂದು ಹೇಳಿದ ತೋಮನನ್ನು ಆತನು ಗದರಿಸಲಿಲ್ಲ (ಯೋಹಾನ 20:28, 29). ನಿಶ್ಚಯವಾಗಿಯೂ, ನಾವು ಆತನನ್ನು ಹಾಗೆ ಒಪ್ಪಿಕೊಳ್ಳುವದಾದರೆ ಆತನು ನಮ್ಮನ್ನು ಆಶೀರ್ವದಿಸುವನು.

### "ನ್ಯಾಯದಂಡ" (1:8)

"ನ್ಯಾಯ" (ನೀತಿಯು) ಸರಿಯಾದದ್ದನ್ನು ಮಾಡುವದರ ಪರಿಣಾಮವಾಗಿರುತ್ತದಷ್ಟೆ. ನಾವು ಸರಿಯಾದದ್ದನ್ನು ಮಾಡು ಅಭ್ಯಾಸ ಮಾಡಿಕೊಳ್ಳುವ ತನಕ ನೀತಿವಂತರೆಂದು ಪರಿಗಣಿಸುವದಕ್ಕೆ ಸಾಧ್ಯವಿಲ್ಲ (ನೋಡಿರಿ 1 ಯೋಹಾನ 3:7). ದೇವರು ಆಜ್ಞಾಪಿಸಿರುವದೆ ಲ್ಲವೂ ನೀತಿಯುಳ್ಳದ್ದು — ಆತನು ಯಾವನಾದರೂ ತಪ್ಪು ಮಾಡಬೇಕೆಂದು ಎಂದಿಗೂ ಆಜ್ಞಾಪಿಸಿರುವದಿಲ್ಲ (ಕೀರ್ತನೆ 119:172).

ಸ್ನಾನಿಕನಾದ ಯೋಹಾನನು ಯೇಸುವಿಗೆ ದೀಕ್ಷಾಸ್ನಾನ ಮಾಡಿಸುವದರಿಂದ ದೂರವಿರುವದಕ್ಕೆ ಪ್ರಯತ್ನಿಸಿದಾಗ, ಯಜಮಾನನು ಹೀಗೆ ಮನವಿ ಮಾಡಿಕೊಂಡನು, "ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು [ನೀತಿಯನ್ನು] ನೆರವೇರಿಸತಕ್ಕದ್ದಾಗಿದೆ" (ಮತ್ತಾಯ 3:15). ಇದು ಯೋಹಾನನಿಗೆ ತೃಪ್ತಿ ತಂದಿತು. ಯೇಸು ಕೀರ್ತನೆಗಾರನ ಯೋಚನೆಯನ್ನು ಹಂಚಿಕೊಂಡನು: "ನಿನ್ನ ಆಜ್ಞೆಗಳೆಲ್ಲಾ ನೀತಿಯೇ" (ಕೀರ್ತನೆ 119:172). ಆತನು ದೇವರ ಎಲ್ಲಾ ಆಜ್ಞೆಗಳಿಗೆ ವಿಧೇಯನಾಗಬೇಕೆಂದು ನಿಷ್ಕರ್ಷೆಮಾಡಿಕೊಂಡಿದ್ದನು. ತಾನು ಬೋಧಿಸುತ್ತಿದ್ದಂತ ದೀಕ್ಷಾಸ್ನಾನವನ್ನು ಯೇಸುವಿನಂತಹ ಒಳ್ಳೇವನಿಗೆ ಹೇಗೆ ಅಗತ್ಯವಾಗಿರುತ್ತದೆಂಬುದನ್ನು ಯೋಹಾನನಿಗೆ ಅರ್ಥಮಾಡಿಕೊಳ್ಳಲಾಗಲಿಲ್ಲವೆಂದು

ತೋರುತ್ತದೆ, ಯಾಕೆಂದರೆ "ಪಾಪಪರಿಹಾರಕ್ಕಾಗಿ" ಮಾಡಿಸಿಕೊಳ್ಳಲ್ಪಡುವ ದೀಕ್ಷಾಸ್ನಾನವಾಗಿತ್ತು (ನೋಡಿರಿ ಮಾರ್ಕ 1:4; ಲೂಕ 3:3). ಹೇಗೂ, ಯೇಸುವು ಭೂಮಿಯಲ್ಲಿರುವ ವೇಳೆ ಸ್ವಲ್ಪವೂ ಕೊಂಕುನುಡಿಯಿಲ್ಲದೆ ದೇವರ ಎಲ್ಲಾ ಆಜ್ಞೆಗಳಿಗೆ ಅಧೀನನಾಗಿದ್ದನು. ನಮ್ಮ ದೇವರ ಆಜ್ಞೆಗಳಿಗೆ ಅಲ್ಪವಾದ ಮರ್ಯಾದೆಯನ್ನು ಕೊಡುವ ಕೆಲವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವದನ್ನು ಬಿಟ್ಟು ಬಿಡುವ ಪ್ರಕಾರ, ಆತನು ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳದೆ ಬಿಡುವವನಾಗಿರಲಿಲ್ಲ. "ಸದ್ಯಕ್ಕೆ" ಅದು ಸೂಕ್ತವಾದದ್ದು – ನಿಯಮಕ್ಕೆ ಒಂದು ಹೊರತಾದದ್ದಾಗಿ-ರಕ್ಷಕನು ತನ್ನ ಶಿಷ್ಯರಿಗೆ ಅನ್ವಯವಾಗುವಂತಹ ಪ್ರತಿಯೊಂದು ಆಜ್ಞೆಗೆ ಸ್ವತಃ ವಿಧೇಯನಾಗುವದು ಸೂಕ್ತವಾದದ್ದು ಎಂದು ಹೇಳುತ್ತಾನೆ. ಒಬ್ಬ ಶಿಷ್ಯನು ತಾನು ತನ್ನ ಯಜಮಾನನಿಗಿಂತ ದೊಡ್ಡವನೆಂದು ಹೇಳಿಕೊಳ್ಳಬಾರದು, ಆದರೆ ನಾವು ಒಂದು ಸರಳವಾದ ಆಜ್ಞೆಗೆ ನಿರಾಕರಣೆ ಮಾಡುವಾಗ ಹಾಗೆಯೇ ಹೇಳಿಕೊಳ್ಳುವವರಾಗುತ್ತೇವೆ.

ಯೇಸು ನೀತಿಯನ್ನು ಪ್ರೀತಿಸುತ್ತಾನೆ (ವ. 9). ಆತನು ಕೀರ್ತನೆಗಾರನ ಸಂಗಡ ಹೀಗೆ ಹೇಳುವನು, "ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ" (ಕೀರ್ತನೆ 119:97). ಆತನು ಧರ್ಮಶಾಸ್ತ್ರ ಅಥವಾ ದೇವರ ಆಜ್ಞೆಗಳಲ್ಲದೆ ಬೇರೆ ಇನ್ನಾವದನ್ನಾದರೂ ಧ್ಯಾನಿಸಿದನೋ? ಯೇಸುವಿನ ಮುಖ್ಯವಾದ ಗಮನವು ತನ್ನ ತಂದೆಯ ಚಿತ್ತದ ಮೇಲೆಯೇ ಆಗಿತ್ತು, ಅದೇ ರೀತಿಯೇ ನಮ್ಮದು ಸಹ ಆಗಿರತಕ್ಕದ್ದು.

## ಕರ್ತನು ಅಧರ್ಮವನ್ನು ದ್ವೇಷಿಸುತ್ತಾನೆ (1:9)

ಯೇಸುವಿಗಿದ್ದ ನೀತಿಯನ್ನು ಮಾಡುವ ಮತ್ತು ಪ್ರೀತಿಸುವ ಮನೋಭಾವಕ್ಕೆ ತದ್ವಿರುದ್ಧವಾಗಿ, ಕೆಲವರು ನೀತಿಯನ್ನು ದ್ವೇಷಿಸುತ್ತಾರೆ. ನಮ್ಮ ಕರ್ತನು ಮತ್ತು ರಕ್ಷಕನು ಅದಕ್ಕೆ ವಿರುದ್ಧ ರೀತಿಯಲ್ಲಿರುತ್ತಾನೆ: ಆತನು ಅಧರ್ಮವನ್ನು ದ್ವೇಷಿಸುತ್ತಾನೆ. "ಅಧರ್ಮ" ಎಂಬುದಕ್ಕಿರುವ ಪದವು (ἀνομίαν, *anomia*) ಮತ್ತು "ಕಾನೂನುಬಾಹಿರತೆ, ಆಜ್ಞೆಯ ಉಲ್ಲಂಘನೆ, ಅಥವಾ ಸಾಮಾನ್ಯವಾದ ದುಷ್ಟತ್ವ" ಎಂದು ಅರ್ಥವಾಗಿರುತ್ತದೆ. ಅನೇಕ ವಾಕ್ಯಭಾಗಗಳು "ಧರ್ಮಶಾಸ್ತ್ರಕ್ಕೆ ವಿರುದ್ಧ"ವಾಗಿರುವದರ ಅರ್ಥವು ಏನೆಂಬುದನ್ನು ಘೋಷಿಸುತ್ತವೆ, ಅವುಗಳಲ್ಲಿ ಮಾರ್ಕ 7:20-23; 1 ಕೊರಿಂಥ 6:9, 10; ಗಲಾತ್ಯ 5:19-21; ಮತ್ತು 1 ಪೇತ್ರ 4:1-3 ವಾಕ್ಯಭಾಗಗಳು ಸೇರಿರುತ್ತವೆ.

ನೀತಿಯನ್ನು ಪ್ರೀತಿಸಿ ಅದೇ ವೇಳೆಯಲ್ಲಿ ಅಧರ್ಮವನ್ನು ದ್ವೇಷಿಸದೆ ಇರುವದು ಅಸಾಧ್ಯವಾದದ್ದು (ಮತ್ತಾಯ 6:24; ಯಾಕೋಬ 4:4; 1 ಯೋಹಾನ 2:15-17). ತಾನು ಲೋಕದೊಂದಿಗೆ ರಾಜಿ ಮಾಡಿಕೊಳ್ಳಬಹುದು ಮತ್ತು ಆಗಲೂ ಯೇಸುವನ್ನು ಹಿಂಬಾಲಿಸಬಹುದು ಎಂದು ಯೋಚಿಸುವವನು ಗಂಭೀರವಾದ ದೋಷದಲ್ಲಿದ್ದವನಾ ಗಿದ್ದಾನೆ – ಯಾಕೆಂದರೆ ಒಬ್ಬನು ಕರ್ತನ ಜೊತೆಯಲ್ಲಿ ಇಲ್ಲವೆಂದರೆ, ಅವನು ಆತನಿಗೆ ವಿರುದ್ಧವಾಗಿದ್ದಾನೆ (ಮತ್ತಾಯ 12:30). ಯೇಸು ತನ್ನ ತಂದೆಯ ಮನೆಯನ್ನು ಹೊಲೆ ಮಾಡಿದ್ದ ಚಿನಿವಾರರ ಮೇಲೆ ಕೋಪದಿಂದ ತುಂಬಿದವನಾದನು (ಯೋಹಾನ 2:13-17). ತಪ್ಪು ಮಾಡುವದರ ವಿರುದ್ಧ ಆತನಿಗಿದ್ದ ದ್ವೇಷವು ಆತನನ್ನು "ದಹಿಸುತ್ತಿತ್ತು!" ಯೇಸು ಸುಳ್ಳು ಸಿದ್ಧಾಂತವನ್ನು ದ್ವೇಷಿಸುತ್ತಾನೆ (ಪ್ರಕಟನೆ 2:15). ನಾವು ಹೇಗೆ ಅದನ್ನು ಸ್ವಲ್ಪವಾಗಿ ದ್ವೇಷಿಸಲು ಸಾಧ್ಯ?

ನಾವು ಲೋಟನಂತಿರಬೇಕು "ಆ ಧರ್ಮಿಗಳ ನಾಚಿಕೆಗೆಟ್ಟ ನಡೆತೆಗೆ ವೇದನೆಗೊಂಡಿದ್ದ ನೀತಿವಂತನಾದ ಲೋಟನು . . . ಆ ನೀತಿವಂತನು ಅವರ ನಡುವೆ ಇದ್ದುಕೊಂಡು ಅವರ ಅನ್ಯಾಯಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ

ಆತ್ಮದಲ್ಲಿ ಬಹಳವಾಗಿ ಕರಕರೆಗೊಂಡನು" (2 ಪೇತ್ರ 2:7, 8). ಸೈತಾನನು ಶಾಸ್ತ್ರಗಳನ್ನು ದುರುಪಯೋಗ ಪಡಿಸಿಕೊಳ್ಳುವದನ್ನು ಖಂಡಿಸುವ ಅಧಿಕಾರ ಮತ್ತು ಜ್ಞಾನವು ಯೇಸುವಿಗೆ ಇದ್ದದ್ದು ಮಾತ್ರವೇ ಅಲ್ಲ, ಆದರೆ ಬಿಟ್ಟು ಹೊರಡು ಹೋಗುವಂತೆ ಆತನಿಗೆ ಆಜ್ಞೆ ಮಾಡುವ ಅಧಿಕಾರವನ್ನು ಸಹ ಹೊಂದಿದ್ದನು ("ಸೈತಾನನೇ ನೀನು ತೊಲಗಿ ಹೋಗು!"; ಮತ್ತಾಯ 4:10). ನಾವು ಕೇವಲ ನಂಬಿಕೆಯಿಂದ ಚಲಾಯಿಸುವದಾದರೆ ಅದೇ ರೀತಿಯಲ್ಲಿ ಮಾಡುವ ನೈತಿಕ ಅಧಿಕಾರವು ನಮಗೆ ಕ್ರಿಸ್ತನಲ್ಲಿ ಇರುತ್ತದೆ (ಯಾಕೋಬ 4:7). ಯೇಸು ಪಾಪದಿಂದ ತುಂಬಿದ್ದ ಯೆರೂಸಲೇಮಿಗಾಗಿ ಅತ್ತನು, ತನ್ನನ್ನು ಆಕೆಯು ತಿರಸ್ಕರಿಸಿದ್ದರ ಪರಿಣಾಮವೇನಾಗುವದೆಂಬುದು ಆತನಿಗೆ ಗೊತ್ತಿತ್ತು (ಲೂಕ 19:41; ಮತ್ತಾಯ 23:37-39). ನಮ್ಮ ಪ್ರತ್ಯುತ್ತರ ಏನು?

ಆತನು ಅನೀತಿಯನ್ನು ದ್ವೇಷಿಸಿದನು ಮತ್ತು ನೀತಿಯನ್ನು ಪ್ರೀತಿಸಿದನಾದ್ದರಿಂದ, ಆತನು "ಪರಮಾನಂದತೈಲದಿಂದ ಅಭಿಷೇಕಿಸಲ್ಪಟ್ಟನು" (ಇಬ್ರಿಯ 1:9). ನಿಶ್ಚಯವಾಗಿಯೂ, ನಾವು ನೀತಿಯ ಕಿರೀಟವನ್ನು ಪಡೆದುಕೊಳ್ಳುವಾಗ ಅತ್ಯಧಿಕವಾದ ಆನಂದವನ್ನು ಹೊಂದುವೆವು (2 ತಿಮೊಥೆ 4:8).

## "ಕರ್ತನೇ, ಆದಿಯಲ್ಲಿ ನೀನು" (1:10-12)

ತಂದೆಯಾದ ದೇವರು ಯೇಸುವನ್ನು "ಕರ್ತನು" ಎಂದು ಕರೆದನು. ಈ ವಾಸ್ತವಾಂಶವನ್ನು ಯೇಸುವು ಮತ್ತಾಯ 22:43, 44ರಲ್ಲಿ ಒತ್ತಿ ಹೇಳುವವನಾಗಿ ಕೀರ್ತನೆ 110:1ನ್ನು ಉಲ್ಲೇಖಿಸುತ್ತಾನೆ. ಆತನ ಜನನದ ವೇಳೆಯಲ್ಲಿ ದೇವದೂತರು ಆತನನ್ನು "ಕರ್ತನಾದ ಕ್ರಿಸ್ತನು" ಎಂದು ಕರೆದರು (ಲೂಕ 2:11). ಆತನ ಶಿಷ್ಯರು ಆತನನ್ನು "ಗುರುವೆಂದೂ ಕರ್ತನೆಂದೂ" ಕರೆದರು (ಯೋಹಾನ 13:13). ಆ ಕಾಲದಲ್ಲಿ ಆ ಪದದ ಅರ್ಥವು ಒಂದು ರೀತಿಯಲ್ಲಿ "ಅಯ್ಯಾ" (ಸರ್) ಎಂದಾಗಿತ್ತು, ತಾನು ಯಾರೊಂದಿಗೆ ಮಾತಾಡಬೇಕೆಂದು ಗೊತ್ತಾಗದೆ ಸೌಲನು ಪ್ರತ್ಯುತ್ತರ ನೀಡಿದ ರೀತಿಯಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ ಅದಾಗಿತ್ತು (ಅಪೊಸ್ತಲರ ಕೃತ್ಯಗಳು 9:5). ತೋಮನು "ನನ್ನ ಕರ್ತನೇ, ನನ್ನ ದೇವರೇ" ಎಂದು ಹೇಳಿದಾಗ ತಾನು ಯಾರೊಂದಿಗೆ ಮಾತಾಡುತ್ತಿದ್ದೇನೆಂದು ಬಲ್ಲವನಾಗಿದ್ದನು (ಯೋಹಾನ 20:28). "ಕರ್ತನು" (κύριος, *kurios*) ಎಂದರೆ ಅಧಿಕಾರದಲ್ಲಿ ಉನ್ನತನಾಗಿರುವವನು ಅಥವಾ ನಿಯಂತ್ರಣ ಹೊಂದಿರುವವನು ಎಂದರ್ಥವಾಗಿದೆ. ಯೇಸು ತಾನು "ಸಬ್ಬತ್ ದಿನಕ್ಕೂ ಒಡೆಯನು [ಕರ್ತನು]" ಎಂದು ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ (ಮಾರ್ಕ 2:28), ಅದು ಸಬ್ಬತ್ ದಿನದ ಕಟ್ಟಳೆಯನ್ನು ಕೊಟ್ಟವನು ಆತನೇ ಎಂಬುದನ್ನು ಸೂಚಿಸುವದಾಗಿತ್ತು. "ಕರ್ತನು" ಆಗಿ, ಅದನ್ನು ತೆಗೆದು ಹಾಕುವದು ಸಹ ಸೇರಿದಂತೆ, ತನಗೆ ಸರಿಹೊಂದುವದೆಂದು ತೋಚಿದ ಪ್ರಕಾರ ವಿಧಿಬದ್ಧಗೊಳಿಸುವದಕ್ಕೆ ಶಕ್ತನಾಗಿದ್ದನು!

ನಾವು ಕ್ರಿಸ್ತನನ್ನು "ಕರ್ತನು" ಎಂದು ಅರಿಕೆ ಮಾಡುವಾಗ (ರೋಮಾ 10:9; 1 ಪೇತ್ರ 3:15), ನಾವು ಆತನನ್ನು ನಮ್ಮ ಜೀವಿತಗಳನ್ನು ಆಳುವವನು ಮತ್ತು ನಿಯಂತ್ರಿಸುವ ವನೆಂದು, ನಾವು ಅಧೀನಪಡಿಸಿಕೊಳ್ಳಬೇಕಾದವನು ಎಂದು ಒಪ್ಪಿಕೊಳ್ಳುವವರಾಗುತ್ತೇವೆ. ನಾವು ಅದನ್ನು ಮಾಡಿದಾಗ, ನಮ್ಮ ಜೀವಿತಗಳಲ್ಲಿ ಯಾವದು ಉತ್ತಮವಾದದ್ದು ಮತ್ತು ಮೆಚ್ಚಿಕೆಯಾದದ್ದು ಮತ್ತು ದೋಷವಿಲ್ಲದ್ದು ಎಂಬುದನ್ನು ತಿಳಿದುಕೊಳ್ಳುವೆವು (ರೋಮಾ 12:1, 2). ನಾವು ಕರ್ತನೆಂದು ಆತನಿಗೆ ಅಧೀನಪಡಿಸಿಕೊಳ್ಳುವಾಗ, ನಮ್ಮ ತಿಳುವಳಿಕೆಯ ಕಣ್ಣುಗಳಿಂದ ಒಂದು ಮುಸುಕು ಎತ್ತಲ್ಪಡುತ್ತದೆ ಮತ್ತು ಮುಂಚೆ ನಮಗೆ ಅರ್ಥವಾಗದ್ದನ್ನು ಶ್ಲಾಘಿಸುತ್ತೇವೆ (2 ಕೊರಿಂಥ

3:14). ಯೆಹೂದಿ ಕ್ರೈಸ್ತರು ಮೋಶೆಯ ಪರವಾಗಿದ್ದ ಪೂರ್ವಕಲ್ಪನೆಯನ್ನು ಕರಗಿ ಹೋಗುವಂತೆ ಅನುಮತಿಸಬೇಕಾಯಿತು; ಆಗ ಮುಸುಕು ತೆಗೆಯಲ್ಪಟ್ಟಿತ್ತು, ಮತ್ತು ಯೇಸುವು ನಿಜವಾಗಿಯೂ ಯಾರಾಗಿದ್ದಾನೆಂಬುದನ್ನು ಕಾಣುವದಕ್ಕೆ ಆರಂಭಿಸಿದ್ದರು.

## "ವಸ್ತ್ರದಂತೆ ಹಳೇವಾಗುವವು" (1:10-12)

ಭೂಮಿಯೆಲ್ಲವು ಹಳೆಯದಾಗುವದು ಮತ್ತು ಒಂದು ದಿನ ಗತಿಸಿ ಹೋಗುವದು. Ray C. Stedman ಹೀಗೆ ಹೇಳುತ್ತಾನೆ, "ಇದು ವಿಜ್ಞಾನಿಗಳು ಕರೆಯುವ ಅಲಭ್ಯಪ್ರಮಾಣ, ಅಥವಾ ದ್ವಿತಿಯ ಉಷ್ಣಬಲ ವಿಜ್ಞಾನ ಎಂಬುದರ ಒಂದು ಆಶ್ಚರ್ಯಕರವಾದ ಕಾವ್ಯಾತ್ಮಕ ಬಣ್ಣನೆಯಾಗಿರುತ್ತದೆ, ಅದು ವಿಶ್ವವನ್ನು ಕ್ಷಿಣಿಸುತ್ತಾ ಹೋಗುತ್ತಿದೆ ಎಂದು ಕಾಣುತ್ತದೆ. ಆದರೆ ಸೃಷ್ಟಿಕರ್ತನು ತನ್ನ ಸ್ವಂತ ಕಟ್ಟಳೆಗಳಿಗೆ ಮೀರಿದವನಾಗಿದ್ದಾನೆ ಮತ್ತು ಸರ್ವಕಾಲಕ್ಕೂ ಮಾರ್ಪಡದೆ ಇರುವವನು."[54] ಇದು ನಿಜವಾದ ವಿಜ್ಞಾನ ಮತ್ತು ಶಾಸ್ತ್ರಗಳ ನಡುವಿನ ಸಾಮರಸ್ಯದ ಕುರಿತ ಒಂದು ಪಾಠಕ್ಕೆ ಅತ್ಯುತ್ತಮವಾದ ತಳಹದಿಯಾಗಿರುತ್ತದೆ.

ಬೇರೆ ಎಲ್ಲವೂ ಮಾರ್ಪಟ್ಟರೂ, ಕ್ರಿಸ್ತನು ಮತ್ತು ಆತನ ಸಂದೇಶವು ಮಾರ್ಪಡುವದಿಲ್ಲ! ನಿತ್ಯನಾದ ಕ್ರಿಸ್ತನು ನಮ್ಮ ಮನೋವೈಜ್ಞಾನಿಕ ಮತ್ತು ಆತ್ಮೀಕ ಅಗತ್ಯತೆಗಳನ್ನು ಪರಿಪೂರ್ಣವಾಗಿ ಸಂಧಿಸಬಲ್ಲನು. ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಆಶ್ಚರ್ಯವಾದ ಪ್ರಗತಿಗಳನ್ನು ಸಾಧಿಸಿದ್ದಾಗ್ಯೂ, ಯೇಸು ಎರಡು ಸಾವಿರ ವರ್ಷಗಳ ಹಿಂದೆ ಅನುಗ್ರಹಿಸಿದ ರಕ್ಷಣೆಯನ್ನುಂಟು ಮಾಡುವ ಸುವಾರ್ತೆಯ ಅಗತ್ಯತೆಯಲ್ಲಿರುವ ಅದೇ ವ್ಯಕ್ತಿಗಳಾಗಿದ್ದೇವೆ. "ದೇವರಿಗೆ ಯಾವದೂ ಆಕಸ್ಮಿಕವಾಗಿರುವದಿಲ್ಲ. ದೇವರಿಂದ ನಿರ್ವಹಿಸುವದಕ್ಕಾಗದಂಥ ಯಾವದೂ ಸಂಭವಿಸುವದಿಲ್ಲ. ಮಾರ್ಪಡಲಾಗದವನು, ಪ್ರಸ್ತುತನು, ಶಾಶ್ವತವಾಗಿ ವರ್ತಮಾನಕಾಲರೂಪದ ದೇವರಾದ ಯೇಸು ಕ್ರಿಸ್ತನು ಜಯವನ್ನು ಮತ್ತು ಆಶೀರ್ವಾದಗಳನ್ನು ತರುವದಕ್ಕಾಗದಂತಹ ಯಾವದೂ ನಮ್ಮ ದಾರಿಯಲ್ಲಿ ಬರುವದಿಲ್ಲ."[55]

## "ನನ್ನ ಬಲಗಡೆಯಲ್ಲು ಕೂತುಕೊಂಡಿರು" (1:13)

ದೇವರು ಎಂದಿಗೂ ಒಬ್ಬ ದೇವದೂತನನ್ನು ತನ್ನ ಬಲಗಡೆಯಲ್ಲಿ ಕೂತುಕೊಳ್ಳುವಂತೆ ಆಹ್ವಾನಿಸಲಿಲ್ಲ. ಯಾವ ದೇವದೂತನಿಗೆ ಎಂದಾದರೂ ಆ ರೀತಿ ಹೇಳಲ್ಪಟ್ಟಿರುವದಿಲ್ಲ, ಯಾಕೆಂದರೆ ಯಾವ ದೇವದೂತನಿಗೂ ಎಂದಾದರೂ ಅಂತಹ ಉದ್ಘೋಷ ಮತ್ತು ಘನತೆಗೇರಿಸಲ್ಪಡುವದಕ್ಕೆ ಯೋಗ್ಯನಾಗಿರಲಿಲ್ಲ. ದೇವದೂತರು ಕ್ರಿಸ್ತನ ಶ್ರೇಷ್ಠ ಪ್ರಕಟನೆ, ಆತನ ವಿಶಿಷ್ಟ ವ್ಯಕ್ತಿತ್ವ, ಆತನ ಪೂರ್ತಿಗೊಳಿಸಲ್ಪಟ್ಟಿರುವ ಕೆಲಸ, ಆತನ ನಿತ್ಯವಾದ ದೇವತ್ವ, ಮತ್ತು ಆತನ ಸರಿಸಾಟಿಯಿಲ್ಲದ ಸಾಧನೆ ಇವುಗಳನ್ನು ಗುರುತಿಸುವಂತಹ ಸಂಭ್ರಮದಿಂದ ಕೂಡಿದ ಜನಸಮೂಹದವರೊಳಗೆ ಸೇರಿದವರಾಗಿದ್ದಾರೆ.

ದೀರ್ಘಕಾಲದ ಹಿಂದೆಯೇ ಪ್ರವಾದನೆಯಲ್ಲಿ ಘೋಷಿಸಲ್ಪಟ್ಟಿದ್ದರೂ, ಬಹುಶಃ ಯೇಸು ತಾನು ಮಹಿಮೆಗೆ ಏರಿಸಲ್ಪಟ್ಟ ಬಳಿಕ ಪರಲೋಕದಲ್ಲಿ ತನ್ನ ಸಿಂಹಾಸನದ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆ ಪರಲೋಕದ ಸಕಲ ಸಮೂಹಗಳ ಪ್ರಯೋಜನಾರ್ಥವಾಗಿ ಆತನ ವಿಶಿಷ್ಟವಾದ ಸ್ಥಾನದ ಬಗ್ಗೆ ಮತ್ತೊಂದಾವರ್ತಿ ಹೇಳಲ್ಪಟ್ಟಿತು. (ನೋಡಿರಿ ದಾನಿಯೇಲ 7:13, 14.) ನಮ್ಮ ಕರ್ತನು ಇಡೀ ವಿಶ್ವದ ಮೇಲೆ ಉನ್ನತವಾಗಿ ಆಳ್ವಿಕೆ ಮಾಡುತ್ತಾನೆಂಬುದಕ್ಕಾಗಿ ನಾವು ಅನುದಿನವೂ ಸಂತೋಷಿಸಬೇಕು.

**ದೇವದೂತರು, ಅದ್ಭುತಗಳು, ಮತ್ತು ಒದಗಿಸಲ್ಪಡುವಿಕೆ (1:14)**

ಹೊಸ ಒಡಂಬಡಿಕೆಯು ಅದ್ಭುತಗಳ ಉಲ್ಲೇಖನಗಳಿಂದ ಹೇರಳವಾಗಿ ತುಂಬಿರುತ್ತವೆ. ಹೇಗೂ, ಇಂದು, ಅಸ್ವಾಭಾವಿಕವಾದ ಮತ್ತು ಅದ್ಭುತವಾದ ಎಲ್ಲಾ ತೋರ್ಪಡಿಸುವಿಕೆಗಳ ಜೊತೆಯಲ್ಲಿ ದೇವದೂತರು ಗೋಚರವಾಗಿ ಕಾರ್ಯ ಮಾಡುವದು ಸಹ ಅಂತ್ಯಗೊಂಡಿರುತ್ತವೆಂಬುದು ಸ್ಪಷ್ಟವಾಗಿರುತ್ತದೆ. ಶಾಸ್ತ್ರಗಳು ಸಂಪೂರ್ಣವಾಗಿದ್ದು, ಅದ್ಭುತಗಳಿಂದ ಪೂರ್ಣವಾಗಿ ದೃಢೀಕರಿಸಲ್ಪಟ್ಟಿರುತ್ತವೆ (ಇಬ್ರಿಯ 2:1-4). ಅದ್ಭುತಗಳು ನಿಂತುಹೋಗಿದ್ದು ಪ್ರಕಟನೆಯು ಅಂತ್ಯಗೊಂಡಿದ್ದರ ಸ್ವಭಾವಿಕವಾದ ಪರಿಣಾಮವಾಗಿತ್ತು, ಯಾಕೆಂದರೆ ಈಗ ಯಾವದೇ ಹೊಸ ಶಾಸ್ತ್ರವು ಬರೆಯಲ್ಪಡುತ್ತಿರುವದಿಲ್ಲ. ಹೊಸ ಪ್ರಕಟನೆಗಳು ಮತ್ತು ಅದ್ಭುತಗಳು ಯಾವಾಗಲೂ ಜೊತೆಜೊತೆಯಾಗಿಯೇ ಸಾಗುತ್ತಿದ್ದವು. ದೇವರು ಇಂದು ಹೊಸ ಪ್ರಕಟನೆಯನ್ನು ಕೊಡುತ್ತಿರುವದೇ ಆದಲ್ಲಿ, ಅದ್ಭುತಗಳು ಒಂದು ನಿಯತವಾಗಿ ನಡೆಯುವ ಸಂಭವಗಳಾಗಿರತಕ್ಕವುಗಳು ಮತ್ತು ಆಗಿರುತ್ತಿದ್ದವು.

ಸಮಸ್ಯೆಯು ಏನೆಂದರೆ ಅನೇಕರು “ಅದ್ಭುತ” ಎಂದರೇನೆಂದು ಸೂಕ್ತವಾಗಿ ಅರ್ಥನಿರೂಪಣೆ ಮಾಡುವದಿಲ್ಲ. ಬೈಬಲ್ ಪ್ರಕಾರವಾಗಿ, ಒಂದು ಅದ್ಭುತವು ಯಾವಾಗಲೂ ದೇವರ ಶಕ್ತಿಯನ್ನು ಸ್ಪಷ್ಟವಾಗಿ ತೋರ್ಪಡಿಸುವಂತಹ ಅಸ್ವಾಭಾವಿಕವಾದ ಕ್ರಿಯೆಯಾಗಿರುತ್ತದೆ. ಒಂದು ಸೂರ್ಯನು ಪಶ್ಚಿಮದಲ್ಲಿ ಉದಯಿಸುವದಾದರೆ, ಅದೊಂದು ಅದ್ಭುತವಾಗುವದು ಯಾಕೆಂದರೆ ಅದು ಸ್ವಾಭಾವಿಕ ನಿಯಮಕ್ಕೆ ತದ್ವಿರುದ್ಧವಾದದ್ದು. ಯೇಸು ನೀರನ್ನು ತಕ್ಷಣದಲ್ಲೇ ದ್ರಾಕ್ಷಾರಸವನ್ನಾಗಿ ಮಾರ್ಪಡಿಸುವ ಮೂಲಕ ಒಂದು ಅದ್ಭುತವನ್ನು ಮಾಡಿದನು (ಯೋಹಾನ 2:11). ನಾವು ಬೈಬಲ್ ಘಟನೆಗಳನ್ನು ಅದ್ಭುತಗಳೆಂದು ವರ್ಣಿಸುವದರಲ್ಲಿ ಸಹ ಎಚ್ಚರಿಕೆಯಿಂದಿರತಕ್ಕದ್ದು. ಒಂದು ಘಟನೆಯು ದೇವರಿಂದ ನೇರವಾದ ಹಸ್ತಕ್ಷೇಪಕ್ಕೆ ಸಂಬಂಧಿಸಿದ್ದಲ್ಲವಾದರೆ, ಅದು ಅದ್ಭುತಕರವೆಂಬುದಕ್ಕಿಂತಲೂ ಒದಗಿಸುವಿಕೆಯಾಗಿರಬಹುದಾಗಿದೆ.

ಉದಾಹರಣೆಗೆ, ಯೋಸೇಫನು ಕನಸುಗಳ ಅರ್ಥವನ್ನು ಹೇಳುವದಕ್ಕೆ ಶಕ್ತನಾಗಿದ್ದನು, ಅದನ್ನು ಆತನು ದೇವರ ನೇರವಾದ ಹಸ್ತಕ್ಷೇಪವಿಲ್ಲದೆ ಮಾಡಿರಲಿಕ್ಕೆ ಸಾಧ್ಯವಿರಲಿಲ್ಲ (ಆದಿಕಾಂಡ 40; 41). ಅಂಥ ಪ್ರಕಟನೆಯು ಅದ್ಭುತಕರವಾಗಿರಲೇ ಬೇಕು. ಮುಖ್ಯಪಾನದಾಯಕನು ಯೋಸೇಫನ ಬಗ್ಗೆ ಮರೆತು ಹೋಗಿ ಅನಂತರದಲ್ಲಿ ಪುನಃ ಜ್ಞಾಪಿಸಿಕೊಂಡಿದ್ದು ಒಂದು ಅದ್ಭುತವೋ? (ನೋಡಿರಿ ಆದಿಕಾಂಡ 40:23). ಐಗುಪ್ತ್ಯದಲ್ಲಿ ನಡೆದ ಘಟನೆಗಳ ಇಡೀ ಸರಣಿಯು ಪಾನದಾಯಕನ ಮರೆವು ಮೇಲೆ ನೇತಾಡುವವುಗಳಾಗಿದ್ದವು. ಒಬ್ಬನು ತನಗೆ ಜೀವವನ್ನು ಮತ್ತು ಸ್ವಾತಂತ್ರ್ಯವನ್ನು ಕೊಟ್ಟ ಪ್ರವಾದನೆಯನ್ನು ಹೇಗೆ ಮರೆತು ಹೋಗಲು ಸಾಧ್ಯ? ಅಂಥ ಕಾರ್ಯವೊಂದು ದೇವರಿಂದಲೇ ಮಾಡಲ್ಪಟ್ಟಿರಬೇಕು. ನಾನು ದಿನಾಲೂ ಕಾರ್ಯಗಳನ್ನು ಮರೆತು ಹೋಗುತ್ತೇನೆ, ಆದರೆ ಜ್ಞಾಪಕದಲ್ಲಿಟ್ಟುಕೊಳ್ಳುವದರಲ್ಲಾದ ಅಚಾತುರ್ಯಗಳು ಅದ್ಭುತಗಳಾಗಿದ್ದವೋ? ಫಿಲಿಪ್ಪನ ಸಂಗಡ ಒಬ್ಬ ದೇವದೂತನು ಮಾತಾಡಿದನು (ಅಪೊಸ್ತಲರ ಕೃತ್ಯಗಳು 8:26) ಮತ್ತು ಆತನು ಮುಂದಕ್ಕೆ ಹೋಗಬೇಕೆಂದು ಹೇಳಿದನು, ಅದು ಖಂಡಿತವಾಗಿಯೂ ಒಂದು ಅದ್ಭುತವಾಗಿತ್ತು ಹೊರತು ಕೇವಲ ಒಂದು ಭಾವ ಆಗಿರಲಿಲ್ಲ. ಹೇಗೂ, ಫಿಲಿಪ್ಪಿನು ಗಾಜಕ್ಕೆ ಹೋಗುವ ದಾರಿಯ ತನಕ ನಡೆದು ಸಾಗಬೇಕಿತ್ತು. ಆತನು ಒಬ್ಬ ಮನುಷ್ಯನು ಯೆಶಾಯನ ಪುಸ್ತಕದಿಂದ ಓದುವದನ್ನು ಕೇಳಿಸಿಕೊಳ್ಳುವದಕ್ಕೆ ಸಾಧ್ಯವಾಗುವಂತೆ ತಕ್ಕ ಸಮಯದಲ್ಲಿ ಅಲ್ಲಿಗೆ ಬಂದನು (ಅಪೊಸ್ತಲರ ಕೃತ್ಯಗಳು 8:27-39). ಆತನು ಸರಿಯಾದ ಸಮಯದಲ್ಲಿ ನಿಖರವಾಗಿ ಅಲ್ಲಿಗೆ ಬರುವದು ಅದ್ಭುತವಾಗಿತ್ತೋ ಅಥವಾ

ಒದಗಿಸಲ್ಪಡುವಿಕೆ (ದೈವಾನುಗ್ರಹ) ಆಗಿತ್ತೋ? ಫಿಲಿಪ್ಪನಾಗಲಿ ಐಥಿಯೋಪ್ಯದವನಾಗಲಿ ದೇವದೂತನಿಂದ ಎತ್ತಿಕೊಂಡು ಬರಲ್ಪಟ್ಟು ದಾರಿಯಲ್ಲಿ ಸಾಗಲಿಲ್ಲ, ಅದು ಒಂದು ಅದ್ಭುತವಾಗಿರಬಹುದಾಗಿತ್ತು.

ಶಾಸ್ತ್ರಗಳಲ್ಲಿ ಒಂದು ಅದ್ಭುತವನ್ನು ಮಾನವಾತೀತವಾದ ಕ್ರಿಯೆಯನ್ನು ಸ್ಪಷ್ಟವಾಗಿ ತೋರ್ಪಡಿಸುವಂತಹ ದೈವಿಕ ಕಾರ್ಯವನ್ನೊಳಗೊಂಡು ಇರುವದಾಗಿದ್ದು ಅದನ್ನು ಯಾರೊಬ್ಬರೂ ನಿರಾಕರಿಸುತ್ತಿರಲಿಲ್ಲ (ಯೋಹಾನ 9:16, 17, 24-33). ಯೇಸುವಿನ ವೈರಿಗಳು ಸಹ ಆತನು ಮಾಡಿದ ಅದ್ಭುತಗಳನ್ನು ಅಲ್ಲಗಳೆಯುವದಕ್ಕಾಗಲಿಲ್ಲ. ವೈಜ್ಞಾನಿಕ ಸಮುದಾಯವು ನಮ್ಮ ದಿನಗಳಲ್ಲಿ ನಡೆಯುವ ಅದ್ಭುತಗಳಿಗೆ ಅನೇಕ ಸಾರಿ ಸ್ವಾಭಾವಿಕವಾದ ವಿವರಣೆಗಳನ್ನು ಸೂತ್ರೀಕರಿಸುತ್ತದೆ. ಸ್ವಭಾವಿಕವಾದ ವಿವರಣೆಯು ತಾರ್ಕಿಕ ಹಾಗೂ ಸರಿಯೆಂದು ತೋರುವದಾಗಿದ್ದರೆ, ಒಂದು ಘಟನೆಯನ್ನು ಅದ್ಭುತವೆಂದು ಹೇಳಿಕೊಳ್ಳುವದು ಮೂರ್ಖತನವಾಗುತ್ತದೆ. ಕೆಲವು ಕಾರ್ಯಗಳನ್ನು ಈಗಿನ ಸ್ವಾಭಾವಿಕವಾದ ವಿಜ್ಞಾನದಿಂದ ವಿವರಿಸುವದಕ್ಕಾಗುವದಿಲ್ಲ, ಆದರೆ ಭವಿಷ್ಯದಲ್ಲಿ ಅವುಗಳು ಇರುವದಿಲ್ಲ ಎಂಬುದು ಇದರ ಅರ್ಥವಲ್ಲ. ಬೈಬಲ್ ಅದ್ಭುತಗಳು – ಅಥವಾ "ಸೂಚಕಕಾರ್ಯಗಳು" ಅಥವಾ "ಮಹತ್ಕಾರ್ಯಗಳು" – ಹಾಗೆ ವಿವರಿಸಲ್ಪಡುವದಕ್ಕೆ ಸಾಧ್ಯವಿಲ್ಲ.

### "ದೇವದೂತರು" ಕಾಣಿಸಿಕೊಳ್ಳುವಿಕೆ

ಒಂದು ಗುಂಪು ಜನರು ತಾವು "ದೇವದೂತರ" ಕಾಣಿಸಿಕೊಳ್ಳುವಿಕೆಗಳನ್ನು ಕಂಡಿದ್ದೇವೆ ಅಥವಾ ಒಬ್ಬ ದೇವದೂತನಿಂದ ಸಹಾಯವನ್ನು ಅನುಭವಿಸಿದ್ದೇವೆಂದು ಹೇಳಿಕೊಳ್ಳುತ್ತಾರೆ. ನಾವು ಉಪಾಖ್ಯಾನದ ಪುರಾವೆಗಳನ್ನು ನಂಬಬಹುದೋ? ಇಲ್ಲ, ನಮ್ಮ ನಂಬಿಕೆಯು ದೈವಿಕ ಪ್ರಕಟನೆಗಳಲ್ಲಿ ನೆಲೆಸಿರುತ್ತದೆ (ರೋಮಾ 10:17) ಮತ್ತು ಹೊರತು ಮಾನವ ಕಲ್ಪನೆಗಳಲ್ಲಿ ಅಲ್ಲ. ದುರಂತವೇನೆಂದರೆ ಕೆಲವರು, ತಾವು ದೇವದೂತನ ಪ್ರಸನ್ನತೆಯ ಅನುಭವ ಹೊಂದಿದ್ದೇವೆಂದು ಯೋಚಿಸುವವರಾಗಿ, ತಮ್ಮ ರಕ್ಷಣೆಗೆ ಪುರಾವೆಯೆಂಬಂತೆ ಆ "ಅನುಭವ"ದ ಮೇಲೆ ಅವಲಂಬಿತರಾಗುತ್ತಾರೆ. ದೇವದೂತರು ಯಾವಾಗಲೂ ಹಿನ್ನಲೆಯಲ್ಲಿರುವರು, ಆದರೆ ದೇವರ ಮಗನಿಗೆ ಹೋಲಿಸಿದರೆ ಅವರು ಮಹತ್ವವಿಲ್ಲದವರು. ಅವರು ಸ್ವಲ್ಪ ಕಾಲ ಮಾತ್ರವೇ ಮುಂದುಗಡೆಗೆ ಬರುತ್ತಾರೆ, ಆದರೆ ಯೇಸುವು ನಮ್ಮ ರಕ್ಷಣೆಗೆ ಮೂಲನಾಗಿದ್ದಾನೆ ಮತ್ತು ಯಾವಾಗಲೂ ಇರುವನು.

---

### ಅಡಿಟಿಪ್ಪಣಿಗಳು

[1]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 450. [2]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 48. [3]Apocryphaದಲ್ಲಿನ 1 Maccabeesದಂತಹ ಕೆಲವು ಪುಸ್ತಕಗಳು ಐತಿಹಾಸಿಕ ಮಹತ್ವವನ್ನು ಹೊಂದಿವೆ; ಆದರೆ ಅವುಗಳು "ಶಾಸ್ತ್ರಗಳು" ಎಂಬ ಪದಕ್ಕೆ ಯೋಗ್ಯವಾದವುಗಳಲ್ಲ. [4]Thomas G. Long, *Hebrews*, Interpretation (Louisville: John Knox Press, 1997), 8. [5]Brooke Foss Westcott, *The Epistle to the Hebrews*: *The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 4. [6]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm.

B. Eerdmans Publishing Co., 1964), 3. [7]Jack P. Lewis, "Hebrews 1:1–4: Christ the Prophet, Priest and King," in *Great Texts of the Bible Revisited: Faulkner University Lectures*, ed. M. Floyd Bailey, Mark A. Howell, and Allen Webster (Montgomery, Ala.: Faulkner University, 1993): 332. [8]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 37. [9]Ibid. [10]Bruce, 3.

[11]Hugo McCord, *McCord's New Testament Translation of the Everlasting Gospel* (Henderson, Tenn.: Freed-Hardeman University, 1988). ಈ ಅನುವಾದವು ಈಗ "Freed-Hardeman" ಅನುವಾದ ಎಂದು ಕರೆಯಲ್ಪಡುತ್ತದೆ. [12]ಪೌಲನು "ಬೀಜ"ದ ಭಾವನೆಯ ಕುರಿತುಗಲಾತ್ಯ 3:16, 19-29ರಲ್ಲಿ ವಿವರಿಸಿದನು. [13]Warren W. Wiersbe, *Be Confident: An Expository Study of the Epistle to the Hebrews* (Wheaton, Ill.: Victor Books, 1982), 18. [14]Milligan, 52-54. [15]Simon J. Kistemaker, *Exposition of the Epistle to the Hebrews*, New Testament Commentary (Grand Rapids, Mich.: Baker Book House, 1984), 28, n. 3. [16]Lewis, 332. [17]Bruce, 4. ಸಂಕೀರ್ತನೆಗಳನ್ನು ಸಮಧುರಗೊಳಿಸುವ ಪದಗಳಿಂದ ಗುರುತಿಸುವ ಯೋಚನೆಯ ಕುರಿತು ಇತ್ತೀಚಿನ ಅಧ್ಯಯನಗಳು ಸಂಶಯವನ್ನು ವ್ಯಕ್ತಪಡಿಸಿರುತ್ತವೆ. [18]ಲೋಹಗಳನ್ನು ಬಯಸುವ ಆಕಾರಗಳನ್ನಾಗಿ ರೂಪಿಸುವ ವಿಧಾನವನ್ನು "ಠಸ್ಸೆ" ಎಂದು ಕರೆಯುತ್ತಾರೆ. ಇಲ್ಲಿ ವಾಕ್ಸರಣಿಯ ಮೂಲ ಅರ್ಥವು ಇದೇ ಆಗಿರುತ್ತದೆ. [19]Theodore of Mopsuestia *Commentary on John*; quoted in Hughes, 44, n. 21. [20]Hughes, 41.

[21]"ದೃಷ್ಟಾಂತವು [ನಿಖರವಾಗಿ ಅನ್ವಗೊಳಿಸುವದಕ್ಕೆ] ಸಾಧ್ಯವಿಲ್ಲ, ಯಾಕೆಂದರೆ ಇದನ್ನು ಒಂದು ಮುದ್ರೆಯು ತಾನು ಸೃಷ್ಟಿಸುವ ಛಾಪಿನಿಂದ ದೂರಗೊಳ್ಳುವ ರೀತಿಯಲ್ಲಿ ಮಗನು ತಂದೆಯಿಂದ ದೂರವಾಗಿರುತ್ತಾನೆಂಬದಾಗಿ ಭಾವಿಸಿಕೊಳ್ಳಬಾರದು" (Donald Guthrie, *The Letter to the Hebrews: An Introduction and Commentary*, The Tyndale New Testament Commentaries [Grand Rapids, Mich.: Wm. B. Eerdmans Publishing Co., 1983], 66). [22]Bruce, 6. [23]Ibid., 8. [24]This concept is also indicated in Josephus *Antiquities* 15.5.3.136. [25]Lewis, 335; T. B. *Hagiagah* 12b; *T. Levi* 3.4-6. [26]1QS 9:9–11. (This refers to a scroll found in Cave 1 at Qumran.) [27]Guthrie, 73. [28]"Midrash" (*darash*ದಿಂದ ಬಂದದ್ದು, "ಅರ್ಥನಿರೂಪಣೆ") ಎಂಬುದು ಶಾಸ್ತ್ರಗಳ ಕುರಿತು ಯೆಹೂದಿ ವಿವರಣಾತ್ಮಕತೆ ಮತ್ತು ಭಾಷ್ಯಕ್ಕೆ ಅನ್ವಯಿಸುವ ಪದವಾಗಿರುತ್ತದೆ. [29]Neil R. Lightfoot*, Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 64; Lightfoot was speaking of C. H. Dodd, *According to the Scriptures: The Sub-Structure of New Testament Theology* (New York: Charles Scribner's Sons, 1953), 61-110. [30]Lightfoot, 64-65; Lightfoot cited R. V. G. Tasker, *The Old Testament in the New Testament* (London: SCM Press, 1954), 15.

[31]George B. Caird, "The Exegetical Method of the Epistle to the Hebrews," *Canadian Journal of Theology* 5 (January 1959): 45. [32]Bruce, 16, n. 76; Hughes, 59. [33]Guthrie, 74. [34]Bruce, 15. [35]Ray C. Stedman, *Hebrews*, The IVP New Testament Commentary Series (Downers Grove, Ill.: InterVarsity Press, 1992), 28. [36]Wiersbe, 22-23. ಇದು ಸೊಲೊಮೋನನ ಕುರಿತು ಹೇಳಿಲ್ಪಟ್ಟಿದ್ದರೂ, ಅಂತಿಮವಾದ ಅನ್ವಯಿಸುವಿಕೆಯು ಯೇಸು ಕ್ರಿಸ್ತನಿಗೆ ಆಗಿರುತ್ತದೆ ಎಂದು Wiersbe ಹೇಳುತ್ತಾನೆ. Lightfoot ಹೀಗೆ ಹೇಳಿದನು, "ಇದು ಅತ್ಯುನ್ನತ ವ್ಯವಸ್ಥೆಯ ಪೂರ್ವ-ಅಸ್ತಿತ್ವ ಮತ್ತು ವರ್ಗವನ್ನು ಸೂಚಿಸುತ್ತದೆ" (Lightfoot, 67). [37]Lightfoot, 60. [38]R. C. H. Lenski, *The Interpretation of the Epistle to the Hebrews and of the Epistle of James* (Columbus, Ohio: Wartburg Press, 1946), 51. [39]Guthrie, 76. [40]Kistemaker, 42.

[41]James Thompson, *The Letter to the Hebrews,* The Living Word Commentary (Austin, Tex.: R. B. Sweet Co., 1971), 32. [42]George Wesley Buchanan, *To the Hebrews: Translation, Comment, and Conclusions*, The Anchor Bible, vol. 36 (Garden City, N.Y.: Doubleday, 1972), 20. [43]Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 194, 199. [44]Kistemaker, 43. [45]Bruce, 19. [46]Hughes, 64. [47]Bruce, 24. [48]Thomas Hewitt, *The Epistle to the Hebrews*: *An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 60. [49]Thompson gave as examples *Enoch* 15:6; *Jubilees* 2:2; 15:31. (Thompson, 34.) [50]James Burton Coffman, *Commentary on Hebrews* (Austin, Tex.: Firm Foundation Publishing House, 1971), 17.

[51]Donald A. Hagner, *Encountering the Book of Hebrews*: *An Exposition*, Encountering Biblical Studies (Grand Rapids, Mich.: Baker Academic, 2002), 31. [52]Raymond Brown, *The Message of Hebrews: Christ Above All,* The Bible Speaks Today (Downers Grove, Ill.: Inter-Varsity Press, 1982), 35. [53]Guthrie, 71. [54]Stedman, 31. [55]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 30.